ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಹಾಸ್ಟೆಲ್ ವಾರ್ಡನ್ ಮತ್ತು ಕಟ್ಟದ ಮಾಲೀಕನ ನಿರ್ಲಕ್ಷ್ಯಕ್ಕೆ ಕಮರಿದ ಎಳೆ ಜೀವಗಳು



ಸಂಪುಟ 13 | ಸಂಚಿಕೆ 35 | ಆಗಸ್ಟ್ 26–ಸೆಪ್ಟೆಂಬರ್ 1, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಜಮ್ಮು ಮತ್ತು ಕಾಶ್ಮೀರ : ಬಂಧಿತರ ಬಿಡುಗಡೆಗೆ ಪ್ರತಿಪಕ್ಷಗಳ ಆಗ್ರಹ



ಕೊಚ್ಚಿಹೋದ ಮಲೆಕುಡಿಯರ ನೆಲೆಗಳು



ಹಾಸ್ಟೆಲ್ ಹೊರಗುತ್ತಿಗೆ ಸಿಬ್ಬಂದಿಗೆ ಮುಖ್ಯಮಂತ್ರಿ ಭರವಸೆ



BISFF '19

AUG 15 - 18, 2019

ಬೆಂಗಳೂರಿನಲ್ಲಿ ಕಿರುಚಿತ್ರೋತ್ಸವ 2019

ರಕ್ಷಣಾ ವಲಯದ ನೌಕರರ ಐತಿಹಾಸಿಕ 30 ದಿನಗಳ ಮುಷ್ಕರ ಆರಂಭ– ಸಿಐಟಿಯು ಅಭಿವಂದನೆ

"ಬಿಜೆಪಿ ಸರಕಾರದ ಅಜೆಂಡಾದಲ್ಲಿ ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗಳಿಗೇ ಅಗ್ರಸ್ಥಾನ ಎಂದು ಮತ್ತೊಮ್ಮೆ ಸಾಬೀತು"

ದೇಶಾದ್ಯಂತದ 41 ಶಸ್ತ್ರಾಸ್ತ್ರ ತಯಾರಿಕಾ (ಆರ್ಡನೆನ್ಸ್) ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ 82000 ಕ್ಕೂ ಹೆಚ್ಚು ರಕ್ಷಣಾ ವಲಯದ ಮಿಲಿಟರಿಯೇತರ ನೌಕರರು ಮತ್ತು ಈ ಕಾರ್ಖಾನೆಗಳಿಗೆ ಜೋಡಿಸಿರುವ 'ಗುಣಮಟ್ಟ ಖಾತ್ರಿ ಮಹಾನಿರ್ದೇಶಕರ ಕಚೇರಿ' (ಡಿಜಿಕ್ಯುಎ) ನೌಕರರು ಶಸ್ತ್ರಾಸ್ತ್ರ ಕಾಖಾನೆಗಳ ಕಾರ್ಪೊರೇಟೀಕರಣದ ವಿರುದ್ಧ ಆಗಸ್ಟ್ 20ರಿಂದ 30 ದಿನಗಳ ಮುಷ್ಕರ ಆರಂಭಿಸಿದ್ದಾರೆ. ಈ ಐತಿಹಾಸಿ ಕಾರ್ಯಾಚರಣೆಗೆ ಇಳಿದಿರುವ ಅವರಿಗೆ ಸಿಐಟಿಯು ಅಭಿವಂದನೆ ಸಲ್ಲಿಸಿದೆ.

ಅಧಿಕಾರಕ್ಕೆ ಬಂದ ಸರಕಾರಗಳ ರಕ್ಷಣಾ ಮಂತ್ರಿಗಳು ಎಲ್ಲರೂ ಸತತವಾಗಿ ಮತ್ತು 2015 ರ ಮಾರ್ಚ್‌ನಲ್ಲಿ ಸಂಸತ್ತಿನಲ್ಲಿ, ಮೋದಿ–1 ಆಡಳಿತದ ಅವಧಿಯಲ್ಲಿ, ಆರ್ಡನೆನ್ಸ್ ಕಾರ್ಖಾನೆಗಳ ಕಾರ್ಪೊರೇಟೀಕರಣ ಮಾಡುವುದಿಲ್ಲ ಎಂದು ನೀಡಿದ್ದ ದೃಢ ಆಶ್ವಾಸನೆಯ ಹೊರತಾಗಿಯೂ, ಮೋದಿ 2 ಸರ್ಕಾರವು ಇವನ್ನು ಕಾರ್ಪೊರೇಟ್‌ಗಳಾಗಿ ಮಾಡಲು ನಿರ್ಧರಿಸಿದೆ, ಈ ಮೂಲಕ ಭವಿಷ್ಯದಲ್ಲಿ ಅವುಗಳ ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತಿದೆ.

'ರಾಷ್ಟ್ರವಾದ'ದ ಘೋಷಣೆಯ ಮೇಲೆ ಪ್ರಚಾರ ಮಾಡಿದ ಬಿಜೆಪಿ ಮತ್ತು ಮೋದಿಗೆ 100% ಎಫ್‌ಡಿಐಗೆ ಅವಕಾಶ ನೀಡುವುದು ಸೇರಿದಂತೆ ರಕ್ಷಣಾ ವಲಯವನ್ನು ಖಾಸಗೀಕರಣಗೊಳಿಸುವ ಮೂಲಕ ನಮ್ಮ ರಾಷ್ಟ್ರೀಯ ಭದ್ರತೆಯನ್ನು ವಿದೇಶಿ ಕಂಪನಿಗಳೂ ಸೇರಿದಂತೆ ಲಾಭದ ದುರಾಸೆಯ ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡಿಸುವಲ್ಲಿ ಯಾವುದೇ ಮುಜುಗರವಾಗುತ್ತಿಲ್ಲ ಎಂಬುದು ವಿಪರ್ಯಾಸ. ಭಾರತದ ರಕ್ಷಣೆಯ 4 ನೇ ಶಕ್ತಿಯೆಂದು ಪರಿಗಣಿಸಲ್ಪಡುವ ಶಸ್ತ್ರಾಸ್ತ್ರ ಕಾರ್ಖಾನೆಗಳು ಕಾರ್ಗಿಲ್ ಯುದ್ಧದ ಸಮಯದಲ್ಲಿ ಮತ್ತು ಭಾರತದ ಮಿಂಚಿನ ಪ್ರಹಾರಗಳು ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ನಮ್ಮ ಪಡೆಗಳಿಗೆ ಸಮಯಕ್ಕೆ ಸರಿಯಾಗಿ ಮತ್ತು ಗುಣಮಟ್ಟದ ಸರಬರಾಜುಗಳನ್ನು ಖಾತ್ರಿಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವರು ಹಗಲು ರಾತ್ರಿ ದುಡಿದು ನಮ್ಮ ಸೈನ್ಯಕ್ಕೆ ಸರಬರಾಜುಗಳನ್ನು ಖಚಿತಪಡಿಸಲು ಒಂದೇ ಒಂದು ಪೈಸಾ ಓವರ್ ಟೈಂ ಹಣ ತೆಗೆದುಕೊಳ್ಳದೆ ಕೆಲಸ ಮಾಡಿದ್ದಾರೆ. ತಮ್ಮ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದ ಮೂಲಕ, ಈ ಕಾರ್ಮಿಕರು ಮತ್ತು ನೌಕರರು ರಾಷ್ಟ್ರದ ಬಗೆಗಿನ ತಮ್ಮ ಬದ್ಧತೆಯನ್ನು ಸಾಬೀತುಪಡಿಸಿದ್ದಾರೆ, ಆದರೆ ಬಿಜೆಪಿ ಸರ್ಕಾರ ರಾಷ್ಟ್ರೀಯ ಭದ್ರತೆಯನ್ನು ಒತ್ತೆಯಿಡಲು ಪ್ರಯತ್ನಿಸುತ್ತಿದೆ.

ಮೊದಲ ದಿನ, ಆಗಸ್ಟ್ 20ರಂದು ಮುಷ್ಕರವು ದೇಶಾದ್ಯಂತ ಸಂಪೂರ್ಣವಾಗಿತ್ತು. ಗ್ರೂಪ್ ಎ ಅಧಿಕಾರಿಗಳು ಮತ್ತು ವಿನಾಯಿತಿ ಪಡೆದ ಅಗತ್ಯ ಕರ್ತವ್ಯದಲ್ಲಿರುವವರು ಮಾತ್ರ ಕೆಲಸಕ್ಕೆ ಸೇರಿದರು. ಅನೇಕ ಸ್ಥಳಗಳಲ್ಲಿ ಅವರು ಹಾಜರಾತಿಗೆ ಸಹಿ ಮಾಡದೆ ಕೆಲಸ ಮಾಡುತ್ತಿದ್ದರು. ಸಿ.ಡಿ.ಆರ್.ಎ. (ಕಾನ್–ಫೆಡರೇಶನ್ ಆಫ್ ಡಿಫೆನ್ಸ್ ರೆಕಗ್ನೈಸ್ಡ್ ಅಸೋಸಿಯೇಷನ್ಸ್) ಮುಷ್ಕರ ನೋಟಿಸ್ ನೀಡದಿದ್ದರೂ, ಅವರು ಸಂಪೂರ್ಣವಾಗಿ ಮುಷ್ಕರ ನಿರತ ನೌಕರರೊಂದಿಗೆ ಉಳಿದಿದ್ದರು. ಅನೇಕ ಸ್ಥಳಗಳಲ್ಲಿ ಸಿಐಟಿಯು ಕಾರ್ಯಕರ್ತರು ಸೇರಿದಂತೆ ಕೇಂದ್ರೀಯ ಕಾರ್ಮಿಕ ಸಂಘಗಳು ರ್‍ಯಾಲಿಗಳು, ಬೀದಿ ಮೂಲೆಯ ಸಭೆಗಳು, ಮತಪ್ರದರ್ಶನಗಳು ಇತ್ಯಾದಿಗಳ ಮೂಲಕ ಸಕ್ರಿಯವಾಗಿ ಬೆಂಬಲಿಸಿವೆ.ಬ್ಯಾಂಖ್ ನೌಕರರು, ಕೇಂದ್ರ ಸರಕಾರೀ ನೌಕರರು ಮುಂತಾದ ತರ ನೌಕರರೂ ಮುಷ್ಕರನಿರತರೊಂದಿಗೆ ಸೌಹಾರ್ದ ವ್ಯಕ್ತಪಡಿಸಿದ್ದಾರೆ.

ಶಸ್ತ್ರಾಸ್ತ್ರ ಕಾರ್ಖಾನೆಗಳನ್ನು ಕಾರ್ಪೊರೇಟ್ ಗಳಾಗಿ ಮಾಡಿ ಅವುಗಳ ಖಾಸಗೀಕರಣಕ್ಕೆ ದಾರಿ ಮಾಡಿಕೊಡುವ ಮೂಲಕ ಬಿಜೆಪಿ ಸರ್ಕಾರವು ಅದರ ಕಾರ್ಯಸೂಚಿಯಲ್ಲಿ ಅಗ್ರಸ್ಥಾನದಲ್ಲಿರುವುದು ಕಾರ್ಪೊರೇಟ್ ಹಿತಾಸಕ್ತಿಗಳೇ ವಿನಹ ರಾಷ್ಟ್ರೀಯ ಹಿತಾಸಕ್ತಿಗಳಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಮತ್ತೊಂದೆಡೆ, ದೇಶಾದ್ಯಂತ ತಮ್ಮ ಸಂಪೂರ್ಣ ಮುಷ್ಕರದ ಮೂಲಕ, ಶಸ್ತ್ರಾಸ್ತ್ರ ಕಾರ್ಖಾನೆಗಳಲ್ಲಿನ ರಕ್ಷಣಾ ವಲಯದ ಸಿವಿಲಿಯನ್ ನೌಕರರು ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡಲು ಬಿಡುವುದಿಲ್ಲ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ, ರಾಷ್ಟ್ರ ಮತ್ತು ದೇಶವನ್ನು ರಕ್ಷಿಸುವಲ್ಲಿ ಕಾರ್ಮಿಕರೇ ಮುಂಚೂಣಿಯಲ್ಲಿರುವವರು ಕಾರ್ಮಿಕರೇ ಎಂದು ಅವರು ತೋರಿಸಿಕೊಟ್ಟಿದ್ದಾರೆ ಎಂದಿರುವ ಸಿಐಟಿಯು ರಕ್ಷಣಾ ವಲಯದ ನೌಕರರನ್ನು ಅಭಿನಂದಿಸಿದೆ ಮತ್ತು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಸಾಧಿಸುವವರೆಗೆ ಅವರ ಹೋರಾಟಕ್ಕೆ ಸಂಪೂರ್ಣ ಬೆಂಬಲದ ಆಶ್ವಾಸನೆ ನೀಡಿದೆ. ಅವರಿಗೆ ಎಲ್ಲಾ ರೀತಿಯ ಸಹಾಯ, ನೆರವು ಮತ್ತು ಸೌಹಾರ್ದವನ್ನು ನೀಡಬೇಕೆಂದು ಸಿಐಟಿಯು ತನ್ನ ಎಲ್ಲಾ ಸಂಯೋಜಿತ ಸಂಘಗಳು ಮತ್ತು ಒಕ್ಕೂಟಗಳಿಗೆ ಕರೆ ನೀಡಿದೆ. ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಹೋರಾಡುತ್ತಿರುವ ರಕ್ಷಣಾ ವಲಯದ ನೌಕರರ ಹೋರಾಟವನ್ನು ಬೆಂಬಲಿಸುವಂತೆ ಜನಸಾಮಾನ್ಯರಿಗೂ ಅದು ಕರೆ ನೀಡಿದೆ.



ಗುರು ರವಿದಾಸ್ ಮಂದಿರದ ಪುನರ್ನಿರ್ಮಾಣವಾಗಬೇಕು–ನಗರಾಭಿವೃದ್ಧಿ ಮಂತ್ರಿಗೆ ಬೃಂದಾ ಕಾರಟ್ ಪತ್ರ

"ರಾಮಮಂದಿರ ನಿರ್ಮಾಣ ಮತ್ತು ರವಿದಾಸ ಮಂದಿರ ಧ್ವಂಸ– 'ಜನರ ನಂಬಿಕೆ'ಯ ಪ್ರಶ್ನೆಯಲ್ಲಿ ಇಬ್ಬಂದಿತನ"



ದಿಲ್ಲಿಯ ಒಂದು ಬಡಾವಣೆ, ತುಘಲಕಾಬಾದ್‌ನ ಅರಣ್ಯ ಪ್ರದೇಶದಲ್ಲಿದ್ದ ಗುರು ರವಿದಾಸ್ ಮಂದಿರ ಮತ್ತು ನಾಲ್ಕು ಸಮಾಧಿಗಳನ್ನು ಧ್ವಂಸ ಮಾಡಿರುವ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಇದು ಮುಖ್ಯವಾಗಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಜನಗಳು ದರ್ಶನಕ್ಕೆ ಬರುವ ಮಂದಿರ ಎಂಬುದು ಗಮನಾರ್ಹ. ಈ ಪ್ರದೇಶಕ್ಕೆ ಸಿಪಿಐ(ಎಂ)ನ ದಿಲ್ಲಿ ರಾಜ್ಯ ಮುಖಂಡರು ಮತ್ತು ದಲಿತ ಶೋಷಣ ಮುಕ್ತಿ ಮಂಚ್‌ನ ಮುಖಂಡರೊಂದಿಗೆ ಭೇಟಿ ನೀಡಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಈ ಕುರಿತಂತೆ ಕೇಂದ್ರ ನಗರಾಭಿವೃದ್ಧಿ ಮಂತ್ರಿ ಹರದೀಪ್ ಪುರಿಯವರಿಗೆ ಆಗಸ್ಟ್ 16ರಂದು ಪತ್ರ ಬರೆದು ಮಂದಿರದ ಪುನರ್ನಿರ್ಮಾಣವಾಗಬೇಕು ಮತ್ತು ಸಮಾಧಿಗಳನ್ನು ಅವಿದ್ದ ಸ್ಥಳದಲ್ಲಿ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ವಿಷಯದಲ್ಲಿ ಸರಕಾರದ ನಡೆ ಸಂಪೂರ್ಣವಾಗಿ ಇಬ್ಬಂದಿತನದಿಂದ ಕೂಡಿದೆ ಎಂದು ಅವರು ಹೇಳಿದ್ದಾರೆ. ಒಂದು ಕಡೆ ಸರ್ಕಾರ ಅಯೋಧ್ಯೆಯಲ್ಲಿ ಬಾಬರಿ ಮಸೀದಿ ನಿಂತಿದ್ದ ಸ್ಥಳದಲ್ಲಿಯೇ ಒಂದು ಮಂದಿರವನ್ನು ನಿರ್ಮಿಸುವ ಬೇಡಿಕೆಯನ್ನು ಕುರಿತಂತೆ ಇದು "ಜನರ ನಂಬಿಕೆ"ಯ ರಕ್ಷಣೆಯ ಪ್ರಶ್ನೆ ಎಂದು ನ್ಯಾಯಾಲಯದಲ್ಲಿದೆ. ಮತ್ತೊಂದೆಡೆ, ಅದೇ ಸರಕಾರ ಗುರು ರವಿದಾಸ್ ಭಕ್ತರಿಗೆ ದಶಕಗಳಿಂದ ಒಂದು ಯಾತ್ರಾ ಕೇಂದ್ರವಾಗಿದ್ದ ಸ್ಥಳದಲ್ಲಿ ಐವತ್ತರ ದಶಕದಿಂದಿದ್ದ ಒಂದು ಸಣ್ಣ ಮಂದಿರವನ್ನು ಮತ್ತು ಸಮಾಧಿಗಳನ್ನು ನೆಲಸಮ ಮಾಡಿದೆ. ಒಂದು ಬಲವಾದ ಕಾನೂನು ಪ್ರಕರಣವಿದ್ದರೂ, ಸರ್ಕಾರ ಅರ್ಜಿದಾರರ ವಿರುದ್ಧ ಹೋಗಿದೆ. ಇದು, ಈ ಭಕ್ತರು ಮುಖ್ಯವಾಗಿ ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದರಿಂದಾಗಿ ಮಾಡಿರುವ ತಾರತಮ್ಯ ಮನೋಭಾವದ ಪ್ರದರ್ಶನ ವೆನಿಸುವುದಿಲ್ಲವೇ ಎಂದು ಅವರು ತಮ್ಮ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ಅವರ ಪತ್ರದ ಪೂರ್ಣ ಒಕ್ಕಣಿಕೆ ಹೀಗಿದೆ:

"ಆಗಸ್ಟ್ 10ರಂದು ತುಘಲಕಾಬಾದ್ ಬಡಾವಣೆಯ ಅರಣ್ಯ ಪ್ರದೇಶದಲ್ಲಿ ಇದ್ದ ಗುರು ರವಿದಾಸ್ ಮಂದಿರ ಮತ್ತು ನಾಲ್ಕು ಸಮಾಧಿಗಳ ಧ್ವಂಸದತ್ತ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ. ನನ್ನ ಪಕ್ಷದ ಸಹಯೋಗಿಗಳು ಮತ್ತು ದಲಿತ ಶೋಷಣ ಮುಕ್ತಿ ಮಂಚ್ ನ ಪದಾಧಿಕಾರಿಗಳೊಂದಿಗೆ ಆಗಸ್ಟ್ 14ರಂದು ನಾನು ಭೇಟಿ ನೀಡಿದ್ದೆ ಮತ್ತು ಅರ್ಜಿದಾರರೊಂದಿಗೆ(ಗುರು ರವಿದಾಸ್ ಸಮಿತಿ) ಮಾತಾಡಿದೆ. ಅವರು ನಮಗೆ ವಿವರಗಳನ್ನು ನೀಡಿ ಆ ಜಾಗಕ್ಕೆ ಕರೆದೊಯ್ದರು.

ತಾವು ಇದಕ್ಕೆ ಸಂಬಂಧಪಟ್ಟಂತೆ ದಿಲ್ಲಿಯ ಉಪರಾಜ್ಯಪಾಲರನ್ನು ಭೇಟಿಯಾಗಿದ್ದೀರಿ, ಮತ್ತು ಒಂದು ಪರಿಹಾರವನ್ನು ರೂಪಿಸಲು, ಅಂದರೆ ಮಂದಿರ ಮತ್ತು ಸಮಾಧಿಗಳಿಗೆ ಇನ್ನೊಂದು ಸ್ಥಳವನ್ನು ಮಂಜೂರು ಮಾಡಲು ಪ್ರಯತ್ನಿಸುತ್ತಿರುವುದಾಗಿ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ದುರದೃಷ್ಟವಶಾತ್, ಈ ಬೆಳವಣಿಗೆಗಳಲ್ಲಿ ನೇರವಾಗಿ ತಮ್ಮ ಇಲಾಖೆಯ ಅಡಿಯಲ್ಲಿರುವ ಡಿ.ಡಿ.ಎ.(ದಿಲ್ಲಿ ಅಭಿವೃದ್ಧಿ ಪ್ರಾಧಿಕಾರ) ಅತ್ಯಂತ ಕೆಟ್ಟ ಪಾತ್ರವನ್ನು ವಹಿಸಿದೆ. ಅರ್ಜಿದಾರರ ನ್ಯಾಯಬದ್ಧ ದೂರುಗಳ ವಿಷಯದಲ್ಲಿ ದರ್ಪದಿಂದ ವರ್ತಿಸಿದ್ದರಿಂದಾಗಿ ಇಂತಹ ಪರಿಸ್ಥಿತಿ ಬಂದಿದೆ. ಸುಪ್ರಿಂ ಕೋರ್ಟಿನಲ್ಲಿ ಒಂದು ಮರು ಪರಾಮರ್ಶೆ ಅರ್ಜಿ ಹಾಕುವ ಮೂಲಕ ಇದನ್ನು ಸರಿಪಡಿಸಬೇಕು ಎಂದು ತಮ್ಮನ್ನು ಬಲವಾಗಿ ಆಗ್ರಹಿಸುತ್ತೇನೆ.

ಈ ವಿಷಯದಲ್ಲಿ ಸರಕಾರದ ನಡೆ ಸಂಪೂರ್ಣವಾಗಿ ಇಬ್ಬಂದಿತನದಿಂದ ಕೂಡಿದೆ. ಒಂದು ಕಡೆ ಸರ್ಕಾರ ಅಯೋಧ್ಯೆಯಲ್ಲಿ ಬಾಬರಿ ಮಸೀದಿ ನಿಂತಿದ್ದ ಸ್ಥಳದಲ್ಲಿಯೇ ಒಂದು ಮಂದಿರವನ್ನು ನಿರ್ಮಿಸುವ ಬೇಡಿಕೆ ಕುರಿತಂತೆ "ಜನರ ನಂಬಿಕೆ"ಯ ರಕ್ಷಣೆಗೆ ನ್ಯಾಯಾಲಯದಲ್ಲಿದೆ. ಮತ್ತೊಂದೆಡೆ, ಅದೇ ಸರಕಾರ ಗುರು ರವಿದಾಸ್ ಭಕ್ತರಿಗೆ ದಶಕಗಳಿಂದ ಒಂದು ಯಾತ್ರಾ ಕೇಂದ್ರವಾಗಿದ್ದ ಮತ್ತು ಐವತ್ತರ ದಶಕದಲ್ಲಿ ಒಂದು ಸಣ್ಣ ಮಂದಿರದ ಕಟ್ಟಡವಿದ್ದ ಸ್ಥಳವನ್ನು ನೆಲಸಮ ಮಾಡಿದೆ. ಅಂದಿನಿಂದಲೂ ದೇವಾಲಯದಲ್ಲಿ ಸೇವೆ ಸಲ್ಲಿಸಿದ ನಾಲ್ಕು ಪೂಜಾರಿಗಳ ಸಮಾಧಿಗಳನ್ನು ಕೂಡ ನೆಲಸಮ ಮಾಡಲಾಗಿದೆ. ಒಂದು ಬಲವಾದ ಕಾನೂನು ಪ್ರಕರಣವಿದ್ದರೂ, ಸರ್ಕಾರ ಅರ್ಜಿದಾರರ ವಿರುದ್ಧ ಹೋಯಿತು. ಇದು ತಾರತಮ್ಯ ಮನೋಭಾವವನ್ನು ಪ್ರದರ್ಶಿಸುವುದಿಲ್ಲವೇ? ಏಕೆಂದರೆ ಈ ಭಕ್ತರು ಮುಖ್ಯವಾಗಿ ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದಾರೆ.

ರವಿದಾಸ್ ಮಂದಿರವಿದ್ದ ಸ್ಥಳದ ಪಕ್ಕದ ರಸ್ತೆಗೆ ಗುರು ರವಿದಾಸ್ ಮಾರ್ಗ ಎಂದು ಹೆಸರಿಡಲಾಗಿದೆ ಮತ್ತು ಮಂದಿರ ಅಲ್ಲಿ ಇರುವದರಿಂದಾಗಿಯೇ ಅದೇ ಹೆಸರಿನ ಎರಡು ಬಸ್ ನಿಲುಗಡೆಗಳಿವೆ ಎಂದು ತಮಗೆ ಚೆನ್ನಾಗಿ ಗೊತ್ತಿದೆ. ಇದು ಈಗ ನೆಲಸಮ ಮಾಡಲ್ಪಟ್ಟಿರುವ ಮಂದಿರದ ಅಸ್ತಿತ್ವಕ್ಕೆ ದೊರೆತ ಮಾನ್ಯತೆಯಲ್ಲವೇ? ಇದು ಈ ಸಮುದಾಯದ ವಿರುದ್ಧ "ಅತಿಕ್ರಮಣಕಾರರು" ಎಂಬ ದುರುದ್ದೇಶಪೂರಿತ ಅಪಪ್ರಚಾರಕ್ಕೆ ಉತ್ತರ ನೀಡುವುದಿಲ್ಲವೇ? ಅದು ಅತಿಕ್ರಮಣವಾಗಿದ್ದರೆ ಒಂದು ಸಾರ್ವಜನಿಕ ಸ್ಥಳಕ್ಕೆ ಮಂದಿರದ ಹೆಸರನ್ನೇಕೆ ಇಡಲಾಯಿತು? ಎರಡನೆಯದಾಗಿ, ನೀವು ಈ ಪ್ರದೇಶವನ್ನು ಭೇಟಿ ಮಾಡುವ ಕಾಳಜಿ ವಹಿಸಿದರೆ, ಅದೇ ಪ್ರದೇಶದಲ್ಲಿ ಒಂದು ಕ್ಲಬ್‌ಹೌಸ್ ನಿರ್ಮಿಸಲು ಡಿಡಿಎ ಅನುಮತಿ ನೀಡಿರುವುದನ್ನು ಕಾಣಬಹುದು. ಮರಮಟ್ಟುಗಳಿದ್ದ ಪ್ರದೇಶದಲ್ಲಿ ಇತ್ತೀಚೆಗಷ್ಟೇ ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ಇದು ಇಬ್ಬಂದಿತನ ಅಲ್ಲವೇ? ನೆಲಸಮಗೊಳಿಸುವ ಸಮಯದಲ್ಲಿ ಡಿಡಿಎ ಹಲವಾರು ಮರಗಳನ್ನು ನಾಶಪಡಿಸಿದೆ ಎಂಬುದನ್ನು ಕೂಡ ನಾನು ನೋಡಿದೆ.

ಸ್ವಾತಂತ್ರ್ಯಕ್ಕೆ ಮುಂಚೆಯೇ ಮಂದಿರವು ಕಾರ್ಯನಿರ್ವಹಿಸುತ್ತಿತ್ತು, ಭಕ್ತರು ತಮ್ಮ ಗುರು ರವಿದಾಸರು ವರ್ಷಗಳ ಕಾಲ ಭೇಟಿ ನೀಡಿದ್ದರು ಎಂದು ನಂಬಿರುವ ಸ್ಥಳಕ್ಕೆ, ನಿರ್ದಿಷ್ಟವಾಗಿ ಒಂದು ಕೊಳಕ್ಕೆ ಬರುತ್ತಿದ್ದಾರೆ. ನೆಲಸಮಗೊಳಿಸಿರುವ ಕಟ್ಟಡವನ್ನು ಐವತ್ತರ ದಶಕದಲ್ಲಿ ಅಲ್ಲಿದ್ದ ಒಂದು ತಾತ್ಕಾಲಿಕ ಕಟ್ಟಡದ ಬದಲಿಗೆ ನಿರ್ಮಿಸಲಾಯಿತು. ಇವೆಲ್ಲವೂ ದಾಖಲಾಗಿರುವ ವಿಷಯ. ವಿಶೇಷವಾಗಿ ದುಃಖಕರ ಸಂಗತಿಯೆಂದರೆ, ಡಿಡಿಎ ಪೂಜಾರಿಗಳ ಸಮಾಧಿಗಳನ್ನು ಸಹ ಬಿಡಲಿಲ್ಲ, ಇವನ್ನು ಪುಡಿಗುಟ್ಟಲಾಯಿತು, ಮತ್ತು ಸಮಾಧಿಗಳನ್ನು ಗುರುತಿಸುವ ಕಲ್ಲುಗಳನ್ನು ಸಹ ತುಂಡರಿಸಿ ಬಿಟ್ಟು ಅಥವಾ ಮಣ್ಣಿನ ಕೆಳಗೆ ಬಿಟ್ಟು ಹೋಗಿದ್ದಾರೆ. ಇದೀಗ ಪರಿಶಿಷ್ಟ ಜಾತಿಗಳಿಗೆ ಸೇರಿದ ಜನರು ಬಂದು ಹೋಗುವ ಒಂದು ದೇವಾಲಯದ ಪಾಲನೆ ಮಾಡುವವರಿಗೆ ಡಿಡಿಎ ನೀಡುವ ಗೌರವದ ರೀತಿಯೇನು?

ದೆಹಲಿ ಹೈಕೋರ್ಟ್ ಸಮಾಧಿಗಳನ್ನು ಹಾಗೇ ಇಟ್ಟುಕೊಂಡು 400 ಗಜಗಳಷ್ಟು ದೂರದಲ್ಲಿರುವ ಸ್ಥಳಕ್ಕೆ ದೇವಾಲಯವನ್ನು ಸ್ಥಳಾಂತರಿಸುವಂತೆ ಸೂಚಿಸಿತ್ತು. ಆದರೆ ಡಿಡಿಎ ಸಮಾಧಿಗಳನ್ನು ಮತ್ತು ದೇವಾಲಯವನ್ನು ನೆಲಸಮಗೊಳಿಸುವ ತನ್ನ ಕ್ರಮಗಳಿಂದಾಗಿ ಪರಿಸ್ಥಿತಿಯನ್ನು ಬದಲಿಸಿದೆ.

ಆದ್ದರಿಂದ ದೇವಾಲಯವನ್ನು ಪುನರ್ನಿರ್ಮಿಸುವಂತೆ ಮತ್ತು ಸಮಾಧಿಗಳನ್ನು ಅವುಗಳ ಮೂಲ ಸ್ಥಳದಲ್ಲಿ ಪುನಃಸ್ಥಾಪಿಸುವಂತೆ ಖಚಿತಪಡಿಸಬೇಕು ಎಂದು ನಾನು ನಿಮ್ಮನ್ನು ವಿನಂತಿಸುತ್ತೇನೆ. ನ್ಯಾಯಕ್ಕಾಗಿ ಗುರು ರವಿದಾಸ್ ಭಕ್ತರ ಹೋರಾಟಕ್ಕೆ ಸಿಪಿಐ (ಎಂ) ಬೆಂಬಲ ನೀಡಿದೆ ಎಂದೂ ನಿಮಗೆ ಈ ಮೂಲಕ ತಿಳಿಸುತ್ತಿದ್ದೇನೆ."

ಸಂಪಾದಕೀಯ

ಕೊಪ್ಪಳದ ಐವರು ಬಾಲಕರ ಸಾವಿಗೆ ಯಾರು ಹೊಣೆ?

ಸ್ವಾತಂತ್ರೋತ್ಸವಕ್ಕೆ ಅಳವಡಿಸಲಾದ ಧ್ವಜ ಕಂಬವನ್ನು ತೆರವುಗೊಳಿಸುವ ವೇಳೆ ಅದು ವಿದ್ಯುತ್ ತಂತಿ ಮೇಲೆ ಬಿದ್ದ ಪರಿಣಾಮವಾಗಿ ಐವರು ಹೈಸ್ಕೂಲ್ ವಿದ್ಯಾರ್ಥಿಗಳು ಮೃತಪಟ್ಟ ದಾರುಣ ಘಟನೆ ಕೊಪ್ಪಳ ನಗರದಲ್ಲಿ ಅಗಸ್ಟ್ 18 ಭಾನುವಾರ ಬೆಳಗ್ಗೆ ನಡೆದಿದೆ. ಬಾಳಿ ಬೆಳಗ ಬೇಕಾಗಿದ್ದ ಮಕ್ಕಳು ತಮ್ಮದಲ್ಲದ ತಪ್ಪಿಗೆ ಮಣ್ಣು ಪಾಲಾಗಿದ್ದಾರೆ. ಇದು ಪ್ರಸಕ್ತ ವರ್ಷದ ಮಹಾ ದುರಂತಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗದು.

ಅದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ದೇವರಾಜ್ ಅರಸು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ. ಬಸನಗೌಡ ವೆಂಕನಗೌಡ ಕಲಿಕೇರಿ ಎಂಬವರ ಖಾಸಗಿ ಕಟ್ಟಡದಲ್ಲಿ ಈ ಹಾಸ್ಟೆಲ್ ಇದೆ. ಈ ಬಾಡಿಗೆ ಕಟ್ಟಡದಲ್ಲಿ ಮಕ್ಕಳಿಗೆ ಯಾವುದೇ ಕನಿಷ್ಠ ಸೌಕರ್ಯಗಳಿಲ್ಲ. ಮಕ್ಕಳಿಗೆ ಆಟ ಆಡಲು ಒಂದು ಮೈದಾನ ಸಹ ಕಟ್ಟಡದ ಆವರಣದಲ್ಲಿಲ್ಲ. ಇಲ್ಲಿ ಧ್ವಜ ಸ್ತಂಭ ಹಾಕಲೂ ಸಹ ಜಾಗ ಇಲ್ಲ. ಹೀಗಾಗಿ ಕಟ್ಟಡದ ಟೆರೆಸ್ ಮೇಲೆ ಮರಳು ತುಂಬಿದ ಡ್ರಮ್‌ನಲ್ಲಿ ಕಬ್ಬಿಣದ ಕಂಬವನ್ನು ನೆಟ್ಟು ಧ್ವಜಾರೋಹಣ ಮಾಡಲಾಗಿತ್ತು. ಭಾನುವಾರ ರಜಾ ದಿನವಾಗಿದ್ದರಿಂದ ಧ್ವಜ ಕಂಬವನ್ನು ತೆರವುಗೊಳಿಸುವಂತೆ ವಾರ್ಡನ್ ಸೂಚಿಸಿದ್ದಾರೆ. ಕಂಬವನ್ನು ಜೋರಾಗಿ ಅಲುಗಾಡಿಸುತ್ತಿರುವಾಗ ಆಯತಪ್ಪಿ ಕಟ್ಟಡದ ಮೇಲ್ಭಾಗದಲ್ಲಿ ಹಾದು ಹೋಗುವ 11 ಕೆವಿ ವಿದ್ಯುತ್ ತಂತಿಯ ಮೇಲೆ ಬಿದ್ದ ಪರಿಣಾಮವಾಗಿ ವಿದ್ಯುತ್ ಪ್ರಸರಣಕ್ಕೆ ಒಳಗಾದ ಇಬ್ಬರು ವಿದ್ಯಾರ್ಥಿಗಳು ಒದ್ದಾಡುತ್ತಾ ನೆಲಕ್ಕುರುಳಿದರು. ಅವರ ಸಹಾಯಕ್ಕೆ ಧಾವಿಸಿದ ಇನ್ನೂ ಮೂವರು ವಿದ್ಯಾರ್ಥಿಗಳು ಸಹ ವಿದ್ಯುದಾಘಾತಕ್ಕೆ ಒಳಗಾಗಿ ಕುಸಿದ್ದು ಬಿದ್ದರು. ಐದೂ ಮಂದಿ ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟರು. ಭವಿಷ್ಯದ ಬಗ್ಗೆ ಅನೇಕ ಕನಸುಗಳನ್ನು ಹೊತ್ತು ಕಲಿಯುತ್ತಿದ್ದ ಬಾಲ ಪ್ರತಿಭೆಗಳು ಅರಳುವ ಮುನ್ನವೇ ಕಮರಿ ಹೋದವು. ಅವರ ಹೆತ್ತವರ ಕಷ್ಟ, ದೇಶಕ್ಕಾದ ನಷ್ಟ ಬಣ್ಣಿಸಲು ಅಸಾಧ್ಯ. ಕೊಪ್ಪಳ ತಾಲೂಕಿನ ಮೆತಗಲ್ ಗ್ರಾಮದ ಮಲ್ಲಿಕಾರ್ಜುನ ಅಮರೇಶ್ ಓಬಳಬಂಡಿ (9ನೇ ತರಗತಿ), ಹಲಗೇರಿ ಗ್ರಾಮದ ದೇವರಾಜ ಹಡಪದ (9ನೇ ತರಗತಿ), ಲಾಚನಕೇರಿ ಗ್ರಾಮದ ಗಣೇಶ ನಾಗಪ್ಪ ಕುರಿ (9ನೇ ತರಗತಿ), ಮುಂಡರಗಿ ತಾಲೂಕಿನ ಬಿಡನಾಳ ಗ್ರಾಮದ ಕುಮಾರ ಲಚ್ಚಪ್ಪ ಲಮಾಣಿ (9ನೇ ತರಗತಿ) ಹಾಗೂ ಗಂಗಾವತಿ ಮೂಕ್ಕೂಂಪಿ ಗ್ರಾಮದ ಬಸವರಾಜ ಫಕೀರಪ್ಪ ಜಲ್ಲಿ (10ನೇ ತರಗತಿ) ಮೃತರಾದ ಅಮಾಯಕ ಬಾಲಕರು.

ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಕಲಿಯುವ ಗಂಡು ಹಾಗೂ ಹೆಣ್ಣು ಮಕ್ಕಳ ಮನೆಗಳಲ್ಲಿ ಬಹುತೇಕವಾಗಿ ಕಿತ್ತುತಿನ್ನುವ ಬಡತನವಿರುತ್ತದೆ. ಪಾಲಕರು ಹೆಚ್ಚಾಗಿ ದುಡಿಮೆಯನ್ನು ಅರಸಿ ಗುಳೆ ಹೋಗುತ್ತಿರುತ್ತಾರೆ. ಎಷ್ಟೇ ಕಷ್ಟ ಇದ್ದರೂ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂದು ಸರ್ಕಾರಿ ಹಾಸ್ಟೆಲ್‌ಗಳಿಗೆ ಸೇರಿಸುತ್ತಾರೆ. ಆದರೆ ಬಹುತೇಕ ಸರ್ಕಾರಿ ಹಾಸ್ಟೆಲ್‌ಗಳು ಖಾಸಗಿ ಬಾಡಿಗೆ ಕಟ್ಟಡದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಕಟ್ಟಡದ ಮಾಲೀಕರಿಗೂ ಇಲಾಖೆ ಅಧಿಕಾರಿಗಳಿಗೂ ಒಳಒಪ್ಪಂದಗಳಿರುತ್ತವೆ. ಈ ಕಟ್ಟಡಗಳು ಅವ್ಯವಸ್ಥೆಯ ಆಗರಗಳಾರುತ್ತವೆ. ಮಕ್ಕಳಿಗೆ ಗುಣಮಟ್ಟದ ಊಟ ಉಪಹಾರ ನೀಡಲಾಗುವುದಿಲ್ಲ. ಮಕ್ಕಳಿಗಾಗಿ ತರಲಾಗುವ ರೇಷನ್ 1 ಭಾಗ ನಿರಂತರವಾಗಿ ವಾರ್ಡನ್ ಮನೆ ಸೇರುತ್ತದೆ. ಊಟದ ಮೇನು ಗೋಡೆಯ ಮೇಲಿನ ಬೋರ್ಡಿಗೆ ಸೀಮಿತವಾಗಿರುತ್ತದೆ. ನೀರಿನ ಕೊರತೆಯಿಂದ, ಸಿಬ್ಬಂದಿಗಳ ನೇಮಕಾತಿ ಇಲ್ಲದಿರುವುದರಿಂದ ಶೌಚಾಲಯಗಳು ಗಬ್ಬೆದ್ದು ನಾರುತ್ತಿರುತ್ತವೆ. ಬಹಿರ್ದೆಸೆಗೆ ವಿದ್ಯಾರ್ಥಿಗಳು ನಿರ್ಜನ ಪ್ರದೇಶವನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ.

ರಾತ್ರಿ ಊಟದ ನಂತರ ವಾರ್ಡನ್ ತನ್ನ ಮನೆಗೆ ಹೋಗುತ್ತಾನೆ. ಆನಂತರ ಹಾಸ್ಟೆಲಲ್ಲಿ ಹೇಳೋರು ಕೇಳೋರು ಯಾರೂ ಇರುವುದಿಲ್ಲ. ಕಾವಲುಗಾರರನ್ನು ನೇಮಿಸಿರುವುದಿಲ್ಲ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಮಹಿಳಾ ಸಿಬ್ಬಂದಿಗಳಿಗೆ ರಕ್ಷಣೆ ಇರುವುದಿಲ್ಲ. ರಾತ್ರಿ ಕಾವಲುಗಾರರ ಇಲ್ಲದಿದ್ದಾಗ ವಿದ್ಯುತ್ ಕೈಕೊಟ್ಟರೆ ಮಕ್ಕಳು ಅಳುತ್ತಾ ಕೂರುತ್ತಾರೆ. ಮಕ್ಕಳಿಗೆ ಆರೋಗ್ಯದಲ್ಲಿ ವ್ಯತ್ಯಾಸವಾದರೆ ತಕ್ಷಣದ ನೆರವು ಸಿಗುವುದಿಲ್ಲ. ನುರಿತ ನರ್ಸುಗಳನ್ನು ನೇಮಿಸಿಕೊಳ್ಳಲು ಸರ್ಕಾರ ಮುಂದಾಗುತ್ತಿಲ್ಲ. ಮಲಗಲು ಮತ್ತು ಕುಳಿತುಕೊಳ್ಳಲು ಸಾಕಷ್ಟು ಜಾಗ ಸಹ ಇರುವುದಿಲ್ಲ. ಕೊಪ್ಪಳದಲ್ಲಿ ಐವರು ವಿದ್ಯಾರ್ಥಿಗಳನ್ನು ಬಲಿ ಪಡೆದ ವಿದ್ಯಾರ್ಥಿ ನಿಲಯ ಇಂತಹ ಅವ್ಯವಸ್ಥೆಯನ್ನು ಹೊತ್ತು ನಿಂತ ಕಟ್ಟಡವಾಗಿದೆ. ಅಲ್ಲಿ ಸಂಭವಿಸಿದ ವಿದ್ಯಾರ್ಥಿಗಳ ದಾರುಣ ಸಾವಿಗೆ ಯಾರು ಹೊಣೆಗಾರರು? ವಿದ್ಯುತ್ ತಂತಿ ಹಾದು ಹೋಗಿದ್ದರು ಅದಕ್ಕೆ ಹತ್ತಿರದಲ್ಲೇ ಧ್ವಜ ಕಂಬ ಹಾಕಿಸಿದ್ದು ಯಾರು? ಅಕ್ಕಪಕ್ಕದ ಮನೆಯವರು ಮಾಡಿರುವಂತೆ ಹಾಸ್ಟೆಲ್ ಪಕ್ಕದಲ್ಲೇ ಹಾದು ಹೋಗಿರುವ ವಿದ್ಯುತ್ ತಂತಿಗೆ ಪ್ಲಾಸ್ಟಿಕ್ ಪೈಪ್ ಅಳವಡಿಸದೆ ನಿರ್ಲಕ್ಷ ವಹಿಸಿದವರು ಯಾರು? ಇಲಾಖೆಯ ಅಧಿಕಾರಿಗಳು, ಜೆಸ್ಕಾಂ ಅಧಿಕಾರಿಗಳು ಮತ್ತು ವಿಶೇಷವಾಗಿ ಕಟ್ಟಡದ ಮಾಲೀಕರೇ ಈ ದುರ್ಘಟನೆಗೆ ಹೊಣೆಗಾರರು.

ಸದರಿ ಬಾಡಿಗೆ ಕಟ್ಟಡ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಸೂಕ್ತವಾಗಿಲ್ಲ ಎಂಬ ಕಾರಣಕ್ಕಾಗಿಯೇ ಇದೇ ಕಟ್ಟಡದಲ್ಲಿದ್ದ ಕಾಲೇಜು ಹಾಸ್ಟೆಲನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿತ್ತು. ಆದರೆ ನಂತರ ಮಾಲೀಕರು ಮತ್ತು ಇಲಾಖಾ ಅಧಿಕಾರಿಗಳು ಪರಸ್ಪರ ಶಾಮೀಲಾಗಿ ಇದೇ ಕಟ್ಟಡದಲ್ಲಿ ಮೆಟ್ರಿಕ್ ಪೂರ್ವ ಹಾಸ್ಟೆಲನ್ನು ಪ್ರಾರಂಭಿಸಲಾಯಿತು. ಎಸ್.ಎಫ್.ಐ. ವಿದ್ಯಾರ್ಥಿ ಸಂಘಟನೆಯು ಇದರ ವಿರುದ್ಧ ಧ್ವನಿ ಎತ್ತಿದರೂ ಸಹ ಇಲಾಖೆಯ ಅಧಿಕಾರಿಗಳು ತಲೆಕೆಡಿಸಿಕೊಳ್ಳುವುದಿಲ್ಲ. ಇದುವೇ ಈ ದಾರುಣ ದುರಂತಕ್ಕೆ ಕಾರಣವಾಗಿದೆ.

ಘಟನೆಯ ಸುದ್ದಿ ಪ್ರಸಾರವಾಗುತ್ತಿದ್ದಂತೆ ಎಸ್.ಎಫ್.ಐ. ಅಂತಹ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ, ರಾಜ್ಯದ ಇತರ ಕಡೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ತರಗತಿ ಬಹಿಷ್ಕರಿಸಿ ಬೀದಿಗಿಳಿದು ಪ್ರತಿಭಟಿಸಿದ್ದು ಸ್ವಾಗತರ್ಹವಾಗಿದೆ. ರೈತ, ಕೂಲಿಕಾರ, ಕಾರ್ಮಿಕರ ಸಂಘಟನೆಗಳು ವಿದ್ಯಾರ್ಥಿಗಳ ಹೋರಾಟಕ್ಕೆ ಸೌಹಾರ್ದ ಬೆಂಬಲ ನೀಡಿವೆ. ಪ್ರಾಣತೆತ್ತ ಮಕ್ಕಳ ಪಾಲಕರಿಗೆ ಗರಿಷ್ಠ ಪರಿಹಾರ, ಅವರ ಕುಟುಂಬದ ಒಬ್ಬ ಸದಸ್ಯರಿಗೆ ಅರ್ಹತೆಗೆ ತಕ್ಕಂತೆ ಸರ್ಕಾರಿ ನೌಕರಿ ಮತ್ತು ಈ ದುರಂತಕ್ಕೆ ಕಾರಣವಾದವರ ವಿರುದ್ಧ ಕಠಿಣ ಕಾನೂನು ಕ್ರಮಕ್ಕಾಗಿ ಎಲ್ಲೆಡೆ ಒತ್ತಾಯ ಕೇಳಿಬಂದಿದೆ. ಸರ್ಕಾರ ಕೇವಲ ತಲಾ 5 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದು ಏನೇನೂ ಸಾಲದು ಎಂಬ ಸಾರ್ವಜನಿಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಾರ್ಡನ್ ಬಸವರಾಜ, ಕಟ್ಟಡದ ಮಾಲೀಕ ಬಸನಗೌಡ ಕಲಕೇರಿ ಮತ್ತು ಜಸ್ಕಾಂ ಅಧಿಕಾರಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಯಿತು. ಆರೋಪಿಗಳಿಗೆ ನ್ಯಾಯಾಲಯದಿಂದ ಜಾಮೀನು ಸಹ ಮಂಜೂರಾಯಿತು. ಮಕ್ಕಳನ್ನು ಕಳೆದುಕೊಂಡ ಹೆತ್ತವರ ರೋದನ ಅರಣ್ಯರೋದನವಾಗುತ್ತಿದೆ.

ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ 10 ಸಾವಿರ ಕೋಟಿ ಬಿಡುಗಡೆಗೆ ಒತ್ತಾಯ

- ಪ್ರವಾಹ ಪೀಡಿತ ಪ್ರದೇಶಗಳಿಗೆ ಸಿಪಿಐಎಂ ನಿಯೋಗ
- ಕೊಚ್ಚಿಹೊದ ಬೆಳೆಗಳು
- ಹಂದಿ ಗೂಡಿನಂತಿರುವ ಪುನರ್ ವಸತಿ ಮನೆಗಳು
- ಮೂರಾಬಟ್ಟಿಯಾದ ಸಂತ್ರಸ್ಥರ ಬದುಕು

ಮಲಪ್ರಭಾ ಮತ್ತು ಬೆಣ್ಣೆ ಹಳ್ಳ ಪ್ರವಾಹದಿಂದ ತೀವ್ರ ಸಂಕಷ್ಟಕ್ಕೀಡಾಗಿದ್ದ ಗದಗ ಜಿಲ್ಲೆ ರೋಣ ತಾಲೂಕಿನ ಬೆಳವಣಕಿ ಜಿಲ್ಲಾ ಪಂಚಾಯತ ವ್ಯಾಪ್ತಿಯ ಗುಲಗಂದಿ, ಮೆಣಸಗಿ, ಹೊಳೆಮಣ್ಣೂರ ಮತ್ತು ಗಾಡಗೋಳಿ ಗ್ರಾಮಗಳಿಗೆ ಸಿಪಿಐಎಂ ರಾಜ್ಯ ನಿಯೋಗ ಬೇಟಿ ನೀಡಿ ಪರಿಸ್ಥಿಯನ್ನು ಅವಲೋಕಿಸಿತು.

ಅಲ್ಪಸ್ವಲ್ಪ ಬೆಳೆದ ಇನ್ನೇನು ಕೈಗೆ ಬರಲಿದ್ದ ಫಸಲು ನೆರೆ ಹಾವಳಿಯಿಂದ ಕೊಚ್ಚಿಕೊಂಡು ಹೊಗಿದೆ. ನೂರಾರು ಮನೆಗಳು, ದನಕರುಗಳಿಗೆ ಸಂಗ್ರಹಿಸಿದ್ದ ಮೇವು ಹೊಟ್ಟು, ಗೊಬ್ಬರ ಮತ್ತು ಇತರೆ ನಿತ್ಯ ಬಳಕೆಯ ವಸ್ತುಗಳು, ಶಾಲಾ ಮಕ್ಕಳ ಪುಸ್ತಕಗಳು, ಧಾಖಲಾತಿಗಳು ನೀರುಪಾಲಾಗಿವೆ. ಪ್ರವಾಹದ ನೀರು ನಿಯಂತ್ರಣವಾಗಿದ್ದರಿಂದ ಗಂಜಿ ಕೇಂದ್ರಗಳನ್ನು ಮುಚ್ಚಲಾಗಿದೆ. ಪ್ರವಾಹದಿಂದಾದ ನಷ್ಟದ ಸರ್ವೇ ಕಾರ್ಯ ನಡೆದಿದೆಯಾದರೂ ಜಂಟಿ ಖಾತೆಯ ಆಸ್ತಿ ಹೊಂದಿ ಪ್ರತ್ಯೇಕವಾಗಿ ಕುಟುಂಬಗಳನ್ನು ನಡೆಸುವವರ ಹೆಸರಲ್ಲಿ ಆಸ್ತಿಯ ದಾಖಲಾತಿಗಳ ಗೊಂದಲದಿಂದ ಬಹುತೇಕ ಸಂತ್ರಸ್ಥರಿಗೆ ಪರಿಹಾರ ಸಿಗುವುದು ಕನಸಾಗಿದೆ. ಕೆಲ ಪರಿಹಾರದ ಚೆಕ್ಕಗಳನ್ನು ನೀಡಲು ಪ್ರಾರಂಭವಾಗಿದ್ದರು ಆದ ನಷ್ಟ ಮತ್ತು ನೀಡುತ್ತಿರುವ ಪರಿಹಾರಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ನೆಪಮಾತ್ರಕ್ಕೆ ಪರಿಹಾರವನ್ನು ನೀಡಲಾಗುತ್ತಿದೆ ಎಂಬ ದೂರುಗಳಿವೆ. ಕಿರಿದಾದ ನದಿಪಾತ್ರದ ಅಗಲೀಕರಣ ಸೇರಿದಂತೆ ನೆರೆ ಹಾವಳಿ ತಪ್ಪಿಸುವ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳಲು ಸರಕಾರಗಳು ವಿಫಲವಾಗಿವೆ ಎಂಬ ಅಭಿಪ್ರಾಯಗಳು ಮೂಡಿಬಂದವು.

ನಿಯೋಗ ಬೇಟಿ ನೀಡಿದ ಈ ಗ್ರಾಮಗಳನ್ನು ಹತ್ತು ವರ್ಷಗಳ ಹಿಂದೆನೆ ಸ್ಥಳಾಂತರಿಸಲು ಸಾವಿರಾರು ಮನೆಗಳನ್ನು ಕಟ್ಟಲಾಗಿದೆ. ಆದರೇ ಆ ಮನೆಗಳ ದೃಷ್ಯಗಳನ್ನು ನೋಡಿದರೆ ಮನುಷ್ಯರು ವಾಸಿಸಲು ಯೋಗ್ಯವಾಗಿಲ್ಲ. ಇಂದೋ ನಾಳೆ ಬಿಳುವಂತಿರುವ ಬಾಗಿಲಗಳೇ ಇಲ್ಲದ ಈ ಮನೆಗಳು ಹಂದಿ ಗೂಡುಗಳಾಗಿದ್ದು ಈ ವಸತಿ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳಿಲ್ಲ. ಇದಕ್ಕೆ ಅಲ್ಲಿರುವ ಶಾಲೆಗಳು ಹೊರತಾಗಿಲ್ಲ. ಒಂದು ಹೊಸ ಗ್ರಾಮ ನಿರ್ಮಾಣವಾಗುವಾಗ ವೈವಿಧ್ಯತೆಯ ಜನತೆಯ ಬದುಕಿಗೆ ಪೂರಕವಾದ ಅಗತ್ಯಗಳನ್ನು ಒದಗಿಸದೇ ಇರುವುದರಿಂದ ಜನ ಅಲ್ಲಿ ವಾಸಿಸಲು ಮುಂದಾಗುತ್ತಿಲ್ಲ ಎನ್ನುವ ಹಲವಾರು ವಾಸ್ತವಗಳು ಕಂಡುಬಂದವು.

ನಂತರ ರೋಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಬಾರಿ ಮಳೆ ಮತ್ತು ಪ್ರವಾಹದಿಂದ ಗಂಭೀರ ಪರಸ್ಥಿತಿ ನಿರ್ಮಾಣವಾಗಿದೆ. ಲಕ್ಷಾಂತರ ಜನ ಸಂಕಷ್ಟಕ್ಕೀಡಾಗಿದ್ದಾರೆ. ಶಾಲೆ, ಸರಕಾರಿ ಕಟ್ಟಡಗಳು ಸೇರಿದಂತೆ ವಾಸದ ಮನೆ, ಬೆಳೆದ ಬೆಳೆಗಳನ್ನು ಕಳೆದುಕೊಂಡಿದ್ದಷ್ಟೇ ಅಲ್ಲ ನೆರೆಯಿಂದಾಗಿ ಲಕ್ಷಾಂತರ ಎಕರೆ ಕೃಷಿ ಭೂಮಿ ಹೂಳಿನಿಂದ ತುಂಬಿದ್ದು ತಕ್ಷಣ ಕೃಷಿ ಮಾಡಲು ಸಾಧ್ಯವಾಗಲಾರದ ಪರಸ್ಥಿತಿ ನಿರ್ಮಾಣವಾಗಿದೆ ಇಂತಹ ಪರಸ್ಥಿತಿಯಲ್ಲಿ ರಾಜ್ಯಕ್ಕಾದ ಈ ಅಪಾರವಾದ ಲಕ್ಷಾಂತರ ಕೋಟಿಗಳ ನಷ್ಟವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರ ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು ಮತ್ತು ಕೂಡಲೆ ರಾಜ್ಯಕ್ಕೆ 10 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಸಂಕಷ್ಟದಲ್ಲಿರುವ ಜನತೆಯ ನೆರವಿಗೆ ಬರಬೇಕೆಂದು ಒತ್ತಾಯಿಸಿದರು.

ಸಂತ್ರಸ್ಥರ ಜೀವನದ ವ್ಯವಸ್ಥೆಯಾಗುವವರೆಗೆ ಗಂಜಿ ಕೇಂದ್ರಗಳನ್ನು ಮುಂದುವರೆಸಬೇಕು. ನೆರೆ ಹಾವಳಿಂದಾದ ನಷ್ಟದ ಸರ್ವೇ ಮತ್ತು ಪರಿಹಾರ ವೈಜ್ಞಾನಿಕವಾಗಿ ನಡೆಯಬೇಕು. ಸ್ಥಳಾಂತರಗೊಂಡ ಗ್ರಾಮಗಳಲ್ಲಿ ವಸತಿಗೆ ಯೋಗ್ಯವಾದ ಜನರ ವೈವಿದ್ಯತೆಯ ಬದುಕಿಗೆ ಪೂರಕವಾದ ವ್ಯವಸ್ಥೆಯನ್ನು ಮಾಡಬೇಕು. ಸ್ಥಳಾಂತರಗೊಂಡ ಗ್ರಾಮಗಳಲ್ಲಿರುವ ಕಟ್ಟಡಗಳು ಕಳಪೆಯಿಂದ ಕೂಡಿದ್ದು ಅದು ಸಮಗ್ರವಾದ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಸರಕಾರವನ್ನು ಒತ್ತಾಯಿಸಿದರು.



ಸಿಪಿಐ(ಎಂ) ನಿಯೋಗ



ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ

ವಿನೋದ ಶ್ರೀರಾಮಪುರ

ಕಾಲ ಮತ್ತು ಸಮಾಜದ ಪರಿಸ್ಥಿತಿಗೆ ಬದಲಾವಣೆಯು ಘಟಿಸುತ್ತಲೇ ಇರುತ್ತದೆ. ಇಂದಿನ ಅಪ್ರಸ್ತುತ ಮುಂದೊಂದು ದಿನ ಪ್ರಸ್ತುತವಾಗಬಲ್ಲದು. ಹೀಗೆ ಒಂದು ಕಾಲದಲ್ಲಿ ಅಪ್ರಸ್ತುತವಾಗಿದ್ದು ಈಗ ಪ್ರಸ್ತುತವಾಗಿರುವುದು ದಲಿತ ಸಾಹಿತ್ಯದ ಬೆಳವಣಿಗೆಯಾಗಿದೆ.

104 ವರ್ಷದ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ ಕಾಲಾನುಕಾಲಕ್ಕೆ ಹಲವು ಬದಲಾವಣೆಗಳನ್ನು ತನ್ನದಾಗಿಸಿಕೊಂಡಿದ್ದು ಕಾಲದ ನಿರ್ಣಯಕ್ಕೆ ಒಗ್ಗಿಕೊಂಡಿದೆ. ಈ ಹಿನ್ನೆಲೆಯಲ್ಲಿಯೇ 4 ದಶಕಗಳ ಹಿಂದೆ 1979ರ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಗೋಷ್ಠಿಯೊಂದನ್ನು ನಿರಾಕರಿಸಿದ ಸಾಹಿತ್ಯ ಪರಿಷತ್ತು ಇಂದು ರಾಜ್ಯ ಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿತು.

2019ರ ಆಗಸ್ಟ್ 17–18ರಂದು ಎರಡು ದಿನಗಳ ಕಾಲ ದಲಿತ ಚಳುವಳಿಯ ತವರು ಜಿಲ್ಲೆ ಕೋಲಾರದಲ್ಲಿ ನಡೆದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ ಮತ್ತು ಸಮ್ಮೇಳನಾಧ್ಯಕ್ಷರನ್ನಾಗಿ ದಲಿತ ಕವಿ ಡಾ. ಎಲ್. ಹನುಮಂತಯ್ಯ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಹಲವು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

1979ರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಗೋಷ್ಠಿಯೊಂದು ಆಯೋಜನೆ ಮಾಡಬೇಕೆಂದಾಗ, ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು 'ದಲಿತ, ಬಲಿತ, ಕಲಿತ, ಎಂಬುದು ಸಾಹಿತ್ಯದಲ್ಲಿ ಇಲ್ಲವೆಂದು ಹೇಳಿದ್ದರು. ಇದರಿಂದ ಸಿಡಿದೆದ್ದು ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಘೋಷಣೆಯೊಂದಿಗೆ ನಾಲ್ಕು ದಶಕಗಳ ಹಿಂದೆ ಬಂಡಾಯ ಸಂಘಟನೆಯ ಹುಟ್ಟು.

ಬಂಡಾಯ ಸಾಹಿತ್ಯ ಸಂಘಟನೆಯ ಹುಟ್ಟಿನ ಜೊತೆ ಜೊತೆಗೆ ದಲಿತ ಚಳುವಳಿಯ ಹುಟ್ಟಿಗೂ ಕಾರಣವಾಯಿತು. ಸಾಹಿತ್ಯ ಎಂಬುದು ಸಮಾಜದ ಅದರಲ್ಲೂ ಬಹುಸಂಖ್ಯಾತ ಶೋಷಿತರ ಬಗ್ಗೆ ಅತ್ಯಂತ ವಿರಳವಾಗಿತ್ತು. ಈ ಸಂದರ್ಭದಲ್ಲಿಯೇ ಜನತೆಯ ನೋವಿಗೆ ಸ್ಪಂದಿಸುವ ಸಾಹಿತ್ಯವೇ ನಿಜವಾದ ಸಾಹಿತ್ಯ ಎಂದು ಪ್ರಾರಂಭಗೊಂಡಿದ್ದು 70ರ ದಶಕದ ನಂತರ.

ಕನ್ನಡದ ಸಾಹಿತ್ಯದಲ್ಲಿ ನವ್ಯ, ನವೋದಯ, ನವ್ಯೋತ್ತರ, ಪ್ರಗತಿಶೀಲ ಎಂದು ಗುರುತಿಸಿಕೊಂಡು ಬಂದಿದ್ದ ಸಾಹಿತ್ಯ ವಲಯ ಮುಂದೊಂದು ದಿನ ದಲಿತ ಮತ್ತು ಬಂಡಾಯ ಸಾಹಿತ್ಯ ಒಂದಕ್ಕೊಂದು ಜೊತೆಜೊತೆಯಾಗಿ ಬೆರೆತಾಗ ತನ್ನ ಸಾಹಿತ್ಯ ರಚನೆಯ ದಿಕ್ಕನ್ನೇ ಬದಲಿಸಿಕೊಂಡಿತು. ಅಷ್ಟೇ ಅಲ್ಲದೇ 70ರ ದಶಕದವರೆಗೂ ಶೋಷಿತ ಜನ ಸಮುದಾಯದ ಬಗೆಗಿನ ಸಾಹಿತ್ಯ ರಚನೆಯಿಂದ ದೂರವಾಗಿದ್ದ ಬಹುದೊಡ್ಡ ಸಾಹಿತಿಗಳಿಗೆ ಶೋಷಿತ ಸಮುದಾಯದ ಬಗೆಗಿನ ಸಾಹಿತ್ಯ ರಚನೆಗೆ ಪ್ರೇರೇಪಣೆ ನೀಡಿದ್ದು ಬಂಡಾಯ ಹಾಗೂ ದಲಿತ ಸಾಹಿತ್ಯ.

ಹೀಗೆ ಸಾಹಿತ್ಯ ಎಂಬುದು ಜನರ ನೋವಿಗೆ ಸ್ಪಂದಿಸುವುದೇ ಅತ್ಯಂತ ನ್ಯಾಯೋಚಿತವಾದದ್ದು ಎಂಬುದು 70ರ ದಶಕದ ನಂತರ ಸಾಧ್ಯವಾಯಿತು.

1915ರ ಮೇ 5ರಂದು ಬೆಂಗಳೂರಿನ ಆರ್ಟ್ಸ್ ಕಾಲೇಜಿನಲ್ಲಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಸಾಹಿತ್ಯ ಪರಿಷತ್ತಿ(ಕಸಾಪ)ನ ಹುಟ್ಟಿಗೆ ಕಾರಣವಾಯಿತು. ಅದು ಸಹ ಹೆಚ್.ವಿ. ನಂಜುಂಡಯ್ಯ, ಸರ್.ಎಂ. ವಿಶ್ವೇಶ್ವರಯ್ಯ, ಬೆಳ್ಳಾವೆ ವೆಂಕಟನಾರಾಣಪ್ಪ, ಕರ್ಪೂರ ಶ್ರೀನಿವಾಸರಾವ್ ಮೊದಲಾದವರ 4–5 ವರ್ಷಗಳ ಪರಿಶ್ರಮದಿಂದಾಗಿ ಪ್ರಾರಂಭಗೊಂಡ ಕಸಾಪಗೆ ಈಗ 104 ವಸಂತಗಳು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ರೀತಿ ಒಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ.

ವಿಶ್ವೇಶ್ವರಯ್ಯನವರು ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ 1911ರಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜ (ಮೈಸೂರು ಇಕನಾಮಿಕ್ ಕಾನ್ಫರೆನ್ಸ್) ಎಂಬ ಸಂಸ್ಥೆಯನ್ನು ಸ್ಥಾಪಿಸಲು ಅಂದಿನ ಮಹಾರಾಜರಿಗೆ ಸಲಹೆ ಕೊಟ್ಟಾಗ ಮಹಾರಾಜರು ಅದನ್ನೊಪ್ಪಿದರು. ಅದಕ್ಕನುಸಾರವಾಗಿ ಆ ಸಂಸ್ಥೆಯ ಅಂಗವಾಗಿ 3 ಸಮಿತಿಗಳು ಏರ್ಪಟ್ಟವು. 1. ಕಾರ್ಖಾನೆಗಳ ಕೈಗಾರಿಕಾ ಸಮಿತಿ, 2. ವಿದ್ಯಾ ಸಮಿತಿ, 3. ಭೂ ವ್ಯವಸಾಯ ಸಮಿತಿ.

ವಿದ್ಯಾ ಸಮಿತಿಗೆ ಹೆಚ್. ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿ ವಿ. ಸುಬ್ರಹ್ಮಣ್ಯ ಅಯ್ಯರ್ ಅವರು ಕಾರ್ಯದರ್ಶಿಗಳಾಗಿ ನೇಮಕವಾದರು. ಈ ವಿದ್ಯಾ ಸಮಿತಿಯವರು ಮುಖ್ಯವಾಗಿ ಎರಡು ಯೋಜನೆಗಳನ್ನು ನಿರ್ಧರಿಸಿದರು. 1. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ, 2. ಕನ್ನಡ ಅಕಾಡೆಮಿ ಅಥವಾ ಇಂದಿನ ಕನ್ನಡ ಸಾಹಿತ್ಯ ಪರಿಷತ್ತು ಇದು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸ.

ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದ ಆಯೋಜನೆಯು ಒಂದೇ ರಾತ್ರಿಯ ಬದಲಾವಣೆಯಲ್ಲ. ಅದಕ್ಕೆ ಬಂಡಾಯ ಮತ್ತು ಶೋಷಿತ ಚಳುವಳಿ ಮತ್ತು ಸಾಹಿತ್ಯದ ಕಾರಣವೂ ಇದೆ. ಕಳೆದ ನಾಲ್ಕು ದಶಕಗಳಲ್ಲಿ ಅದೇ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿಯ ನೇತಾರರು ಮತ್ತು ಸಂಸ್ಥಾಪಕರು ಕೂಡ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಗುರಿತಿಸಿಕೊಂಡಿದ್ದಾರೆ ಮತ್ತು ಅಖಿಲ ಭಾರತ ಸಮ್ಮೇಳಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆ.

ಈ ಬಾರಿಯ ರಾಜ್ಯ ಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ ಜನ ಜಾತ್ರೆ ಆಗಲಿಲ್ಲ. ದಲಿತ ಸಾಹಿತಿಗಳು ಒಳಗೊಂಡು ದಲಿತ ಚಳುವಳಿಯ ನೇತಾರರು ಭಾಗವಹಿಸಿದ್ದರು. ಸಮ್ಮೇಳನಾಧ್ಯಕ್ಷರ ಭಾಷಣ ಒಳಗೊಂಡು ಒಟ್ಟಾರೆಯಾಗಿ ಹಲವು ಗೋಷ್ಠಿಗಳು, ದಲಿತ ಸಾಹಿತ್ಯ ಸಂಪುಟಗಳ ಬಿಡುಗಡೆ ಒಳಗೊಂಡು ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಪುಸ್ತಕ ಮಾರಾಟವನ್ನು ಆಯೋಜಿಸಲಾಗಿತ್ತು.

ಸಮ್ಮೇಳನದಲ್ಲಿ ಪ್ರಸ್ತುತ ಕರ್ನಾಟಕ ರಾಜ್ಯವು ಅತಿವೃಷ್ಠಿಯಿಂದ ನಲುಗಿರುವುದನ್ನು ಗುರುತಿಸುವುದರೊಂದಿಗೆ ಪ್ರಧಾನವಾಗಿ ರಾಜ್ಯದಲ್ಲಿ ಗುಂಪುಗಾರಿಕೆ ಮತ್ತು ವಿಘಟನೆಗೊಂಡಿರುವ ದಲಿತ ಸಂಘಟನೆಯನ್ನು ಒಟ್ಟುಗೂಡಿಸುವ ವಿಚಾರವು ಮುನ್ನಲೆಗೆ ಬಂದಿತು. ಪ್ರಾಥಮಿಕ ಶಿಕ್ಷಣ ಮಾಧ್ಯಮ ರಾಜ್ಯ ಭಾಷೆಯಾಗಬೇಕು ಮತ್ತು ಪ್ರಾಥಮಿಕ ಶಿಕ್ಷಣ ರಾಷ್ಟ್ರೀಕರಣಗೊಳ್ಳಬೇಕು. ರಾಜ್ಯ ಭಾಷೆಯ ಉಳುವಿಗಾಗಿ, ಕನ್ನಡ ಶಾಲೆಗಳ ಉಳಿವಿಗಾಗಿ, ಶೋಷಿತ ಸಮುದಾಯದ ವಿಚಾರಗಳು ಮತ್ತು ಪ್ರಸ್ತುತ ಎದುರಾಗುತ್ತಿರುವ ಹೊಸ ಹೊಸ ಸವಾಲುಗಳೇ ಕಾವ್ಯ ರಚನೆಗೆ ಪ್ರೇರಣೆಯಾಗಬೇಕೆಂದು ಚರ್ಚಿತವಾಯಿತು.

"ಸುಶಿಕ್ಷಿತ ದಲಿತ ಸಮುದಾಯ ವೈಚಾರಿಕತೆ ಮತ್ತು ಸ್ವಾಭಿಮಾನವನ್ನು ಮೈಗೂಡಿಸಿಕೊಳ್ಳಲಿಲ್ಲ. ಇಂದಿಗೂ ಅನೇಕ ಮೂಢನಂಬಿಕೆಗಳಿಗೆ ಬಲಿಯಾದವರಲ್ಲಿ ಸುಶಿಕ್ಷಿತ ದಲಿತ ಸಮುದಾಯವು ಒಳಗೊಂಡಿದೆ. ಸುಶಿಕ್ಷಿತ ದಲಿತ ವಿಭಾಗ ಶೋಷಿತ ದಲಿತ ಸಮುದಾಯದ ಪರವಾಗಿ ಕೆಲಸ ಮಾಡದಿರುವುದು ಅತ್ಯಂತ ದೊಡ್ಡ ದುರಂತವಾಗಿದೆ. ಸಾಮಾಜಿಕವಾಗಿ ಎಲ್ಲರಿಗೂ ಸಮಾನವಾದ ನ್ಯಾಯದ ಪರವಾಗಿ ನಿಲ್ಲುವುದೇ ನಿಜವಾದ ಸಾಹಿತ್ಯವಾಗಿದೆ. ಇತಿಹಾಸದ ಗರ್ಭ ಸೇರಿರುವ ದಲಿತ ಚಳುವಳಿಯ ಉತ್ತುಂಗತೆಯನ್ನು ಎಂದಿಗೂ ಅಳಿಸಲಾಗುವುದಿಲ್ಲ. ಚಳುವಳಿಗಳೂ ಸಹ ನಿರಂತರ ಹರಿವ ನೀರಿನಂತಿರಬೇಕು. ಬದಲಾದ ಕಾಲದೊಂದಿಗೆ ಅದು ಹೋರಾಡದಿದ್ದರೆ ಜಡತ್ವ ಪಡೆಯುತ್ತದೆ. ಅಷ್ಟೇ ಮಾತ್ರವಲ್ಲ, ಅಂತಹ ಚಳುವಳಿ ಅಥವಾ ಸಂಘಟನೆ ಅವಸಾನಗೊಳ್ಳುತ್ತದೆ." ಹೀಗೆ ಮುನ್ನಲೆಗೆ ಬಂದ ಹಲವು ವಿಚಾರಗಳು ಸಮ್ಮೇಳನದಲ್ಲಿ ಚರ್ಚೆಯಾದವು.

ರಾಜ್ಯ ಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದ ನಂತರದಲ್ಲಿ ಎದುರಾಗುವ ಹೊಸ ಸವಾಲುಗಳನ್ನು ಎದುರಿಸಲು ಸಾಹಿತ್ಯ ವಲಯ ಮತ್ತಷ್ಟು ಗಟ್ಟಿಗೊಳ್ಳಲಿ ಎಂಬ ಆಶಯದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತು ಸಂಘಟನೆಯಾಗಿಯೂ ಬದಲಾಗಬೇಕಾಗಿರುವುದು ಇನ್ನೂ ಸಾಕಷ್ಟು ಇದೆ.

ಪ್ರಮುಖವಾಗಿ ಇದುವರೆಗೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಒಬ್ಬ ಮಹಿಳೆಯೂ ಆಯ್ಕೆಯಾಗದಿರುವುದು ಮತ್ತು 1977–1978ರ ಅವಧಿಯಲ್ಲಿ ಕೋಶಾಧಿಕಾರಿಯಾಗಿ ಮತ್ತು 2004–2008ರ ಅವಧಿಯಲ್ಲಿ ಕಾರ್ಯದರ್ಶಿಯಾಗಿ ಮಹಿಳೆಯು ಸ್ಥಾನ ಅಲಂಕರಿಸಿರುವುದು ಬಿಟ್ಟರೇ ಲಿಂಗ ತಾರತಮ್ಯದಿಂದ ಸಾಹಿತ್ಯ ಪರಿಷತ್ತು ಇನ್ನು ಹೊರಬಂದಿಲ್ಲ. ಪ್ರಸ್ತುತವಾಗಿ ಈಗಲಾದರೂ ಪರಿಷತ್ತು ಈ ದೌರ್ಬಲ್ಯದಿಂದ ಹೊರ ಬರಲಿ ಎಂದು ಆಶಿಸೋಣ.





ಸಂತ್ರಸ್ತರ ನೆರವಿಗೆ ಧಾವಿಸಿದ ಹಾವೇರಿ ಎಸ್‌ಎಫ್‌ಐ

ಮನುಷ್ಯ ಬದುಕಲು ಅವಶ್ಯಕವಾಗಿ ಬೇಕಾಗುವ ಯಾವೊಂದು ಸೌಲಭ್ಯವಿಲ್ಲದೆ ಊರಿದು. ಎಸ್‌ಎಫ್‌ಐ ತಂಡ ಗೌಳೇರದೊಡ್ಡಿಗೆ ಬೇಟಿ ಕೊಟ್ಟು ಸಂಗ್ರಹಿಸಿ ತಂದ ವಸ್ತುಗಳನ್ನು ಸಂತ್ರಸ್ತರಿಗೆ ವಿತರಣೆ ಮಾಡಿತ್ತು. ಹಾವೇರಿ ತಾಲೂಕಿನ ನಾಗೇಂದ್ರಮಟ್ಟಿಯ ಶಾಂತಿ ನಗರದ ಅಲೆಮಾರಿ ಸಮುದಾಯದ 26 ಕಿಂತ ಹೆಚ್ಚು ಕುಟುಂಬ ಬೀದಿಗೆ ಬಿದ್ದಿವೆ. ಈ ಜನರ ಪರಿಸ್ಥಿತಿ ತುಂಬಾ ಕಷ್ಟದಲ್ಲಿದೆ. ಇವರಿಗೆ ಸ್ವಂತ ಮನೆಗಳಿಲ್ಲದೆ ಜೀವನ ನಡೆಸುತ್ತಿದ್ದಾರೆ ಹಾಗೂ ಕೆಸರಹಳ್ಳಿ: ಗ್ರಾಮದಲ್ಲಿ ಕೂಡ ಮನೆಗಳು ಸಂಪೂರ್ಣ ನೀರಿನಲ್ಲಿ ಮುಳುಗಿ ಜನರು ಜೀವನ ತುಂಬಾ ಕಷ್ಟದಲ್ಲಿದೆ. ಇಲ್ಲಿನ ಸರಕಾರಿ ಶಾಲೆಗಳು ಕೂಡ ಮುಳುಗಿ ವಿದ್ಯಾರ್ಥಿಗಳ ದಾಖಲೆ, ಪಠ್ಯಪುಸ್ತಕಗಳು, ನಾಶವಾಗಿವೆ. ಅದೇ ರೀತಿಯಾಗಿ ಹಳೆಮೇಲ್ಲೂರಿ, ಹಳೆಕಿತ್ತೂರ, ನಾಗನೂರ, ಮೆಳ್ಳಗಟ್ಟಿ, ಕುಣಿಮೆಳ್ಳಹಳ್ಳಿಭಾಗದ ಸಂತ್ರಸ್ತರ ಗಂಜಿ ಕೇಂದ್ರಕ್ಕೆ ಭೇಟಿ ನೀಡಿ ನೇರವಾಗಿ ಎಲ್ಲಾ ವಸ್ತುಗಳನ್ನು ನೇರ ಸಂತ್ರಸ್ತರಿಗೆ ವಿತರಣೆ ಮಾಡಲಾಯಿತು.



ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ ಸಂತ್ರಸ್ತರಿಗೆ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರ ಆದಷ್ಟೂ ಬೇಗ ಒದಗಿಸಬೇಕು ಜೊತೆಗೆ ವಿದ್ಯಾರ್ಥಿಗಳ ಕಲಿಕಾ ಸಾಮಗ್ರಿಗಳು ಅತ್ಯಂತ ಅವಶ್ಯವಾಗಿದ್ದು ಸರಕಾರ ವಿದ್ಯಾರ್ಥಿಗಳ ಕಡೆ ಗಮನಿಸಿ ಬೇಕು ಈ ಪ್ರವಾಹದಿಂದ ಎಚ್ಚೆತ್ತುಕೊಂಡು ಇನ್ನುಮುಂದೆ ಆದರೂ ಆಳುವ ಸರಕಾರಗಳು, ಜನಪ್ರತಿನಿಧಿಗಳು ಈ ಪ್ರದೇಶದ ಅಭಿವೃದ್ಧಿ ಕಡೆ ಮುಂದಾಗಬೇಕೆಂದು ಆಗ್ರಹಿಸಿದರು. ■

ಬಿಎಸ್‌ಎನ್‌ಎಲ್ ನೌಕರರ ಮೂರನೇ ಸಂಧಾನ ಸಭೆ

ಬೆಂಗಳೂರಿನ ಕೇಂದ್ರೀಯ ಉಪ ಮುಖ್ಯ ಆಯುಕ್ತರ, (Dy. CLC) ಎದುರು ಇತ್ತೀಚೆಗೆ ನೂರಾರು ಕಾರ್ಮಿಕರು ಪ್ರತಿಭಟನೆ ನಡೆಸಿದರು.ಈಗಾಗಲೇ ಟಿಬಿಎ ಅಧಿಕಾರಿಗಳು ನೇರವಾಗಿ ಸಂಬಳವನ್ನು ಕಾರ್ಮಿಕರಿಗೆ ಪಾವತಿಸಬೇಕು. ಕಾರ್ಮಿಕರಿಗೆ ಕೆಲಸ ನಿರಾಕರಣೆ ನಿಲ್ಲಿಸಬೇಕು ಎಂದು ಆಡಳಿತ ಮಂಡಳಿಗೆ ಹಿಂದಿನ ಸಂಧಾನ ಸಭೆಯಲ್ಲಿ ಲಿಖಿತವಾಗಿ ಸೂಚಿಸಲಾಗಿತ್ತು.

ಆದರೆ ಸಭೆಗೆ ಬಂದ ಅಧಿಕಾರಿಗಳು ಈ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಲು ವಿಫಲವಾಗಿದ್ದರಿಂದ ಕಾರ್ಮಿಕರು ಆಗಸ್ಟ್ 19 ರಿಂದ ಈ ಹೋರಾಟ ಹಮ್ಮಿಕೊಳ್ಳಲಾಗಿತ್ತು ಇಂದಿನ ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಮುನಿರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಮಾತನಾಡಿದರು ಕೊನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಸಮಾರೋಪ ಭಾಷಣ ಮಾಡಿದರು. ಪ್ರತಿಭಟನೆಯಲ್ಲಿ ಹಲವು ಜಿಲ್ಲೆಗಳ ಮುಖಂಡರು ಭಾಗವಹಿಸಿದ್ದರು.

ಸಂಧಾನ ಸಭೆ ವಿವರ

ಮಧ್ಯಾನ್ಹ 3 ಗಂಟೆಗೆ ಮೂರನೇ ಸಂಧಾನ ಸಭೆ ನಡೆಯಿತು. ಬಿಎಸ್‌ಎನ್‌ಎಲ್ ಆಡಳಿತ ಮಂಡಳಿ ಪರವಾಗಿ ಐದು ಅಧಿಕಾರಿಗಳು ಭಾಗವಹಿಸಿದ್ದರು.

ಬಾಕಿ ವೇತನ ನೀಡುವವರೆಗೂ ಯಾವುದೇ ಗುತ್ತಿಗೆ ಕಾರ್ಮಿಕರಿಗೆ ಕೆಲಸ ನಿರಾಕರಣೆ ಇಲ್ಲ

ಕೆಲಸದಿಂದ ನಿಲ್ಲಿಸಿರುವ ಕಾರ್ಮಿಕರ ವೇತನವನ್ನು ಪ್ರಥಮ ಆಧ್ಯತೆ ಯಾಗಿ ಪಾವತಿಸಲು ಒಪ್ಪಿಗೆ.

ಕೆಲಸಮಾಡುತ್ತಿರುವ ಕಾರ್ಮಿಕರಿಗೆ ಮುಂದಿನ ತಿಂಗಳಿಂದ ನೇರವಾಗಿ ಮೂಲಮಾಲೀಕರಾದ ಬಿಎಸ್‌ಎನ್‌ಎಲ್ ನಿಂದಲೇ ವೇತನ ಪಾವತಿ

ಆಗಸ್ಟ್ 23 ರಂದು ಗುತ್ತಿಗೆದಾರರು ಆಡಳಿತ ಹಾಗೂ ಕಾರ್ಮಿಕ ಪ್ರತಿನಿಧಿಗಳ ಮುಂದಿನ ಸಂಧಾನ ಸಭೆ ಅಲ್ಲಿಯವರೆಗೂ ಕಾರ್ಮಿಕರ ಚಳವಳಿ ಮುಂದೂಡಿಕೆ. ■



ಕಾರ್ಮಿಕ ವರ್ಗ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಿಐಟಿಯು ಮುಖಂಡ ಮೀನಾಕ್ಷಿ ಸುಂದರಂ ಕರೆ

ವರದಿ: ವಾ.ಉ.

ಇವತ್ತು ಅಧಿಕಾರದಲ್ಲಿರುವ ಶಕ್ತಿಗಳಲ್ಲಿ ಯಾವ ಮಾನವೀಯತೆಯೂ ಇಲ್ಲ, ಅವರಲ್ಲಿ ಇರುವುದು ಮೃಗಬಲ. ಯಾವ ಮೃಗವೇ ಇರಲಿ ಸಿಂಹವೇ ಇರಲಿ ಆನೆಯೇ ಇರಲಿ ಮಾನವ ಅವುಗಳನ್ನು ಪಳಗಿಸುವ ಅನುಭವ ಅವನಿಗಿದೆ. ಹಾಗಾಗಿ ದಮನಕಾರಿ ಶಕ್ತಿಗಳನ್ನು ಕಾರ್ಮಿಕ ವರ್ಗ ಪಳಗಿಸಿಯೇ ಪಳಗಿಸುತ್ತದೆ. ಕಾರ್ಮಿಕ ವರ್ಗ ತನ್ನ ದುರ್ಬಲತೆಗೆ ಬೇರೆಲ್ಲೂ ಕಾರಣಗಳನ್ನು ಹುಡುಕಬೇಕಾಗಿಲ್ಲ. ನಮ್ಮಲ್ಲೇ ಇರುವ ದೌರ್ಬಲ್ಯವನ್ನು ನಿವಾರಿಸಿಕೊಂಡು ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಕಾರ್ಮಿಕರು ಒಂದು ನಿರ್ದಿಷ್ಟ ಯೂನಿಯನ್ ಆಗಿ ಆಲೋಚಿಸದೆ ವರ್ಗವಾಗಿ ಕಾರ್ಯೋನ್ಮುಖರಾದರೆ ಮೃಗೀಯ ಶಕ್ತಿಗಳನ್ನು ಸೋಲಿಸುವುದು ಕಷ್ಟವೇನಲ್ಲ ಎಂಬುದಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದರು.

ಮಂಗಳೂರಿನ ಬೋಳಾರದಲ್ಲಿ ಕಾ|| ನಿರುಪಮ್ ಸೇನ್ ನಗರದ ಕಾ|| ಬಿ.ಮಾಧವ ವೇದಿಕೆಯಲ್ಲಿ 2 ದಿನಗಳ ಕಾಲ ಜರಗಿದ ಸಿಐಟಿಯು 16ನೇ ದ.ಕ. ಜಿಲ್ಲಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಆಗಸ್ಟ್ 19 ರಂದು ಅವರು ಮಾತನಾಡುತ್ತಿದ್ದರು.

ಕಾರ್ಮಿಕ ಸಂಘಟನೆಗಳ ಸದಸ್ಯತ್ವ ಸಂಖ್ಯೆ ಕೆಲವು ನಿರ್ದಿಷ್ಟ ಯೂನಿಯನ್‌ಗಳಲ್ಲಿ ಕಡಿಮೆಯಾಗಿದೆ ಎಂದ ಮಾತ್ರಕ್ಕೆ ಕಾರ್ಮಿಕ ಚಳುವಳಿಯ ಮಹತ್ವ ಕಡಿಮೆಯಾಗುವುದಿಲ್ಲ. ಇವತ್ತು ನಾವು ನಿರ್ಮಿಸಿರುವ ಶಾಸನಗಳಲ್ಲಿ ಕಾರಣವಿಲ್ಲದೆ ಕಾರ್ಮಿಕರನ್ನು ಕೆಲಸದಿಂದ ಕೈಬಿಡುವ ಕ್ರಮವಿಲ್ಲ. ಆದರೂ ಪ್ರಧಾನಿ ಮೋದಿಯವರ ಮೊದಲ ಅವಧಿಯ ಆಳ್ವಿಕೆಯ ಕೊನೆಯಲ್ಲಿ ಕಾರ್ಮಿಕ ವಿರೋಧಿಯಾದ ಕಾನೂನುಗಳು ಹೆಚ್ಚು ಪ್ರಚಾರವಿಲ್ಲದೆ ಜಾರಿಯಾಗಿವೆ. ಇಂಥ ಕಾನೂನುಗಳಲ್ಲಿ ಮಾಲಕರು ತಮ್ಮ ಉದ್ಯಮಗಳಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳುವಾಗ ಅವರು ಗಳಿಸಿದ ವಿದ್ಯಾರ್ಹತೆಯನ್ನು ಪರಿಗಣಿಸದೆ ಹೋಗುವ ಅಪಾಯದ ಪರಿಸ್ಥಿತಿ ಎದುರಾಗಲಿದೆ. ಪ್ರತಿಭಾವಂತರಾದ ಭಾರತೀಯರು ಈಗಾಗಲೇ ಅಮೇರಿಕಾ ಮೊದಲಾದ ದೇಶಗಳ ಉದ್ಯಮಗಳ ಗುಲಾಮ ನೌಕರರಾಗಿ ರಾತ್ರಿ ಹಗಲು ದುಡಿಯುತ್ತಿದ್ದಾರೆ ಎಂದು ವಿಷಾದಿಸಿದರು.

ಇವತ್ತು ಸರಕಾರ ಮಾಲಕರ ಪೋಷಕರಾಗಿದ್ದಾರೆ. ಕಾರ್ಮಿಕರು, ನೌಕರರು ಮಾಲಕನ ಕಣ್ಗಾವಲಿನಲ್ಲೇ ಇರಬೇಕಾಗುತ್ತದೆ. ಕಾರ್ಮಿಕ ಇನ್ಸ್‌ಪೆಕ್ಟರ್ ಕೂಡಾ ಫ್ಯಾಕ್ಟರಿಯೊಳಗೆ ಮಾಲಕನ ಅನುಮತಿ ಪಡೆದೇ ಪ್ರವೇಶಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ಕಾರ್ಮಿಕ ವರ್ಗ ದೃಢವಾಗಿ ಹೋರಾಡಬೇಕಾಗಿದೆ. ಸಿಐಟಿಯು ಸಂಘಟನೆ ದೃಢವಾಗಿ ಮಾಲಿಕರು, ಅಧಿಕಾರಿ ವರ್ಗವನ್ನು ಎದುರಿಸುತ್ತಿದ್ದು, ಸಿಐಟಿಯು ಅನ್ನು ಕಾರ್ಮಿಕರಿಂದ ದೂರ ಮಾಡುವ ಪ್ರಯತ್ನವನ್ನು ಎಚ್ಚರದಿಂದ ವಿರೋಧಿಸಲು ಮೀನಾಕ್ಷಿ ಸುಂದರಂ ಕರೆ ನೀಡಿದರು.

ಎರಡು ದಿನಗಳ ಸಿಐಟಿಯು ದ.ಕ.ಜಿಲ್ಲಾ ಸಮ್ಮೇಳನ ಮಂಗಳೂರಿನಲ್ಲಿ ಹಂಚು ಕಾರ್ಮಿಕರ ಸಂಘದ ಸಭಾಂಗಣವಿರುವ ಕಾ|| ನಿರುಪಮ್ ಸೇನ್ ನಗರದಲ್ಲಿ ಕಾ|| ಬಿ.ಮಾಧವ ವೇದಿಕೆಯಲ್ಲಿ 2019 ಆಗಸ್ಟ್ 18, 19 ರಂದು ಜರಗಿತು. ಸುರಿಯುತ್ತಿದ್ದ ಧಾರಾಕಾರ ಮಳೆಯಿಂದಾಗಿ ಬಹಿರಂಗ ಸಭೆ ಆಯೋಜಿಸಲಾಗಲಿಲ್ಲ.


ಆಗಸ್ಟ್ 18 ರಂದು ಹಿರಿಯ ಕಾರ್ಮಿಕ ಮುಖಂಡರಾದ ಕೆ.ಆರ್.ಶ್ರೀಯಾನ್ ಸಿಐಟಿಯು ಧ್ವಜ ಅರಳಿಸುವುದರೊಂದಿಗೆ ಸಮ್ಮೇಳನ ಪ್ರಾರಂಭವಾಯಿತು. ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ಕೆ.ಶಂಕರ್ ಸಮ್ಮೇಳನವನ್ನು ಉದ್ಘಾಟಿಸಿದರು.

ದೇಶದಲ್ಲಿ ಹಲವು ಗಂಭೀರವಾದ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿವೆ. ಆ ಸಮಸ್ಯೆಯನ್ನು ಜನರಿಂದ ಮರೆಮಾಚಲು ಕಾಶ್ಮೀರದಂಥ ವಿಚಾರಗಳನ್ನು ಮುಂದಿಟ್ಟು ವಂಚಿಸಲಾಗುತ್ತಿದೆ. ಇದು ಜಮ್ಮು ಕಾಶ್ಮೀರದ ವಿಚಾರದಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಈ ಬಾರಿಯ ಬಜೆಟ್‌ನಲ್ಲಿ ದೇಶ ಮತ್ತು ವಿದೇಶೀ ಬಂಡವಾಳಶಾಹಿಗಳಿಗೆ ಹೆಚ್ಚಿನ ಆದ್ಯತೆ ಮತ್ತು ರಿಯಾಯಿತಿ ನೀಡಲಾಗುತ್ತಿದೆ. ಇಂತಹ ಸರಕಾರ ಕಾರ್ಮಿಕರ ಹಿತಕ್ಕೆ ಆದ್ಯತೆ ನೀಡುವುದಿಲ್ಲ. ಹಾಗಾಗಿ ದೇಶದ ಗಂಭೀರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಕಾರ್ಮಿಕರಿಂದ ಮಾತ್ರ ಸಾಧ್ಯ ಎಂದು ಕೆ.ಶಂಕರ್ ನುಡಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿ, ಸಾರ್ವಜನಿಕ ಉದ್ದಿಮೆ ಮಾರಾಟ ಮಾಡುವುದು ದೇಶ ವಿರೋಧಿ ಕೃತ್ಯವಾಗಿದೆ. ನಮ್ಮ ಸರಕಾರ ರೈಲು ಖಾಸಗೀಕರಣಗೊಳಿಸಿ ಬಂಡವಾಳಶಾಹಿಗಳಿಗೆ ಲೂಟಿಗೈಯಲು ಅವಕಾಶ ಮಾಡಿಕೊಡುವ ಮೂಲಕ ದೇಶವಿರೋಧಿ ಕೃತ್ಯ ಎಸಗಿದೆ. ಸರಕಾರವು ಏಜೆಂಟ್‌ಗಿರಿ ಮಾಡುತ್ತಿದೆ. ಈಗಾಗಲೇ 44 ಕಾರ್ಮಿಕ ಕಾನೂನುಗಳನ್ನು ನಾಶ ಮಾಡುವ ಸರ್ವಸಿದ್ಧತೆ ನಡೆಸಿದೆ ಎಂದು ತಿಳಿಸಿದರು.

ಸಮ್ಮೇಳನಕ್ಕೆ ಶುಭ ಹಾರೈಸಿ ಕರ್ನಾಟಕ ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಬ್ಯಾಂಕ್ ನೌಕರರ ಸಂಘದ (ಬಿಇಎಫ್ಐ)ದ ಬಿ.ಎಂ. ಮಾಧವ, ಜೀವವಿಮಾ ನೌಕರರ ಸಂಘದ ಬಿ.ಎನ್. ದೇವಾಡಿಗ, ಎಸ್‌ಎಫ್‌ಐನ ಮಾಧುರಿ ಬೋಳಾರ್, ಜನವಾದಿ ಮಹಿಳಾ ಸಂಘಟನೆಯ ಜಯಂತಿ ಶೆಟ್ಟಿ, ದಕ್ಷಿಣ ರೈಲ್ವೇ ನೌಕರರ ಸಂಘದ ಲಕ್ಷ್ಮಣನ್ ಮಾತನಾಡಿದರು.

ಸಿಐಟಿಯು ಜಿಲ್ಲಾ ಸಮ್ಮೇಳನ ನಡೆಯುವ ಪೂರ್ವಭಾವಿಯಾಗಿ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಸಿಐಟಿಯು ವಲಯಗಳಲ್ಲಿ ವಲಯ ಸಮ್ಮೇಳನಗಳು ನಡೆದಿದ್ದು, ಆ ಸಮ್ಮೇಳನಗಳಿಂದ ಆಯ್ಕೆಯಾದ ಪ್ರತಿನಿಧಿಗಳಲ್ಲಿ 143 ಮಂದಿ ಭಾಗವಹಿಸಿದ್ದರು. ಉದ್ಘಾಟನಾ ಅಧಿವೇಶನದ ಬಳಿಕ, ಸಮ್ಮೇಳನದಲ್ಲಿ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಂಡಿಸಿದ ವರದಿಯನ್ನು ವಲಯವಾರು ಪ್ರತಿನಿಧಿಗಳು ಹಾಗೂ ಉದ್ಯಮ/ರಂಗವಾರು ಪ್ರತಿನಿಧಿಗಳು ಕುಳಿತು ಚರ್ಚೆ ಮಾಡುವ ಮೊದಲ ದಿನದ ಕಲಾಪಗಳು ನಡೆದುವು.



ಎರಡನೇ ದಿನ ವಲಯವಾರು ಹಾಗೂ ಉದ್ದಿಮೆವಾರು ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ಬಿಸಿಯೂಟ ಕಾರ್ಮಿಕರ ಬೇಡಿಕೆಗಳ ಬಗ್ಗೆ, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಬೇಡಿಕೆಗಳ ಬಗ್ಗೆ, ಬೀದಿ ಬದಿ ವ್ಯಾಪಾರಿಗಳ ಬೇಡಿಕೆಗಳ ಬಗ್ಗೆ ಮತ್ತು ಅಂತಾರಾಷ್ಟ್ರೀಯ ಮಂಗಳೂರು ವಿಮಾನ ನಿಲ್ದಾಣವನ್ನು ಖಾಸಗೀಕರಿಸುವುದರ ವಿರುದ್ಧ ಸಮ್ಮೇಳನವು ನಿರ್ಣಯಗಳನ್ನು ಕೈಗೊಂಡಿತು.

ದ.ಕ.ಜಿಲ್ಲೆಯಲ್ಲಿ ವಿವಿಧ ಉದ್ದಿಮೆಗಳ ಕಾರ್ಮಿಕರ ಪ್ರಶ್ನೆಗಳು ಚರ್ಚೆಯಲ್ಲಿ ಪ್ರಧಾನವಾಗಿ ಕಾಣಿಸಿಕೊಂಡವು. ಬೀಡಿ ಕಾರ್ಮಿಕರಿಗೆ ಸಂಬಂಧಿಸಿ ಕನಿಷ್ಠ ವೇತನ ಹಾಗೂ ಹೆಚ್ಚಿಸಿದ ತುಟ್ಟಿ ಭತ್ಯೆ ಪಾವತಿಯ ಬಗ್ಗೆ ಸರಕಾರ ಆದೇಶ ಹೊರಡಿಸಿದ್ದರೂ ಅದನ್ನು ಜಾರಿಗೊಳಿಸದೆ ಮಾಲಕರು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿರುವುದರಿಂದ ಸರಕಾರೀ ಆದೇಶ ಜಾರಿ ವಿಳಂಬವಾಗುವ ಸಂಭವವಿದ್ದು, ಈ ಮಧ್ಯೆ ಬೀಡಿ ಉದ್ದಿಮೆಯಲ್ಲಿ ಕಾರ್ಮಿಕರಿಗೆ ಸಾಕಷ್ಟು ದಿನ ಉದ್ಯೋಗ ಸಿಗದಿರುವುದರಿಂದ ಹಲವಾರು ಮಂದಿ ಬೀಡಿ ಕಟ್ಟುವ ಉದ್ಯೋಗ ತೊರೆಯುತ್ತಿದ್ದಾರೆ. ದ.ಕ.ಜಿಲ್ಲೆಯಲ್ಲಿ ಸಿಐಟಿಯು ಸಂಘಟನೆಯಲ್ಲಿ ಬಹುಪಾಲು ಬೀಡಿ ಕಾರ್ಮಿಕರೇ ಆಗಿದ್ದು, ಹೆಚ್ಚಾಗಿ ಮಹಿಳಾ ಕಾರ್ಮಿಕರೇ ಇರುವ ಈ ರಂಗವು ತೀವ್ರ ಬಿಕ್ಕಟ್ಟು ಅನುಭವಿಸುತ್ತಿದೆ. ಬಿಸಿಯೂಟ ನೌಕರರ ಸಂಘಟನೆಯನ್ನು ಕಾರ್ಮಿಕರಿಗಿಂತಲೂ ಸಿಐಟಿಯು ಮುಖಂಡರೇ ಮುತುವರ್ಜಿಯಿಂದ ಬಲಪಡಿಸಿರುವುದು ಶ್ಲಾಘನೀಯ ಅಂಶವಾಗಿದೆ. ಈ ರೀತಿಯಲ್ಲೇ ಅಂಗನವಾಡಿ ನೌಕರ ಸಂಘಟನೆಯನ್ನು ಕಟ್ಟಬೇಕಾದ ಅವಶ್ಯಕತೆ ಇದೆ. ಬೀದಿ ಬದಿ ವ್ಯಾಪಾರಸ್ಥರು ಸಮರಧೀರವಾಗಿ ಸಂಘಟನೆ ಕಟ್ಟಿರುವ ಬಗ್ಗೆಯೂ ಶ್ಲಾಘಿಸಬೇಕಾಗಿದೆ. ಪುರುಷ ಕಾರ್ಮಿಕರು ಇತ್ತೀಚೆಗೆ ಹೆಚ್ಚಾಗಿ ಕಟ್ಟಡ ಹಾಗೂ ಇತರೇ ನಿರ್ಮಾಣ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ದ.ಕ.ಜಿಲ್ಲೆಯ ಹೆಚ್ಚಿನ ವಲಯಗಳಲ್ಲಿ ಸಿಐಟಿಯು ಅಡಿ ಸಂಘಟಿತರಾಗುತ್ತಿದ್ದರೂ, ಅದನ್ನು ಇನ್ನಷ್ಟು ವಿಸ್ತರಿಸಿ ಬಲಿಷ್ಠಗೊಳಿಸುವ ಅವಕಾಶಗಳು ಇರುವುದು ಮೊದಲಾದ ವಿಷಯಗಳು ಸಮ್ಮೇಳನದಲ್ಲಿ ಪ್ರಸ್ತಾಪಿತವಾದವು.

ಸಿಐಟಿಯು ದ.ಕ. ಜಿಲ್ಲಾ ಸಮಿತಿ ಆಯ್ಕೆ:

ಸಿಐಟಿಯು 16ನೇ ದ.ಕ.ಜಿಲ್ಲಾ ಸಮ್ಮೇಳನವು 44 ಮಂದಿ ಸದಸ್ಯರುಳ್ಳ ಜಿಲ್ಲಾ ಸಮಿತಿಯನ್ನು ಮುಂದಿನ ಅವಧಿಗೆ ಆಯ್ಕೆ ಮಾಡಿರುತ್ತದೆ. ಅಧ್ಯಕ್ಷರಾಗಿ ಜೆ.ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಸುನಿಲ್ ಕುಮಾರ್ ಬಜಾಲ್, ಖಜಾಂಚಿಯಾಗಿ ಯೋಗೀಶ್ ಜಪ್ಪಿನಮೊಗರು, ಉಪಾಧ್ಯಕ್ಷರುಗಳಾಗಿ ಕೆ.ಆರ್.ಶ್ರೀಯಾನ್, ಯು.ಬಿ.ಲೋಕಯ್ಯ, ವಸಂತ ಆಚಾರಿ, ಪದ್ಮಾವತಿ ಶೆಟ್ಟಿ, ಗಂಗಯ್ಯ ಅಮೀನ್, ರಮಣಿ ಮೂಡಬಿದ್ರಿ, ಕಾರ್ಯದರ್ಶಿಗಳಾಗಿ ಯು.ಜಯಂತ ನಾಯ್ಕ್, ರಾಮಣ್ಣ ವಿಟ್ಲ, ರಾಧಾ ಮೂಡಬಿದ್ರಿ, ಎಸ್.ಎಂ.ಶಿವಕುಮಾರ್ ಬೆಳ್ತಂಗಡಿ, ವಸಂತ ನಡ, ನೋಣಯ್ಯ ಗೌಡ ಆಯ್ಕೆಯಾಗಿದ್ದಾರೆ.

ಬಾಗೇಪಲ್ಲಿ ತಾಲೂಕು ಕಟ್ಟಡ ಕಾರ್ಮಿಕರ ಸಮಾವೇಶ

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕ ಸಮಾವೇಶವನ್ನು ಆಗಸ್ಟ್ 20 ರಂದು ರಾಜ್ಯ ಪ್ರಧಾನಕಾರ್ಯದರ್ಶಿ ಕೆ. ಮಹಾಂತೇಶ ಉದ್ಘಾಟಿಸಿ ಮಾತನಾಡಿದರು


ಕಾರ್ಮಿಕ ಚಳವಳಿಯ ನಿರಂತರ ಹೋರಾಟದಿಂದಾಗಿ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ 1996 ರಲ್ಲಿ ಎರಡು ಕಾನೂನುಗಳು ರಚನೆಗೊಂಡಿವೆ. ಆದರ ಅಡಿಯಲ್ಲಿ ಕರ್ನಾಟಕದಲ್ಲಿ ಪಿಂಚಣಿ, ಶಿಕ್ಷಣ, ಮದುವೆ ಹಾಗೂ ವೈದ್ಯಕೀಯ ಧನ ಸಹಾಯ ಸೇರಿ ಸುಮಾರು 14 ಕಲ್ಯಾಣ ಸೌಲಭ್ಯಗಳನ್ನು ಕಾರ್ಮಿಕರು ಪಡೆಯುತ್ತಿದ್ದಾರೆ ಆದರೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಅದನ್ನು ರದ್ದು ಮಾಡಲು ಹೊರಟಿದೆ. ಇದರ ವಿರುದ್ಧ ಕಟ್ಟಡ ಕಾರ್ಮಿಕರು ಬಲವಾದ ಚಳವಳಿ ನಡೆಸುವ ಅಗತ್ಯವಿದೆ ಎಂದು ಅವರು ಕಾರ್ಮಿಕರಿಗೆ ಕರೆ ನೀಡಿದರು.

ಸಮಾವೇಶದಲ್ಲಿ ಸಿಐಟಿಯು ಜಿಲ್ಲಾಪ್ರಧಾನ ಕಾರ್ಯದರ್ಶಿ ಸಿದ್ದಗಂಗಪ್ಪ, ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾಸಂಚಾಲಕ ಎಂ.ಪಿ. ಮುನಿವೆಂಕಟಪ್ಪ, ವೈದ್ಯರಾದ ಡಾ. ಅನಿಲ್ ಕುಮಾರ್ ಹಾಗೂ ಕಟ್ಟಡ ಕಾರ್ಮಿಕ ಮುಖಂಡರಾದ ಗಂಗಾಧರ ಮಾತನಾಡಿದರು.

ಸಮಾವೇಶದಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷರಾದ ಶ್ರೀಮತಿ ಸಾವಿತ್ರಮ್ಮ, ಮುಖಂಡರಾದ ರಘುರಾರೆಡ್ಡಿ, ಶಫೀವುಲ್ಲಾ, ಚಿಂತಾಮಣಿಯ ಮುನಿಕೃಷ್ಣಪ್ಪ, ವಕೀಲರಾದ ಜಯಪ್ಪ, ಎಸ್.ಎಫ್.ಐ. ಮುಖಂಡರಾದ ಸೋಮಶೇಖರ್, ಕೃಷಿಕೂಲಿಕಾರರ ಸಂಘದ ನಾಗರಾಜ್, ಬಿಳ್ಳೂರು, ರಾಮಪ್ಪ ಸೇರಿದಂತೆ ಸುಮಾರು ಮುನ್ನೂರಕ್ಕೂ ಹೆಚ್ಚಿನ ಕಾರ್ಮಿಕರು ಭಾಗವಹಿಸಿದ್ದರು.

ಸಮಾವೇಶದಲ್ಲಿ ತಾಲೂಕು ಸಂಚಾಲನಾ ಸಮಿತಿ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ರಘುರಾಮ ರೆಡ್ಡಿ ಆಯ್ಕೆಯಾದರು.

ವರದಿ: ಮುನಿವೆಂಕಟಪ್ಪ





ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಎಲ್ಲಿ ಕಳೆದುಕೊಂಡಿದ್ದೇವೆಯೋ ಅಲ್ಲೇ ಹುಡುಕಿಕೊಳ್ಳಬೇಕೆಂಬ ನಾಣ್ಣುಡಿಯಿದೆ. ಈಗಿರುವ ಅವಿಚಾರ–ಮೌಢ್ಯಗಳಿಂದ ಜನರು ಹೊರಬರಬೇಕಿದ್ದರೆ, ಮಗುವಿನ ಮೊದಲ ಗುರುಗಳಾದ ತಾಯಿ–ತಂದೆಯರು, ಅದರಲ್ಲೂ ಕಿರಿಯವಯಸ್ಸಿನ ತಾಯಿಯಂದಿರು ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಮಾರ್ಗಗಳನ್ನು ಹುಡುಕಬೇಕು. ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಒಂದು ಕುಟುಂಬವೇ ಶಿಕ್ಷಣ ಪಡೆದಂತೆ ಎಂಬ ಮಾತಿದೆ. ಮುಂದುವರೆದು ಹೇಳುವುದಾದರೆ, ಎಳೆಯ ವಯಸ್ಸಿನಲ್ಲಿ ಹೆಣ್ಣುಮಕ್ಕಳು ವೈಚಾರಿಕತೆಯನ್ನು ಬೆಳೆಸಿಕೊಳ್ಳುವುದರ ಮೂಲಕ, ಮೌಢ್ಯದಿಂದ ಬಿಡಿಸಿಕೊಳ್ಳುವುದರ ಮೂಲಕ, ಇಡೀ ಸಮಾಜವೇ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ, ಮೌಢ್ಯದಿಂದ ಬಿಡಿಸಿಕೊಳ್ಳುವಂತೆ ಮಾಡುವ ಶಕ್ತಿ ಅವರಿಗಿದೆ ಎಂದು ಹೇಳಬಹುದು.

ಮೌಢ್ಯದ ಬಿತ್ತನೆ ಮತ್ತು ಪೋಷಣೆ

ಪಾರಮಾರ್ಥಿಕ ವೈಚಾರಿಕತೆಗೆ ಹೆಸರಾದ ರಮಣರನ್ನು ಒಬ್ಬ ಭಕ್ತ ಆತ್ಮ ತಲೆಯಲ್ಲಿದೆಯೋ, ಹೃದಯದಲ್ಲಿದೆಯೋ ಎಂದು ಕೇಳುತ್ತಾನೆ. ನಾವು ತೂಕಡಿಸುವಾಗ ಅಥವಾ ಮಲಗಿದಾಗ ತಲೆಯು ಕೆಳಗಿಳಿಯುವುದರಿಂದ, ಎಚ್ಚರ–ನಿದ್ರೆಗಳೆರಡರಲ್ಲೂ ಎದೆಯು ಒಂದೇ ರೀತಿ ಇರುವುದರಿಂದ ಆತ್ಮವು ಹೃದಯದಲ್ಲಿದೆಯೆಂದು ರಮಣರು ಉತ್ತರಿಸುತ್ತಾರೆ.

ಒಂದು ಕೈಲಿ ಚಿನ್ನ ಮತ್ತೊಂದು ಕೈಲಿ ಮಣ್ಣನ್ನು ಹಿಡಿದು 'ಎರಡೂ ಒಂದೇ' ಎಂದು ಎರಡನ್ನೂ ನದಿಯೊಳಕ್ಕೆಸೆದ ಪರಮಹಂಸರು ಹಣಕೊಟ್ಟು ಮೊಸರನ್ನು ಕೊಳ್ಳುವಾಗ 'ಕೊಸರನ್ನು ಮರೆಯದೆ ಹಾಕಿಸಿಕೊಂಡು ಬಾ' ಎಂದು ಶಿಷ್ಯನನ್ನು ಎಚ್ಚರಿಸುತ್ತಾರೆ.

ಕಲ್ಯಾಣದ ಬಸವಣ್ಣನವರು 'ಕೂಡಲಸಂಗಮ ನಾದಪ್ರಿಯನಲ್ಲ, ವೇದಪ್ರಿಯನಲ್ಲ, ಭಕ್ತಿಪ್ರಿಯ' ಎನ್ನುತ್ತಾರೆ. ಅನುಭಾವಿಯಾದ ಅಲ್ಲಮನು 'ಭಕ್ತಿಯೆಂಬುದು ತೋರಿ ಉಂಬ ಲಾಭ' ಎನ್ನುತ್ತಾನೆ.

ಮೆದುಳು–ಹೃದಯಗಳ ಭೌತಿಕ ರಚನೆಯ ಬಗ್ಗೆ ಅಗಾಧ ಮಾಹಿತಿಯು ಸಿಗುವ ಈ ಡಿಜಿಟಲ್ ಯುಗದಲ್ಲೂ, ಮನುಷ್ಯರ ಪ್ರಜ್ಞೆಯನ್ನು ಬುದ್ಧಿ–ಭಾವಗಳೆಂದು ಒಡೆದು ನೋಡುವ ಚಿಂತಕರು, ಕವಿ–ಸಾಹಿತಿ–ಬರಹಗಾರರು, ಭಾವನೆಗಳು ಹೃದಯದಿಂದಲೂ, ವಿಚಾರಗಳು ಮೆದುಳಿನಿಂದಲೂ ಹುಟ್ಟುತ್ತವೆ ಎಂದು ತಾವು ನಂಬುವುದಲ್ಲದೆ ಇತರರಿಗೂ ಹಾಗೆಂದು ತಿಳಿಯುವಂತೆ ಹೇಳುತ್ತಾರೆ. ಸಂತರು, ಸಾಮಾನ್ಯರು ಎಂಬ ಬೇಧವಿಲ್ಲದೆ ಹಣ, ಆಸ್ತಿ, ಬಟ್ಟೆ, ಆಹಾರ, ಪಾನೀಯ ಮುಂತಾದ ಜೀವನಾಧಾರ ವಸ್ತುಗಳ ವಿಷಯದಲ್ಲಿ ಅಪ್ರತಿಮ ವೈಚಾರಿಕ ಎಚ್ಚರವನ್ನು ಪ್ರದರ್ಶಿಸುವ ಜನರು, ಭಾವನೆ–ನಂಬಿಕೆಗಳ ವಿಷಯಬಂದಾಗ 'ನಾವು ಹೇಗೆ ನಂಬಿದರೆ ಹಾಗೆ' ಎಂಬ ವಾದವನ್ನು ಮುಂದಿಡುತ್ತಾರೆ? ಬೀಸುವ ಗಾಳಿ, ತಂತಿಯಲ್ಲಿನ ವಿದ್ಯುತ್ತು ಕಣ್ಣಿಗೆ ಕಾಣಿಸದಿದ್ದರೂ ಅವು ಇದ್ದೇ ಇರುವಂತೆ ದೈವಿಕತೆಯೂ ಸಹ ಇದೆಯೆಂದು ಅದನ್ನು ನಂಬಬೇಕೇ ಹೊರತು ವಾದಕ್ಕೆ ಸಿಕ್ಕುವುದಿಲ್ಲವೆಂದು ವಾದಿಸುತ್ತಾರೆ. 'ಭಗವಂತನು ಭಾವಗೋಚರ' ಎಂದು ಕಲ್ಲಿನಲ್ಲೂ ದೇವರನ್ನು ಕಾಣುವ ಯತಿಗಳು ತಮ್ಮ ಮಠದ ಶೌಚಾಲಯವನ್ನು ಸ್ವಚ್ಛಮಾಡುವ ಮನುಷ್ಯನಿಗೆ ಮಠದೊಳಕ್ಕೆ ಪ್ರವೇಶವನ್ನು ನಿರಾಕರಿಸುವುದು ಮಾತ್ರವಲ್ಲ, ಅಂಥವರು ಓಡಾಡಿದ ದಾರಿಯನ್ನು ಗಂಜಲದಿಂದ ಸ್ವಚ್ಛಗೊಳಿಸಿಕೊಳ್ಳುತ್ತಾರೆ. ಅವರು ಪಡೆದ ವಿದ್ಯಾಭ್ಯಾಸ ಇಲ್ಲಿ ಅವರ ಉಪಯೋಗಕ್ಕೆ ಬರುವುದಿಲ್ಲವೆ? ಇವರೆಲ್ಲಾ ಪೆದ್ದರೆ? ಆಷಾಢಭೂತಿಗಳೇ? ಅಥವಾ ಯಾವುದೋ ಅಸಹಾಯಕ ಸ್ಥಿತಿಗೆ ಸಿಕ್ಕಿ ಹೀಗೆ ಮಾಡುತ್ತಿದ್ದಾರೆಯೆ? ಅವಿಚಾರ, ಮೌಢ್ಯ ಇವೆಲ್ಲಾ ಮನುಷ್ಯರು ಎಂದಿಗೂ ನಿವಾರಿಸಿಕೊಳ್ಳಲಾಗದ ದೌರ್ಬಲ್ಯಗಳೆ? ಇಂಥ ಪ್ರಶ್ನೆಗಳು ಎಲ್ಲರನ್ನೂ ಒಂದಲ್ಲ ಒಂದು ಸಲ ಕಾಡಿರುತ್ತವೆ.

ನೇಪಾಳದಲ್ಲಿ ನಿರ್ದಿಷ್ಟ ಲಕ್ಷಣಗಳುಳ್ಳ ಎಳೆಯ ವಯಸ್ಸಿನ ಹುಡುಗಿಯರನ್ನು ದೇವಿಯೆಂದು ಪೂಜಿಸುವ ಪದ್ಧತಿ ಇದೆ. ಜನಸಮುದಾಯದ ನಡುವೆ ಆಳವಾಗಿ ಬೇರೂರಿರುವ ಇಂಥ ಪದ್ಧತಿಗಳನ್ನು ಮಾನವಶಾಸ್ತ್ರೀಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು ತುಂಬಾ ಅಗತ್ಯ. ಜೊತೆಗೆ, ಅವರ ಆವರಣವನ್ನು (ಅಂದರೆ ಕುಟುಂಬ–ಸಮಾಜವನ್ನು) ಮತ್ತು ತಾಯಿಯ ಗರ್ಭದಲ್ಲಿರುವಾಗಲೇ ಮಗುವಿನ ಮೆದುಳಿನ ಬೆಳವಣಿಗೆಯಲ್ಲಿ ಸೇರಿಕೊಳ್ಳುವ ತಾಯಿಯ ಭಾವನೆ–ನಂಬಿಕೆ–ಆಲೋಚನೆಗಳು ಬೆಳವಣಿಗೆಯ ಹಂತಗಳಲ್ಲಿ ಕ್ರಮೇಣ ನಮ್ಮ ಅಸ್ತಿತ್ವದ ಭಾಗವಾಗುವ ಸಂಕೀರ್ಣ ಮನೋ–ಸಾಮಾಜಿಕ ವಿದ್ಯಮಾನವನ್ನು ಇದರೊಂದಿಗೆ ಕೂಡಿಸಿಕೊಂಡು ನೋಡಬೇಕಾದ್ದು ಇನ್ನೂ ಅಗತ್ಯ.

ಒಂದು ದೃಷ್ಟಿಕೋನದ ಪ್ರಕಾರ, ಮಗುವಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಇದನ್ನು ಮಾನ್ಯ ಮಾಡಿದರೆ, ಮಗುವು ಶಾಲೆಯನ್ನು ಪ್ರವೇಶಿಸುವಾಗಲೇ ಒಂದು ಮಟ್ಟದ ಶಿಕ್ಷಣವನ್ನು ಪಡೆದಿರುತ್ತದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮಗುವಾಗಿದ್ದಾಗ ತಾಯಿ–ತಂದೆ–ಗುರು–ಹಿರಿಯರನ್ನು ಅನುಸರಿಸುವುದು ಎಷ್ಟು ಸಹಜವೋ, ಹದಿಹರೆಯದಲ್ಲಿ ವಿಚಾರಶಕ್ತಿ ಬೆಳೆದಾಗ ಪ್ರಶ್ನಿಸುವುದು, ದಂಗೆಯೇಳುವುದು ಅಷ್ಟೇ ಸಹಜ. ಚಿಕ್ಕವರಿದ್ದಾಗ ನಂಬುವುದು, ಹದಿಹರೆಯದಲ್ಲಿ ಅನುಮಾನಿಸುವುದು, ಮತ್ತೆ ಮಧ್ಯವಯಸ್ಸು ಕಳೆದಮೇಲೆ 'ನಮ್ಮ ಹಿರಿಯರು ಕಾರಣವಿಲ್ಲದೆ ಹೇಳಿಲ್ಲ', 'ಅವರು ನಿಜ ಎಂದು ನಂಬಿದ್ದು ಸುಳ್ಳಾಗಲು ಹೇಗೆ ಸಾಧ್ಯ?' ಎಂದು ಹಳೆಯ ನಂಬಿಕೆಗಳಿಗೆ ಮರಳುವುದು, ವಿದ್ಯಾವಂತರು ಮತ್ತು ಅವಿದ್ಯಾವಂತರು ಇಬ್ಬರಲ್ಲಿಯೂ ಕಾಣಸಿಗುವ ಸಾಮಾನ್ಯ ಅಂಶ. ಇಂದ್ರಿಯಾನುಭವವು ತಮ್ಮ ನಂಬಿಕೆಗೆ ವಿರುದ್ಧವೆಂದು ಕಂಡುಬಂದಾಗಲೂ 'ಬುದ್ಧಿಯನ್ನು ನಂಬಬೇಡ, ತರ್ಕದಾಚೆಗೆ ಹೋಗಿ ನೋಡು' ಎಂದು ಉಪದೇಶಿಸುವ ಗುರುಗಳ ಒತ್ತಾಸೆಯಲ್ಲಿ ಚಿಕ್ಕಂದಿನಲ್ಲಿ ಪಡೆದ ನಂಬಿಕೆಗಳಿಗೇ ಅಂಟಿಕೊಳ್ಳುವುದು ತೀರಾ ಸಾಮಾನ್ಯ. ಆವರೆಗೆ ದೊರೆತ ಬುದ್ಧಿವಂತಿಕೆ, ಲೋಕಾನುಭವಗಳು ಚಿಕ್ಕಂದಿನಲ್ಲಿ ಪಡೆದ ನಂಬಿಕೆಯನ್ನು ಮಾರ್ಪಡಿಸುವ ಬದಲು ಆ ನಂಬಿಕೆಯ ಪರವಾದ ತರ್ಕವನ್ನು ಬೆಳೆಸಿಕೊಳ್ಳುವುದಕ್ಕೆ, ವಾದಗಳನ್ನು ಬೆಳೆಸಿಕೊಳ್ಳುವುದಕ್ಕೆ ಬಳಕೆಯಾಗುತ್ತವೆ.

ಅಂದರೆ, ಚಿಕ್ಕಂದಿನಲ್ಲಿ ತಾಯಿ–ತಂದೆಯರು ಬೆಳೆಸಿದ ನಂಬಿಕೆಗಳಿಗೂ ಪ್ರೌಢರಾದ ಮೇಲೆ ಪ್ರದರ್ಶಿಸುವ ಅವಿಚಾರಗಳಿಗೂ ನೇರ ಸಂಬಂಧವಿದೆ. ಮೌಢ್ಯ ಎಂದರೆ ಮೂಢರಂತೆ ವ್ಯವಹರಿಸುವ ಗುಣವೇ ಅಲ್ಲವೆ? ಚಿಕ್ಕವರಾಗಿದ್ದಾಗ ಕೇಳುವ ಪ್ರಶ್ನೆಗಳು ವೈಚಾರಿಕ ಪ್ರಶ್ನೆಗಳೇ. ಆದರೆ ವಯಸ್ಸು, ಆಕಾರ, ತಿಳುವಳಿಕೆ, ಅನುಭವ ಹೀಗೆ ಬಹಳಷ್ಟು ವಿಷಯದಲ್ಲಿ ತಾಯಿ–ತಂದೆಯರಿಗಿಂತ ದುರ್ಬಲರೂ, ತಮ್ಮ ಅಸ್ತಿತ್ವಕ್ಕಾಗಿ ಅವರ ಮೇಲೆ ಅವಲಂಬಿತರಾಗಿರಬೇಕಾದ ಸ್ಥಿತಿಯಲ್ಲಿರುವವರೂ ಆದ ಮಕ್ಕಳು ದೊಡ್ಡವರನ್ನು ಮೀರಿ ವೈಚಾರಿಕರಾಗುಳಿಯುವುದು ಕಷ್ಟಸಾಧ್ಯ.

ತಾಯಿ–ತಂದೆಯರಲ್ಲಿರುವ ಶಕ್ತಿ–ಮಿತಿ–ದೌರ್ಬಲ್ಯಗಳ ಬೀಜಗಳು ಮಕ್ಕಳಲ್ಲಿ ಮರವಾಗಿ ಬೆಳೆಯುತ್ತವೆ. ಒಂದೇ ಕುಟುಂಬದಲ್ಲಿ ಬೆಳೆಯುವ ಮಕ್ಕಳಲ್ಲಿ ಒಂದು ಮಗು, ಅವರ ಮಿತಿಯನ್ನು ಆಯ್ಕೆ ಮಾಡಿಕೊಂಡು ಬೆಳೆದರೆ, ಮತ್ತೊಂದು ಮಗು ಅವರಲ್ಲಿನ ಶಕ್ತಿಯನ್ನು ಆಯ್ಕೆ ಮಾಡಿಕೊಂಡು ಬೆಳೆಯುತ್ತವೆ. ಅದು ಏಕೆ, ಹೇಗೆ ಆಗುತ್ತದೆಯೆಂಬುದು ಜಟಿಲ ಪ್ರಶ್ನೆ. ಕಠೋಪನಿಷತ್ತಿನ ಋತ್ವಿಕ ತಂದೆಯ ಹೀನತನವನ್ನು ಪ್ರಶ್ನಿಸಿ ಯಮನ ಬಳಿಗೆ ಹೋಗುವ ನಚಿಕೇತ, ವಿಷ್ಣುದ್ವೇಷಿಯಾದ ಹಿರಣ್ಯಕಶಿಪುವಿನ ಮಗನಾಗಿದ್ದೂ ವಿಷ್ಣುಭಕ್ತನಾಗಿ ನಾನಾ ಶಿಕ್ಷೆ ಅನುಭವಿಸುವ ಪ್ರಹ್ಲಾದ ಅವರ ನಡವಳಿಕೆ ಇಂಥದ್ದೇ.

ಅವಿಚಾರ ಮತ್ತು ಮೌಢ್ಯಗಳನ್ನು ಆಚರಿಸುವ ಜನರಲ್ಲಿ ಎರಡು ಬಗೆ. ಕುಟುಂಬದ ಚೌಕಟ್ಟಿನಲ್ಲಿ ಒಂದು ರೀತಿಯಲ್ಲಿ, ಕುಟುಂಬದ ಆಚೆ ಮತ್ತೊಂದು ರೀತಿಯಲ್ಲಿ ತಮ್ಮ ವೈಚಾರಿಕತೆ–ಅವಿಚಾರಿಕತೆಯನ್ನು ತೋರ್ಪಡಿಸಿಕೊಂಡು ಬದುಕಬೇಕಾದ ಅನಿವಾರ್ಯತೆ ಬಹಳಷ್ಟು ಜನರಿಗಿರುತ್ತದೆ. ಅದರಲ್ಲೂ ಮಹಿಳೆಯರಿಗೆ ಇದು ವಿಶೇಷವಾದ ಅನಿವಾರ್ಯತೆ. ಸಾಂಪ್ರದಾಯಿಕ ಕುಟುಂಬದ ವ್ರತ–ಆಚರಣೆಗಳಲ್ಲಿ ನಂಬಿಕೆ ಇಲ್ಲದಿದ್ದರೂ, ಇದ್ದಂತೆ ತೋರಿಸಿಕೊಂಡು ಅವುಗಳಲ್ಲಿ ಭಾಗಿಯಾಗುತ್ತಾ ಬದುಕುವ ಮಹಿಳೆಯರು ಒಂದು ವಿಧ. ಇವರು ಹಾಗಿರುವುದು ಇತರರ ಕಣ್ಣಿಗೆ ಅಷ್ಟಾಗಿ ಕಾಣಿಸುವುದಿಲ್ಲ. ವೈಚಾರಿಕತೆಯನ್ನು ಸಾಮಾಜಿಕವಾಗಿ ಪ್ರದರ್ಶಿಸುತ್ತಾ ಹಿರಿಯರನ್ನು ನೋಯಿಸಬಾರದೆಂದೊ, ಅಥವಾ ಚಿಕ್ಕಂದಿನಲ್ಲಿ ಬೆಳೆಸಿಕೊಂಡ ಅವೈಚಾರಿಕ ಸಂಗತಿಗಳನ್ನು ತಿರಸ್ಕರಿಸುವ ಬಲವಿಲ್ಲದೆ ಖಾಸಗಿಯಾಗಿ ಸಮರ್ಥಿಸಿಕೊಳ್ಳುವ ಪುರುಷರು ಮತ್ತು ಮಹಿಳೆಯರು. ಇಂಥವರು ಸುಲಭವಾಗಿ 'ಆಷಾಢಭೂತಿಗಳೆಂಬ' ದೂಷಣೆಗೆ ಅವರಿಗೆ ಸಮೀಪರಾದ ವಿಚಾರವಂತರಿಂದ



ಗುರಿಯಾಗುತ್ತಾರೆ.

ತಾಯಿ–ತಂದೆಯರು, ಗುರು–ಹಿರಿಯರು ಅನುಭವದ ಬಲದಿಂದ ವೈಚಾರಿಕರಾಗಿದ್ದರೂ, ಒಂದು ಕಾಲದಲ್ಲಿ ಅವರೂ ಮಕ್ಕಳೇ ಆಗಿದ್ದವರಾದ್ದರಿಂದ ಅವರೇನೂ ಸಿದ್ಧ ಸ್ಥಿತಿಯಲ್ಲಿರುವ ವೈಚಾರಿಕತೆಯನ್ನು ಬೆಳೆಸಿಕೊಂಡಿರುವುದಿಲ್ಲ. ಆವರಣದಲ್ಲಿರುವ ನಂಬಿಕೆ ಅವರನ್ನೂ ಆಳುತ್ತಿರುತ್ತವೆ. ಅವರ ಅನುಮಾನ–ಪ್ರಶ್ನೆಗಳಿಗೆ ಎಲ್ಲ ಸಂದರ್ಭಗಳಲ್ಲೂ ಅವಿಚಾರವನ್ನು ಧಿಕ್ಕರಿಸುವ ಶಕ್ತಿ ಇರುವುದಿಲ್ಲ. ಸಾಮಾನ್ಯವಾಗಿ ನಂಬಿಕೆ–ಅನುಮಾನಗಳು ಜೊತೆಜೊತೆಯಾಗೇ ಎಲ್ಲರಲ್ಲೂ ಇರುತ್ತವೆ. ಇವು ವ್ಯಕ್ತಿಗಳು ಹುಟ್ಟುವ ಮೊದಲೇ ಆವರಣದಲ್ಲಿದ್ದು, ಚಿಕ್ಕಂದಿನಲ್ಲೇ ಅವರಲ್ಲಿ ಬೇರೂರಿರುವ ನಂಬಿಕೆಗಳು, ಜನರನ್ನು ಆಳುವವರು 'ಸರಿ' ಎಂದು ನಂಬುವ–ನಂಬಿಸುವ ಆಲೋಚನೆ–ವಿಚಾರಗಳು ಜನರ ವಿಚಾರಶಕ್ತಿಯು ಬೆಳೆಯುವ ಮೊದಲೇ ಅವರ ಸಮ್ಮತಿಯನ್ನು ಪಡೆದಿರುವಂಥವು. ರೂಢಿಗತವಾಗಿರುವುದನ್ನು ಪ್ರಶ್ನೆಮಾಡಿ ಸ್ವೀಕರಿಸುವುದಕ್ಕಿಂತ, ಪ್ರಶ್ನಿಸದಿರುವುದೇ ಕ್ಷೇಮಕರ, ಎಂಬಂಥ ನಿಲುವು–ದೃಷ್ಟಿಕೋನಗಳು, ಬಹುಸಂಖ್ಯಾತ ಜನರ ನಂಬಿಕೆ, ನಿಲುವು ಮತ್ತು ದೃಷ್ಟಿಕೋನಗಳಾಗಿರುತ್ತವೆ. ಸದಾ ತಮ್ಮ ಮಕ್ಕಳ ಕ್ಷೇಮವನ್ನು ಬಯಸುವ ತಾಯಿ ತಂದೆಯರು ತಮ್ಮಲ್ಲೂ ಅವೇ ಅನುಮಾನ–ಪ್ರಶ್ನೆಗಳಿದ್ದರೂ ಮಕ್ಕಳು ಪ್ರಶ್ನಿಸುವುದನ್ನು, ಅನುಮಾನಿಸುವುದನ್ನು ಅಪಾಯಕರವೆಂದು, ತಲೆಹರಟೆಯೆಂದು, ಬುದ್ಧಿಗೇಡಿತನವೆಂದು ತಿಳಿಹೇಳುತ್ತಾರೆ. ಶಿಕ್ಷಿಸಿಯಾದರೂ ತಿದ್ದುತ್ತಾರೆ. ವಿಧೇಯತೆ–ನಂಬಿಕೆಯ ನಡವಳಿಕೆಯನ್ನು 'ಬದುಕುವ ದಾರಿ' ಎಂದು ಪ್ರೋತ್ಸಾಹಿಸುತ್ತಾರೆ. ದೈವಭಕ್ತ ತಾಯಿ ಹೇಳುವ 'ಕೃಷ್ಣ, ಬೆಣ್ಣೆ ಕದ್ದ, ಗೋಪಿಯರ ಸೀರೆ ಕದ್ದ, ಎಂಬೆಲ್ಲಾ ತುಂಟ ಲೀಲೆ'ಗಳನ್ನು ಕೇಳಿಸಿಕೊಂಡು ಆನಂದಿಸುತ್ತಲೇ 'ಕೃಷ್ಣ ದೇವರಾಗಿದ್ದರೂ ಹಾಗೆಲ್ಲಾ ಮಾಡುತ್ತಿದ್ದನಾ?' ಎಂದು ಮಗು ಕೇಳುವ ಪ್ರಶ್ನೆಯನ್ನು ತಾಯಿಯು 'ಅದು ಜಾಣ ಮಗುವಿನ ಮುಗ್ಧ ಪ್ರಶ್ನೆ' ಎಂದು ಮನ್ನಿಸಿ ನಕ್ಕುಬಿಡುತ್ತಾಳೆ. ಆದರೆ ಮಗು ಬೆಳೆದ 'ಮೇಲೆ ಕೇಳುವ ಅಂಥ ಪ್ರಶ್ನೆಗಳನ್ನು ಉದ್ಧಟತನ ಎಂದು ಹಿರಿಯರು ಖಂಡಿಸುತ್ತಾರೆ. ಗೋಪಿಯರನ್ನು ಕೃಷ್ಣನು ಹಾಗೆ ನಡೆಸಿಕೊಳ್ಳಬಾರದಿತ್ತೇನೋ ಎಂದು ಯೋಚಿಸುವ ಹೆಣ್ಣುಮಕ್ಕಳಂತೂ ಬೆಳೆದಮೇಲೆ ಅಂಥ ಪ್ರಶ್ನೆಗಳನ್ನು ಕೇಳುವಂತೆಯೇ ಇಲ್ಲ.

'ದಯೆಯೇ ಧರ್ಮದ ಮೂಲ' ಎಂಬುದು ಎಲ್ಲರಿಗೂ ಒಳ್ಳೆಯದನ್ನೇ ಬಯಸುವ ಸಂತರ ಅಭಿಪ್ರಾಯ. ಭಯವೇ ಧರ್ಮದ ಮೂಲ ಎನ್ನುವುದು ಸಮಾಜದಲ್ಲಿ ಆಚರಣೆಯಲ್ಲಿರುವ ಮೌಢ್ಯವನ್ನೇ ಧರ್ಮವೆನ್ನುವವರನ್ನು ಕುರಿತು ಪ್ರತಿಕ್ರಿಯಿಸುವ ವೈಚಾರಿಕರ ಅಭಿಪ್ರಾಯ.

ಭಯ, ನಂಬಿಕೆ, ಮೌಢ್ಯಾಚರಣೆ, ಎಲ್ಲವನ್ನೂ 'ಸಂಸ್ಕೃತಿ'ಯ ಹೆಸರಿನಲ್ಲಿ ಧರ್ಮೋದ್ಯಮವನ್ನಾಗಿ ಮಾಡಿಕೊಂಡು ಲಾಭ ಪಡೆಯುವವರು 'ನಮ್ಮ ಸಂಸ್ಕೃತಿ ನಮ್ಮ ಮಹಿಳೆಯರಲ್ಲಿ ಭದ್ರವಾಗಿದೆ' ಎಂದು ಹೇಳುವ ಮಾತುಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಈ ಮಾತುಗಳಲ್ಲಿ, ಅವಿಚಾರ, ನಂಬಿಕೆ, ಮೌಢ್ಯಗಳ ಬಿತ್ತನೆ ಮತ್ತು ಪೋಷಣೆ ಎಲ್ಲಿ ಆಗುತ್ತದೆ ಎಂಬ ಸ್ಪಷ್ಟತೆ ಇದೆ. ಅಂದರೆ, ಸಾಮಾಜಿಕ ಆವರಣದಲ್ಲಿರುವ ಕುಟುಂಬಗಳೊಳಗೆ ತಾಯಿ–ತಂದೆಯರಿಂದ, ಗುರು–ಹಿರಿಯರಿಂದ ಈ ಸಂಸ್ಕೃತಿಯ 'ಬಿತ್ತನೆ–ಪೋಷಣೆ' ಆಗುತ್ತದೆ. ಹುಟ್ಟುವ ಮಗು ಹುಟ್ಟುವಾಗಲೇ ನಿರ್ದಿಷ್ಟ ನಂಬಿಕೆ, ಮೌಲ್ಯ, ವಿಚಾರ–ಅವಿಚಾರ–ಮೌಢ್ಯಗಳ ಆವರಣದೊಳಗೆ ಹುಟ್ಟುತ್ತದೆ. ನಿರ್ವಾತದಲ್ಲಿ, ಶೂನ್ಯದಲ್ಲಿ ಹುಟ್ಟುವುದಿಲ್ಲ. ಬೆಳೆಯುತ್ತಾ ಹೋದಂತೆ ಆವರಣದಲ್ಲಿರುವ 'ಸಂಸ್ಕೃತಿ'ಯು ಇದಕ್ಕೆ ಪೂರಕವಾಗಿದ್ದಾಗಲಂತೂ ಇವುಗಳ ಬಲವರ್ಧನೆ ಚೆನ್ನಾಗಿಯೇ ಆಗುತ್ತದೆ. ಈ ಕಾರಣಕ್ಕಾಗಿಯೇ ಧರ್ಮೋದ್ಯಮದ ವ್ಯಾಪಾರಿಗಳು ಶಿಶುವಿಹಾರ ಮತ್ತು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದಕ್ಕೆ ತುಂಬಾ ಮಹತ್ವಕೊಡುತ್ತಾರೆ. ಜೊತೆಗೆ ಸಮಾಜ ಸೇವೆಯ ಹೆಸರಿನಲ್ಲಿ ಧಾರ್ಮಿಕ ಸಂಸ್ಥೆಗಳು ನಡೆಸುವ ಶಿಕ್ಷಣಸಂಸ್ಥೆಗಳ ಸಹಯೋಗವನ್ನು ಏರ್ಪಡಿಸಿಕೊಳ್ಳುತ್ತಾರೆ.

ಆಳುವ ವರ್ಗಗಳಾಗಿ ಅಲ್ಲದೆ ಆಳುವ ಪಕ್ಷ–ಸರ್ಕಾರಗಳ ಮೂಲಕ ರಾಜಕೀಯ ಶಕ್ತಿಯನ್ನು ಪಡೆದಿದ್ದಾಗಲಂತೂ ಇದನ್ನು ಮಾಡುವುದು ಇನ್ನೂ ಸುಲಭ. ಪಠ್ಯಪುಸ್ತಕಗಳ ರಚನೆ, ಶಿಕ್ಷಣನೀತಿ, ಸಾಂಸ್ಕೃತಿಕ ಚಟುವಟಿಕೆಗಳು ಎಲ್ಲದರ ಮೇಲೂ ತಮ್ಮ ನಿಯಂತ್ರಣವನ್ನು ಸಾಧಿಸುತ್ತಾರೆ. ಸಮಾಜದ ವೈಷಮ್ಯಗಳಿಂದಾಗಿ ನರಳುವ ಜನಸಾಮಾನ್ಯರು ಅವರ ದಿನನಿತ್ಯದ ಸಂಕಷ್ಟಗಳಿಗೆ ಪರಿಹಾರಗಳನ್ನು ಬಾಹ್ಯಪ್ರಪಂಚದ ರಾಜಕೀಯ ಪರ್ಯಾಯಗಳಲ್ಲಿ ಹುಡುಕುವ ಬದಲು ತಮ್ಮ ವ್ಯಕ್ತಿತ್ವದೊಳಗೇ ಹುಡುಕಿಕೊಳ್ಳಬೇಕೆಂದು ಸಲಹೆ ಮಾಡುವ ಆಪ್ತಸಮಾಲೋಚಕರು, ಅಧ್ಯಾತ್ಮವಾದಿಗಳು, ದೇವಮಾನವರು, ಸದ್ಗುರುಗಳಿಗೆ ಎಲ್ಲಿಲ್ಲದ ಬೇಡಿಕೆ ಬರುತ್ತದೆ. ಇಂಥ ಆವರಣದಲ್ಲಿ ಸಿಲುಕಿರುವ ಜನರ ಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಜನರು ವಿಚಾರವಂತರಾಗಬೇಕೆಂದು, ಮೌಢ್ಯವನ್ನು ಬಿಡಬೇಕೆಂದು ವಾದಿಸುವ ಜನರ ಮಾತನ್ನು ಆಲಿಸಿಯೂ ಬಹುತೇಕ ಜನರು ಅವಿಚಾರವನ್ನೇ, ಮೌಢ್ಯವನ್ನೇ ಆರಿಸಿಕೊಳ್ಳುವುದಕ್ಕೆ ಕಾರಣ ಅವರಲ್ಲಿ ಚಿಕ್ಕಂದಿನಲ್ಲೇ ಬಿತ್ತನೆಯಾಗಿ, ಪೋಷಣೆಗೊಂಡಿರುವ ಭದ್ರ ಅಡಿಪಾಯ.

ದೇವೀಸ್ತುತಿಯ 'ಯಾದೇವಿ ಸರ್ವಭೂತೇಷು

ಪುಟ 10 ಕ್ಕೆ

ದೇಶಭಕ್ತಿಯ ಅಬ್ಬರ ಮತ್ತು ಪರಮಾಣು ಹೊಣೆಗೇಡಿತನ



ಪರಮಾಣು ಸಂಘರ್ಷದ ಪ್ರಶ್ನೆಯನ್ನು, ಪಾಕಿಸ್ತಾನದೊಂದಿಗೆ ರಾಜಕೀಯ ಪ್ರಕ್ಷುಬ್ಧತೆ ಇರುವ ಒಂದು ಸಮಯದಲ್ಲಿ ತರುವುದು ಅತ್ಯಂತ ಅಪಾಯಕಾರಿ ಮತ್ತು ಹೊಣೆಗೇಡಿತನ. ಬಿಜೆಪಿಯ ಕದನಕಾರಿ ಅಬ್ಬರದ ದೇಶಭಕ್ತಿ ಪರಮಾಣು ಶಸ್ತ್ರಗಳ ಅಮಾನವೀಯ ಸ್ವರೂಪವನ್ನು ಕಡೆಗಣಿಸುತ್ತದೆ. 'ಮೊದಲ ಬಳಕೆ ಇಲ್ಲ' ಎಂಬ ಧೋರಣೆಯನ್ನು ಕೈಬಿಡಬಾರದು ಮಾತ್ರವಲ್ಲ, ಪಾಕಿಸ್ತಾನ ಕೂಡ 'ಮೊದಲು ಬಳಸುವುದಿಲ್ಲ' ಎಂಬುದು ತನ್ನ ಅಧಿಕೃತ ಧೋರಣೆ ಎಂದು ಘೋಷಿಸುವಂತೆ ಆಗ್ರಹಿಸಬೇಕು, ಮತ್ತು ದಕ್ಷಿಣ ಏಷ್ಯಾ ಒಂದು ಪರಮಾಣು ಶಸ್ತ್ರ-ಮುಕ್ತ ಪ್ರದೇಶವಾಗುವಂತೆ ಮಾಡಲು ಪ್ರಯತ್ನಗಳನ್ನು ನಡೆಸಬೇಕು.

ಪ್ರಕಾಶ ಕಾರಟ್

ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್‌ರವರ ಪರಮಾಣು ಅಸ್ತ್ರಗಳನ್ನು ಕುರಿತ ಇತ್ತೀಚಿನ ಟಿಪ್ಪಣಿಗಳು ಎಚ್ಚರಿಕೆಯ ಗಂಟೆಗಳನ್ನು ಬಾರಿಸಿವೆ. ಈ ಹಿಂದೆ ಭಾರತ ಪರಮಾಣು ಶಸ್ತ್ರಗಳನ್ನು ಕುರಿತಂತೆ 'ನಾವಾಗಿಯೇ ಮೊದಲು ಬಳಸುವುದಿಲ್ಲ'(ಎನ್‌ಎಫ್‌ಯು) ಎಂಬ ಧೋರಣೆಗೆ ದೃಢವಾಗಿ ಬದ್ಧವಾಗಿದ್ದುಕೊಂಡು ಬಂದಿದೆ, ಭವಿಷ್ಯದಲ್ಲಿ ಏನಾಗುತ್ತದೆ ಎಂಬುದು 'ಸಂದರ್ಭಗಳನ್ನು ಅವಲಂಬಿಸಿದೆ" ಎಂದು ಅವರು ಹೇಳಿದ್ದಾರೆ.

ಭಾರತ 1998ರಲ್ಲಿ ಒಂದು ಪರಮಾಣು ಶಕ್ತಿಯಾಗಿ ಮೂಡಿ ಬಂದಂದಿನಿಂದ ಅದು ಎನ್‌ಎಫ್‌ಯುಗೆ ಬದ್ಧವಾಗಿ ನಡೆದುಕೊಂಡಿದೆ. ಇದನ್ನು ಜನವರಿ 4, 2003ರಂದು ಭದ್ರತಾ ವ್ಯವಹಾರಗಳ ಸಂಪುಟ ಸಮಿತಿ ಭಾರತದ ಸಾಮರಿಕ ತತ್ವದ ಭಾಗವಾಗಿ ಸ್ಥಾಪಿಸಲಾಯಿತು. ಆದ್ದರಿಂದ ರಾಜನಾಥ್ ಸಿಂಗ್ ಈ ಹೇಳಿಕೆಯನ್ನು 1998ರ ಪರಮಾಣು ಪರೀಕ್ಷಣೆಗಳ ಸ್ಥಳವಾದ ಪೋಖ್ರಾನ್‌ನಲ್ಲಿ, ಅಟಲ್ ಬಿಹಾರಿ ವಾಜಪೇಯಿಯವರ ಮೊದಲ ಮರಣ ವಾರ್ಷಿಕದಂದು ನೀಡಿರುವುದು ಗಮನಾರ್ಹವಾಗಿದೆ.

ಎನ್‌ಎಫ್‌ಯು ಎಂಬುದು ಒಂದು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ದೇಶ, ತನ್ನ ಮೇಲೆ ಒಂದು ಎದುರಾಳಿ ಪರಮಾಣು ಅಸ್ತ್ರಗಳನ್ನು ಬಳಸಿ ಮೊದಲು ದಾಳಿ ಮಾಡಿದರೆ ಮಾತ್ರವೇ ಪರಮಾಣು ಶಸ್ತ್ರಗಳನ್ನು ಬಳಸುತ್ತೇವೆ, ಇಲ್ಲವಾದರೆ ಬಳಸುವುದಿಲ್ಲ ಎಂದು ಘೋಷಿಸುವ ಒಂದು ಧೋರಣೆ. ಹೀಗೆ ಎನ್‌ಎಫ್‌ಯು ಅಡಿಯಲ್ಲಿ ಪರಮಾಣು ಶಸ್ತ್ರಗಳನ್ನು ಒಂದು ಪ್ರತಿದಾಳಿಯ ಕ್ರಮವಾಗಿ ಮಾತ್ರ ಬಳಸಲಾಗುವುದು. ಇದು ಪರಮಾಣು ಶಸ್ತ್ರಗಳು ಇಡೀ ಮಾನವ ಕುಲಕ್ಕೇ ಬೆದರಿಕೆಯೊಡ್ಡುವ ಸಾಮೂಹಿಕ ವಿನಾಶದ ಅಸ್ತ್ರಗಳು ಎಂಬುದಕ್ಕೆ ಕೊಟ್ಟಿರುವ ಒಂದು ಮಾನ್ಯತೆ.

'ನಾವಾಗಿಯೇ ಮೊದಲು ಬಳಸುವುದಿಲ್ಲ' ಎಂದು ಘೋಷಿಸಿದ ಮೊದಲ ದೇಶ ಚೀನಾ. ನಾವು ಹೀಗೆಂದು ಘೋಷಿಸಿ ಅವರನ್ನು ಸೇರಿಕೊಂಡೆವು. ಚೀನಾ ಹಾಗೆಂದು ಘೋಷಿಸಿದ್ದು 1964ರಲ್ಲಿ ಅದು ಪರಮಾಣು ಶಸ್ತ್ರದ ಸ್ಥಾನಮಾನ ಪಡೆದಾಗ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಅದರ ನಾಟೋ ಮಿತ್ರದೇಶಗಳು ಈ ಎನ್‌ಎಫ್‌ಯುಗೆ ಬದ್ಧರಾಗಲು ಸತತವಾಗಿ ನಿರಾಕರಿಸಿಕೊಂಡು ಬಂದಿವೆ. ತದ್ವಿರುದ್ಧವಾಗಿ, ಅಮೆರಿಕ "ಸಂಘರ್ಷದ ಸಂದರ್ಭದಲ್ಲಿ ಪರಮಾಣು ಶಸ್ತ್ರಗಳನ್ನು ಮೊದಲಿಗೆ ಬಳಸುವ ಹಕ್ಕನ್ನು ಕಾದಿರಿಸಿಕೊಳ್ಳುತ್ತದೆ" ಎಂದು ನೇರವಾಗಿಯೇ ಹೇಳಿದೆ. ಸೋವಿಯೆತ್ ಒಕ್ಕೂಟಕ್ಕೆ ಉತ್ತರಾಧಿಕಾರಿಯಾಗಿ ಬಂದ ರಷ್ಯಾದ ಪ್ರಭುತ್ವವೂ ಎನ್‌ಎಫ್‌ಯುವನ್ನು ಸ್ವೀಕರಿಸುವುದಿಲ್ಲ.

ಬಿಜೆಪಿ-ಆರೆಸ್ಸೆಸ್ ಕೂಟ ಪರಮಾಣು ಶಸ್ತ್ರಗಳನ್ನು ಮಹಾಶಕ್ತಿಯ ಸ್ಥಾನಮಾನದ ಒಂದು ಲಕ್ಷಣ ಎಂದು ಕಾಣುತ್ತದೆ. ಪರಮಾಣು ಶಕ್ತಿ ಸ್ಥಾನಮಾನ ಕುರಿತಂತೆ ಅದರ ನಿಲುವು ರಾಷ್ಟ್ರೀಯ ಸಂಕುಚಿತತೆಯನ್ನು ಬಿಂಬಿಸುತ್ತದೆ. ರಾಜನಾಥ್ ಸಿಂಗ್ ಅವರ ಇತ್ತೀಚಿನ ಹೇಳಿಕೆಯ ಮೊದಲೂ, ಒಬ್ಬ ಬಿಜೆಪಿ ರಕ್ಷಣಾ ಮಂತ್ರಿ, ಮನೋಹರ್ ಪರ್ರಿಕ್ಕರ್ ಎನ್‌ಎಫ್‌ಯು ಧೋರಣೆಯನ್ನು ಕೈಬಿಡುವ ಮಾತಾಡಿದ್ದರು.

ಪ್ರಸಕ್ತ ಹೇಳಿಕೆಯ ಉದ್ದೇಶ ಪಾಕಿಸ್ತಾನವೇ ಎಂಬುದು ಸ್ವಯಂವೇದ್ಯ. ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಿಧಾನಿಕ ಬದಲಾವಣೆಗಳಿಗೆ ಪಾಕಿಸ್ತಾನದ ಸಿಟ್ಟಿನಿಂದ ಕೂಡಿದ ಸ್ಪಂದನೆಯ ನಂತರ ಮೋದಿ ಸರಕಾರ ತಾನು ಪಾಕಿಸ್ತಾನವನ್ನು ಸಾಧ್ಯವಿರುವ ಎಲ್ಲ ರೀತಿಗಳಿಂದಲೂ ಎದುರಿಸುತ್ತದೆ ಎಂಬ ಸಂಕೇತವನ್ನು ಕೊಡುತ್ತಿದೆ.

ಪರಮಾಣು ಸಂಘರ್ಷದ ಪ್ರಶ್ನೆಯನ್ನು, ಪಾಕಿಸ್ತಾನದೊಂದಿಗೆ ರಾಜಕೀಯ ಪ್ರಕ್ಷುಬ್ಧತೆ ಇರುವ ಒಂದು ಸಮಯದಲ್ಲಿ ತರುವುದು ಅತ್ಯಂತ ಅಪಾಯಕಾರಿ ಮತ್ತು ಹೊಣೆಗೇಡಿತನ. ಬಿಜೆಪಿಯ ಕದನಕಾರಿ ಅಬ್ಬರದ ದೇಶಭಕ್ತಿ ಪರಮಾಣು ಶಸ್ತ್ರಗಳ ಅಮಾನವೀಯ ಸ್ವರೂಪವನ್ನು ಕಡೆಗಣಿಸುತ್ತದೆ. ಭಾರತ ಮತ್ತು ಪಾಕಿಸ್ತಾನ 100 ಪರಮಾಣು ಯುದ್ಧಕ್ಷಿಪಣಿಗಳನ್ನು (ತಲಾ 50) ಸಿಡಿಸಿದರೆ ಮೊದಲಿಗೇ 2ಕೋಟಿ 10ಲಕ್ಷ ಮಂದಿ ಸಾಯುತ್ತಾರೆ, ಮತ್ತು ವಿಶ್ವದ ಅರ್ಧದಷ್ಟು ಓಝೋನ್ ಕವಚ ನಾಶಗೊಳ್ಳುತ್ತದೆ. ಭಾರತ ಮತ್ತು ಪಾಕಿಸ್ತಾನ ಪರೀಕ್ಷಿಸಿರುವ ತಲಾ ಒಂದು ಅತಿ ದೊಡ್ಡ ಬಾಂಬನ್ನು ನವದೆಹಲಿ ಅಥವ ಲಾಹೋರಿನ ಮೇಲೆ ಹಾಕಿದರೆ ತಕ್ಷಣವೇ 2ಲಕ್ಷದಿಂದ 4ಲಕ್ಷ ಜನ ಸಾಯುತ್ತಾರೆ, ಅದಕ್ಕಿಂತ ಹೆಚ್ಚು ಸಂಖ್ಯೆ ಜನಗಳು ಕ್ರಮೇಣ ನರಳಿ-ನರಳಿ ಸಾವಿಗೆ ಒಳಗಾಗುತ್ತಾರೆ.

ಎರಡೂ ದೇಶಗಳು ಎನ್‌ಎಫ್‌ಯು ಧೋರಣೆಗೆ ಬದ್ಧವಾಗಿದ್ದರೆ ಒಂದು ಆಕಸ್ಮಿಕ ಪರಮಾಣು ಯುದ್ಧದ(ಅಥವ ಮಾನವ ತಪ್ಪಿನಿಂದಾಗಿ ಸಾಂಪ್ರದಾಯಿಕ ರೀತಿಯ ಯುದ್ಧ ಪರಮಾಣು ಯುದ್ಧವಾಗಿ ಬಿಡುವ) ಅಪಾಯ ಕಡಿಮೆಯಾಗುತ್ತದೆ. ಭಾರತ-ಪಾಕಿಸ್ತಾನ ಸಂದರ್ಭದಲ್ಲಿ, ಒಂದು ಕ್ಷಿಪಣಿಯನ್ನು ಹಾರಿಸಿದರೆ, ಅದಕ್ಕೆ ಪ್ರತಿಕ್ರಿಯಿಸಲು ಇರುವ ಸಮಯ ಎಷ್ಟು ಅಲ್ಪವೆಂದರೆ, ಆ ಕೆಲವೇ ನಿಮಿಷಗಳಲ್ಲಿ ಸಂಬಂಧಪಟ್ಟ ಒಬ್ಬ ಅಧಿಕಾರಿ ಅದು ಪರಮಾಣು ಸ್ಫೋಟಕವನ್ನು ಹೊಂದಿದೆಯೋ ಇಲ್ಲವೋ ಎಂದು ತೀರ್ಮಾನಿಸಲಾರ. ಇಂತಹ ಸಂದರ್ಭಗಳಲ್ಲಿ ಎನ್‌ಎಫ್‌ಯು ಒಂದು ಪರಮಾಣು ಪ್ರತದಾಳಿಯ ಅಪಾಯವನ್ನು ಕಡಿಮೆ ಮಾಡುತ್ತದೆ.

ಅಂತರ್‍ರಾಷ್ಟ್ರೀಯವಾಗಿ, ಜಗತ್ತಿನಾದ್ಯಂತ ಪರಮಾಣು ಶಸ್ತ್ರಗಳ ಪೈಪೋಟಿ ತೀಕ್ಷ್ಣವಾಗಿ ಹೆಚ್ಚಿರುವ ಸಂದರ್ಭದಲ್ಲಿ ಎನ್‌ಎಫ್‌ಯು ಮತ್ತಷ್ಟು ಮಹತ್ವ ಪಡೆದಿದೆ. ಅಧ್ಯಕ್ ಟ್ರಂಪ್, ಅಮೆರಿಕವು ರಷ್ಯಾದೊಂದಿಗೆ 1987ರಲ್ಲಿ ಸಹಿ ಹಾಕಿದ 'ಮಧ್ಯಂತರ ಪರಮಾಣು ಶಕ್ತಿಗಳ ಸಂಧಿ'(ಐಎನ್‌ಎಫ್‌ಟಿ)ಯಿಂದ ಹೊರಬಂದಿದ್ದಾರೆ. ಅಮೆರಿಕ ತನ್ನ ಪರಮಾಣು ಶಸ್ತ್ರಭಂಡಾರವನ್ನು, ಕಾರ್ಯತಂತ್ರಾತ್ಮಕ ಪರಮಾಣು ಶಸ್ತ್ರಗಳನ್ನೂ, ಮೇಲ್ದರ್ಜೆಗೆ ಏರಿಸುತ್ತಿದೆ. ಪ್ರತಿಯಾಗಿ, ರಷ್ಯಾ ಪರಮಾಣು ಸಿಡಿತಲೆಗಳನ್ನು ಒಯ್ಯುವ ನವೀನ ಕ್ಷಿಪಣಿಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಭಾರತ ಈ ಪರಮಾಣು ಶಸ್ತ್ರ ಪೈಪೋಟಿಗೆ ಇನ್ನಷ್ಟು ಸೇರಿಸಬಾರದು, ಬದಲಿಗೆ ಅಂತರ್‍ರಾಷ್ಟ್ರೀಯ ಸಂಯಮ ಮತ್ತು ಪರಮಾಣು ಶಸ್ತ್ರಗಳ ರಾಶಿಗಳನ್ನು ತಗ್ಗಿಸುವುದಕ್ಕೆ ಕೆಲಸ ಮಾಡಬೇಕು.

ಮೋದಿ ಸರಕಾರ 'ಮೊದಲ ಬಳಕೆ ಇಲ್ಲ' ಎಂಬ ಧೋರಣೆಯನ್ನು ಕೈಬಿಡುವ ವಿಚಾರವನ್ನು ಬಿಡಬೇಕು. ಎನ್‌ಎಫ್‌ಯು ಧೋರಣೆಯನ್ನು ಕೈಬಿಡಬಾರದು ಮಾತ್ರವಲ್ಲ, ಪಾಕಿಸ್ತಾನ ಕೂಡ 'ಮೊದಲು ಬಳಸುವುದಿಲ್ಲ' ಎಂಬುದು ತನ್ನ ಅಧಿಕೃತ ಧೋರಣೆ ಎಂದು ಘೋಷಿಸುವಂತೆ ಆಗ್ರಹಿಸಬೇಕು, ಮತ್ತು ದಕ್ಷಿಣ ಏಷ್ಯಾ ಒಂದು ಪರಮಾಣು ಶಸ್ತ್ರ-ಮುಕ್ತ ಪ್ರದೇಶವಾಗುವಂತೆ ಮಾಡಲು ಪ್ರಯತ್ನಗಳನ್ನು ನಡೆಸಬೇಕು.

* 'ಮೊದಲ ಬಳಕೆ ಇಲ್ಲ' (ಎನ್‌ಎಫ್‌ಯು) ಎಂಬುದು ಒಂದು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ದೇಶ, ತನ್ನ ಮೇಲೆ ಒಂದು ಎದುರಾಳಿ ಪರಮಾಣು ಅಸ್ತ್ರಗಳನ್ನು ಬಳಸಿ ಮೊದಲು ದಾಳಿ ಮಾಡಿದರೆ ಮಾತ್ರವೇ ಪರಮಾಣು ಶಸ್ತ್ರಗಳನ್ನು ಬಳಸುತ್ತೇವೆ, ಇಲ್ಲವಾದರೆ ಬಳಸುವುದಿಲ್ಲ ಎಂದು ಘೋಷಿಸುವ ಒಂದು ಧೋರಣೆ. .
* ಇದು ಪರಮಾಣು ಶಸ್ತ್ರಗಳು ಇಡೀ ಮಾನವ ಕುಲಕ್ಕೇ ಬೆದರಿಕೆಯೊಡ್ಡುವ ಸಾಮೂಹಿಕ ವಿನಾಶದ ಅಸ್ತ್ರಗಳು ಎಂಬುದಕ್ಕೆ ಕೊಟ್ಟಿರುವ ಒಂದು ಮಾನ್ಯತೆ.
* ಎನ್‌ಎಫ್‌ಯು ಘೋಷಿಸಿದ ಮೊದಲ ದೇಶ ಚೀನಾ. ನಾವು ಹೀಗೆಂದು ಘೋಷಿಸಿ ಅವರನ್ನು ಸೇರಿಕೊಂಡೆವು.
* ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಅದರ ನಾಟೋ ಮಿತ್ರದೇಶಗಳು ಈ ಎನ್‌ಎಫ್‌ಯುಗೆ ಬದ್ಧರಾಗಲು ಸತತವಾಗಿ ನಿರಾಕರಿಸಿಕೊಂಡು ಬಂದಿವೆ.
* ಸೋವಿಯೆತ್ ಒಕ್ಕೂಟಕ್ಕೆ ಉತ್ತರಾಧಿಕಾರಿಯಾಗಿ ಬಂದ ರಷ್ಯಾದ ಪ್ರಭುತ್ವವೂ ಎನ್‌ಎಫ್‌ಯುವನ್ನು ಸ್ವೀಕರಿಸುವುದಿಲ್ಲ.
* ಭಾರತ ಮತ್ತು ಪಾಕಿಸ್ತಾನ 100 ಪರಮಾಣು ಯುದ್ಧಕ್ಷಿಪಣಿಗಳನ್ನು (ತಲಾ 50) ಸಿಡಿಸಿದರೆ ಮೊದಲಿಗೇ 2ಕೋಟಿ 10ಲಕ್ಷ ಮಂದಿ ಸಾಯುತ್ತಾರೆ, ಮತ್ತು ವಿಶ್ವದ ಅರ್ಧದಷ್ಟು ಓಝೋನ್ ಕವಚ ನಾಶಗೊಳ್ಳುತ್ತದೆ. ಭಾರತ ಮತ್ತು ಪಾಕಿಸ್ತಾನ ಪರೀಕ್ಷಿಸಿರುವ ತಲಾ ಒಂದು ಅತಿ ದೊಡ್ಡ ಬಾಂಬನ್ನು ನವದೆಹಲಿ ಅಥವ ಲಾಹೋರಿನ ಮೇಲೆ ಹಾಕಿದರೆ ತಕ್ಷಣವೇ 2ಲಕ್ಷದಿಂದ 4ಲಕ್ಷ ಜನ ಸಾಯುತ್ತಾರೆ, ಅದಕ್ಕಿಂತ ಹೆಚ್ಚು ಸಂಖ್ಯೆ ಜನಗಳು ಕ್ರಮೇಣ ನರಳಿ-ನರಳಿ ಸಾವಿಗೆ ಒಳಗಾಗುತ್ತಾರೆ.



370ನೇ ಕಲಮಿನ ರದ್ಧತಿಗೆ ಸುಪ್ರಿಂ ಕೋರ್ಟಿನಲ್ಲಿ ಈಗ ನಿವೃತ್ತ ರಕ್ಷಣಾ ಮತ್ತು ಸರಕಾರೀ ಉನ್ನತ ಅಧಿಕಾರಿಗಳ ಸವಾಲು

ಜಮ್ಮು ಮತ್ತು ಕಾಶ್ಮೀರದಲ್ಲಿ ಸೇವೆ ಸಲ್ಲಿಸಿರುವ ನಿವೃತ್ತ ರಕ್ಷಣಾ ಮತ್ತು ಸರಕಾರದ ಉನ್ನತ ಅಧಿಕಾರಿಗಳ ಒಂದು ಗುಂಪು ಆಗಸ್ಟ್ 17ರಂದು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನದ ರದ್ಧತಿ ಮತ್ತು ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿರುವ ನರೇಂದ್ರ ಮೋದಿ ಸರಕಾರದ ನಿರ್ಧಾರಗಳಿಗೆ ಸವಾಲು ಹಾಕುವ ಅರ್ಜಿಯನ್ನು ಸುಪ್ರಿಂ ಕೋರ್ಟಿಗೆ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ.

ಸರಕಾರ ಈ ನಿರ್ಧಾರಗಳಿಗೆ ಜಮ್ಮು ಮತ್ತು ಕಾಶ್ಮೀರದ ಜನತೆಯ ಮಂಜೂರಾತಿ ಪಡೆದಿರಲಿಲ್ಲ, ಮತ್ತು ಇದು ಯಾವ ತತ್ವಗಳ ಆಧಾರದಲ್ಲಿ ಆ ರಾಜ್ಯ ಭಾರತಕ್ಕೆ ಸೇರ್ಪಡೆಯಾಗಿತ್ತೋ ಅದರ ಮೇಲೆಯೇ ಪ್ರಹಾರ ಮಾಡಿದೆ ಎಂಬುದು ಈ ಅರ್ಜಿಯಲ್ಲಿ ಅಭಿಪ್ರಾಯ ಪಡಲಾಗಿದೆ.

370ನೇ ಕಲಮನ್ನು ತಿದ್ದುಪಡಿ ಮಾಡುವ ಮೊದಲು ಜನತೆಯ ಒಪ್ಪಿಗೆ ಪಡೆಯುವುದು ಸಂವಿಧಾನಿಕವಾಗಿ ಅನಿವಾರ್ಯ. ಈ ಕುರಿತ ರಾಷ್ಟ್ರಪತಿಯ ಆದೇಶಗಳು/ಕಾಯ್ದೆಗಳು ಕಾನೂನಿನ ಆಳ್ವಿಕೆ, ಒಕ್ಕೂಟತತ್ವ, ಪ್ರಜಾಪ್ರಭುತ್ವ ಮತ್ತು ಅಧಿಕಾರಗಳ ವಿಭಜನೆಯ ಮೂಲ ಮತ್ತು ಸಂರಚನಾತ್ಮಕ ನೀತಿಗಳಿಗೆ ವಿರುದ್ಧವಾಗಿವೆ, ಹಾಗೂ ಭಾರತದ ನಾಗರಿಕರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಎಮದು ಅರ್ಜಿಯಲ್ಲಿ ವಾದಿಸಲಾಗಿದೆ.

2010-11ರಲ್ಲಿ ಕೇಂದ್ರ ಗೃಹ ಮಂತ್ರಾಲಯ ನೇಮಿಸಿದ್ದ ಸಂವಾದಕಾರರ ತಂಡದ ಸದಸ್ಯರಾಗಿದ್ದ ರಾಧಾ ಕುಮಾರ್, ಆ ರಾಜ್ಯದಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಹಿಂದಲ್ ಹೈದರ್ ತಯ್ಯಬ್‌ಜಿ, ಈಗ ಜಮ್ಮು ಮತ್ತು ಕಾಶ್ಮೀರದಲ್ಲಿ ನೆಲೆಸಿರುವ, ಹಲವು ಪ್ರಶಸ್ತಿಗಳನ್ನು ಪಡೆದಿರುವ ವೈಮಾನಿಕ ಸೇನಾಧಿಕಾರಿ ಏರ್ ವೈಸ್ ಮಾರ್ಷಲ್(ನಿವೃತ್ತ) ಕಪಿಲ್ ಕಾಕ್, ಕಣಿವೆಯ ಉರಿ ವಲಯದಲ್ಲಿ ಸೇನಾಧಿಕಾರಿಯಾಗಿದ್ದ ಮತ್ತು 1965 ಹಾಗೂ 1971 ರ ಭಾರತ-ಪಾಕಿಸ್ತಾನ ಯುದ್ಧಗಳಲ್ಲಿ ಹೋರಾಡಿದ ಮೇಜರ್ ಜನರಲ್(ನಿವೃತ್ತ) ಅಶೋಕ ಕುಮಾರ್ ಮೆಹ್ತ, ಭಾರತ ಸರಕಾರದ ಅಂತರ-ರಾಜ್ಯ ಮಂಡಳಿಯ ನಿವೃತ್ತ ಕಾರ್ಯದರ್ಶಿ ಅಮಿತಾಭ ಪಾಂಡೆ, ಮತ್ತು ನಿವೃತ್ತ ಕೆಂದ್ರ ಗೃಹ ಕಾರ್ಯದರ್ಶಿ ಗೋಪಾಲ ಪಿಳ್ಳೆ ಅರ್ಜಿದಾರರಲ್ಲಿ ಪ್ರಮುಖರು.





ಹಾಸ್ಟೆಲ್ ಹೊರಗುತ್ತಿಗೆ ಸಿಬ್ಬಂದಿಗೆ ಮುಖ್ಯ ಮಂತ್ರಿ ಭರವಸೆ ಅನಿರ್ದಿಷ್ಟ ಧರಣಿ ಅಂತ್ಯ

ಸೇವೆಯಿಂದ ಬಿಡುಗಡೆ ಮಾಡಿರುವ ಹಾಸ್ಟೆಲ್ ಹೊರಗುತ್ತಿಗೆ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಸೇವೆಯಲ್ಲಿ ಮುಂದುವರೆಸಲಾಗುವುದು ಹಾಗೂ ಅವರ ವೇತನ, ಸೇವಾ ಭದ್ರತೆಗೆ ಸಂಬಂಧಿಸಿದಂತೆ ಒಂದು ತಿಂಗಳ ಒಳಗೆ ತೀರ್ಮಾನ ಕೈಗೊಳ್ಳುಲಾಗುವುದು ಎಂದು ಮುಖ್ಯ ಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಂಘದ ಅಡಿಯಲ್ಲಿ ಅಗಸ್ಟ್ 21 ಬುಧವಾರ ಬೆಳಿಗ್ಗೆ ಆರಂಭಿಸಿದ್ದ ಅನಿರ್ದಿಷ್ಟ ಸಾಮೂಹಿಕ ಧರಣಿ ಯನ್ನು ಗುರುವಾರ ಸಂಜೆ 6 ಗಂಟೆಗೆ ಹಿಂತೆಗೆದು ಕೊಳ್ಳಲಾಯಿತು



ಹಿಂದುಳಿದ ವರ್ಗಗಳ ಕಲ್ಯಾಣ. ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಹಾಸ್ಟೆಲ್ ಗಳಲ್ಲಿ ಅಡುಗೆ, ಕಾವಲು ಮುಂತಾದ 'ಡಿ' ವರ್ಗದ ಹುದ್ದೆ ಗಳಿಗೆ ನೇರ ನೇಮಕಾತಿ ಮೂಲಕ ಎಸ್‌ಎಸ್‌ಎಲ್‌ಸಿ ಪಾಸಾದ ಹೊಸಬರನ್ನು ನೇಮಿಸಿದ ಪ್ರಯುಕ್ತ ಆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 5 ಸಾವಿರ ಮಂದಿ ಹೊರಗುತ್ತಿಗೆ ನೌಕರರು ಕೆಲಸ ಕಳೆದು ಕೊಂಡು ಬೀದಿಪಾಲಾಗಿದ್ದರು. ನೌಕರರು ನಡೆಸಿದ ಹೋರಾಟಕ್ಕೆ ಸ್ಪಂದಿಸಿದ ಹಿಂದಿನ ಮುಖ್ಯ ಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರು ಮಾನವೀಯತೆ ದೃಷ್ಟಿಯಿಂದ 6 ತಿಂಗಳಂತೆ ಎರಡು ಬಾರಿ ಮರಳಿ ಕೆಲಸ ನೀಡಿದ್ದರು. ನೌಕರರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಭರವಸೆ ನೀಡಿದ್ದರು. ಅಷ್ಟರೊಳಗೆ ರಾಜ್ಯದ ರಾಜಕೀಯದಲ್ಲಾದ ಬದಲಾವಣೆಗಳಿಂದಾಗಿ ಹಾಸ್ಟೆಲ್ ಸಿಬ್ಬಂದಿಗಳು ಮತ್ತೆ ಅತಂತ್ರರಾದರು. ಇದೆ ಸಮಯಕ್ಕೆ ಸರಿಯಾಗಿ ರಾಜ್ಯ ಹಣಕಾಸು ಇಲಾಖೆಯವರು ಕೆಲಸದಿಂದ ಬಿಡುಗಡೆಯಾದ ಸಿಬ್ಬಂದಿಗಳಿಗೆ ಮರಳಿ ಕೆಲಸ ನೀಡಲು ನಿರಾಕರಿಸಿತು



ಅನಿವಾರ್ಯವಾಗಿ ಬಡಪಾಯಿ ಹೊರಗುತ್ತಿಗೆ ಸಿಬ್ಬಂದಿಗಳು ಬೆಂಗಳೂರಿಗೆ ಧಾವಿಸಿ ಬಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಹೋ ರಾತ್ರಿ ಧರಣಿ ಆರಂಭಿಸಿದರು. ಸಿಬ್ಬಂದಿಗಳ ಗೋಳನ್ನು ಗಮನಿಸಿದ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ರವರು ನೌಕರರ ಸಂಘದ ಮುಖಂಡರನ್ನು ಕರೆದು ಮಾತನಾಡಿದರು. ಅವರ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮುಖ್ಯ ಮಂತ್ರಿ ಗಳ ಸಲಹೆಗಾರರಾದ ಶ್ರೀ ಲಕ್ಷ್ಮಿ ನಾರಾಯಣ ರವರು ಉಪಸ್ಥಿತರಿದ್ದರು. ಸರ್ಕಾರದ ತೀರ್ಮಾನವನ್ನು ಧರಣಿ ನಿರತ ನೌಕರರಿಗೆ ತಿಳಿಸಲು ಸಚಿವರಾದ ಡಾ.ಸಿ.ಎನ್.ಅಶ್ವತ ನಾರಾಯಣ ಅವರನ್ನು ಕಳುಹಿಸಿದರು. ಧರಣಿ ಸ್ಥಳಕ್ಕೆ ಆಗಮಿಸಿದ ಸಚಿವರು ನೌಕರರ ಮನವಿಯನ್ನು ಸ್ವೀಕರಿಸಿ ಮಾತನಾಡುತ್ತಾ ಹೊರಗುತ್ತಿಗೆ ನೌಕರರ ಸೇವೆಯನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗುವುದು ಹಾಗೂ ನೌಕರರ ವೇತನ ಹಾಗೂ ಸೇವಾ ಭದ್ರತೆಯ ಕುರಿತು ಒಂದು ತಿಂಗಳ ಅವಧಿಯಲ್ಲಿ ಆರ್ಥಿಕ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡು ಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸಿಬ್ಬಂದಿಗಳಿಗೆ ಕೆಲವು ತಿಂಗಳುಗಳಿಂದ ಬಾಕಿ ಉಳಿದಿರುವ ವೇತನವನ್ನು ಸಂದಾಯ ಮಾಡಲಾಗುವುದು. ಎಂದು ಸಚಿವರು ತಿಳಿಸಿದರು. ಅಷ್ಟರೊಳಗೆ ಸಚಿವರಿಗೆ ಖಾತೆ ಹಂಚಿಕೆಯ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು ಇಲಾಖಾ ಸಚಿವರ ಸಮಕ್ಷಮ ಸಿಬ್ಬಂದಿಗಳ ಇತರ ಎಲ್ಲಾ ಬೇಡಿಕೆಗಳ ಬಗ್ಗೆ ವಿವರವಾದ ಚರ್ಚೆ ಸಾಧ್ಯವಾಗುವುದು ಎಂದು ಹೇಳಿದರು

ಸಚಿವರೊಂದಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತ ರಾದ ಶ್ರೀ ವಸಂತ ಕುಮಾರ್, ಸಮಾಜ ಕಲ್ಯಾಣ ಆಯುಕ್ತರಾದ ಶ್ರೀ ಪೆದ್ದಪ್ಪಯ್ಯ ಉಪಸ್ಥಿತರಿದ್ದರು. ನೌಕರರ ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಸಹ ಸಹ ಕಾರ್ಯದರ್ಶಿಗಳಾದ ಕೆ. ಹನುಮೇಗೌಡ ಮತ್ತು ಜಂಬಯ್ಯ ನಾಯಕ್ ಮುಖ್ಯ ಮಂತ್ರಿಯವರನ್ನು ಭೇಟಿಯಾದ ನಿಯೋಗದಲ್ಲಿದ್ದರು. ಈ ಹಿನ್ನೆಲೆಯಲ್ಲಿ ಅನಿರ್ದಿಷ್ಟ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು. 2 ದಿನಗಳ ಕಾಲ ನಡೆದ ಧರಣಿಯಲ್ಲಿ ಬೀದರ್, ಕಲಬುರಗಿ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ಒಂದು ಸಾವಿರಕ್ಕೂ ಹೆಚ್ಚು ಮಂದಿ



ಹಾಸ್ಟೆಲ್ ಹೊರಗುತ್ತಿಗೆ ನೌಕರರು ಭಾಗವಹಿಸಿದ್ದರು. ಮಹಿಳಾ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೊನೆಯಲ್ಲಿ, ಸಂಘಟನೆಯನ್ನು ಸ್ಥಳೀಯ ಮಟ್ಟದಿಂದ ಬಲಿಷ್ಠಗೊಳಿಸಲು ನಿರ್ಧರಿಸಲಾಯಿತು.







ಜಮ್ಮು ಮತ್ತು ಕಾಶ್ಮೀರ ಪರಿಸ್ಥಿತಿ ಕುರಿತು ಪ್ರತಿಪಕ್ಷಗಳ ಆಗ್ರಹ

"ತಕ್ಷಣ ಬಂಧಿತರ ಬಿಡುಗಡೆ–ಎಲ್ಲ ನಿರ್ಬಂಧಗಳ ತೆರವು"

ಜಮ್ಮು ಮತ್ತು ಕಾಶ್ಮೀರ ಕುರಿತಂತೆ ಈ ತಿಂಗಳ ಆರಂಭದಿಂದ ಕೈಗೊಂಡಿರುವ ಕ್ರಮಗಳ ವಿರುದ್ಧ ಪ್ರತಿಪಕ್ಷಗಳು ಅಗಸ್ಟ್ 22ರಂದು ನವದೆಹಲಿಯ ಜಂತರ್‌ಮಂತರ್‌ನಲ್ಲಿ ಒಂದು ಸಾರ್ವಜನಿಕ ಪ್ರತಿಭಟನೆಯನ್ನು ನಡೆಸಿದವು. ಡಿಎಂಕೆ ಮುತುವರ್ಜಿಯಿಂದ ನಡೆದ ಈ ಪ್ರತಿಭಟನೆಯಲ್ಲಿ ಎಡಪಕ್ಷಗಳು, ಕಾಂಗ್ರೆಸ್ ಸೇರಿದಂತೆ ಹಲವು ಪ್ರತಿಪಕ್ಷಗಳ ಮುಖಂಡರು ಭಾಗವಹಿಸಿದರು.

ಸಿಪಿಐ(ಎಂ) ಪರವಾಗಿ ಮಾತಾಡುತ್ತ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಇದು ನಮ್ಮ ಸಂವಿಧನದ ಆಧಾರ ಸ್ಥಂಭಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವದ ಮೇಲೆ ಏಕಕಾಲದಲ್ಲಿ ಮಾಡಿರುವ ದಾಳಿ ಎಂದು ವರ್ಣಿಸಿದರು., ಕಾಶ್ಮೀರದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ ಎಂದು ಹೇಳುತ್ತಾರೆ, ಹಾಗಿದ್ದರೆ ನಮ್ಮನ್ನು (ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಮತ್ತು ಕಾಂಗ್ರೆಸ್‌ನ ಹಿರಿಯ ಮುಖಂಡ ಗುಲಾಮ್ ನಭಿ ಆಝಾದ್‌ರನ್ನು) ಶ್ರೀನಗರ ವಿಮಾನ ನಿಲ್ದಾಣದಿಂದ ಹೊರಗೆ ಹೋಗದಂತೆ ನಿರ್ಬಂಧಿಸಿದ್ದಾದರೂ ಏಕೆ ಎಂದು ಪ್ರಶ್ನಿಸಿದರು. ಅಲ್ಲಿನ ಬೆಳವಣಿಗೆಗಳನ್ನು ಪರಿಶೀಲಿಸುತ್ತ ಇದೀಗ ಕಾಶ್ಮೀರವನ್ನು ಮಿಲಿಟರಿ ವಶಕ್ಕೆ ಒಪ್ಪಿಸಲಾಗಿದೆ, ಇದು ಕೇವಲ ಕಾಶ್ನೀರದ ಪ್ರಶ್ನೆಯಲ್ಲ, ಭಾರತದ ಸಂವಿಧಾನವನ್ನು ಬುಡಮೇಲು ಮಾಡುವ ಪಿತೂರಿಯ ಆರಂಭ, ಆದ್ದರಿಂದ ಈ ಪ್ರತಿಭಟನೆಯೂ ಭಾರತವನ್ನು, ಅದರ ಸಂವಿಧಾನವನ್ನು ರಕ್ಷಿಸುವ ಹೋರಾಟದ ಆರಂಭ, ಇದನ್ನು ಇನ್ನಷ್ಟು ವ್ಯಾಪಕವಾಗಿ ಮುಂದುವರೆಸಬೇಕು ಎಂದರು. ಬಿಜೆಪಿಯ ಹಿಂದಿನ ಪ್ರಧಾನ ಮಂತ್ರಿ ವಾಜಪೇಯಿಯವರು ಕಶ್ಮೀರಿಯತ್, ಜಮ್ಹೂರಿಯತ್(ಪ್ರಜಾಪ್ರಭುತ್ವ) ಮತ್ತು ಇನ್ಸಾನಿಯತ್(ಮಾನವೀಯತೆ) ಎಂಬ ಘೋಷಣೆ ಕೊಟ್ಟಿದ್ದರು. ಅವರ ಪಕ್ಷದ ಈ ಸರಕಾರ ಅವೆಲ್ಲಕ್ಕೂ ತಿಲಾಂಜಲಿ ಕೊಟ್ಟಿದೆ, ಅವರು ಕಾಶ್ಮೀರ ನಮ್ಮ ದೇಶದ ಅಭಿನ್ನ ಅಂಗ ಎಂದರು, ಈಗಿನ ಪ್ರಧಾನ ಮಂತ್ರಿಗಳು ಕಾಶ್ಮೀರದ ಜಮೀನು ಮಾತ್ರ ನಮ್ಮ ದೇಶದ ಭಾಗ, ಅಲ್ಲಿನ ಜನರಲ್ಲ ಎಂಬಂತೆ ವರ್ತಿಸುತ್ತಿದ್ದಾರೆ ಎಂದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮಾತಾಡುತ್ತ ಪ್ರಜಾಪ್ರಭುತ್ವ ಎಂಬುದು ಅವಿಭಾಜ್ಯ, ಕಾಶ್ಮೀರದ ಜನತೆಯನ್ನು ಮಿಲಿಟರಿ, ಅರೆಮಿಲಿಟರಿಯಿಂದ ದಬಾಯಿಸಿಟ್ಟು ದೇಶದ ಐಕ್ಯತೆಯ ಬಗ್ಗೆ ಮಾತಾಡಲು ಸಾಧ್ಯವಿಲ್ಲ, ಅದು ಸಾಂವಿಧಾನಿಕ ಐಕ್ಯತೆಯಿಂದ, ಹೃದಯಗಳನ್ನು ಜೋಡಿಸುವ ಮೂಲಕ ಮಾತ್ರ ಸಾಧ್ಯ ಎಂದರು. ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ ರಾಜಕೀಯ ಮುಖಂಡರನ್ನು ಬಂಧಿಸಿಡುವುದರಿಂದ ಸಾಧ್ಯವಿಲ್ಲ ಎಂದರು. ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ, ಉಗ್ರಗಾಮಿಗಳ ಎಡೆಬಿಡದ ಹೋರಾಟದಲ್ಲಿ ತನ್ನ ಆರು ಬಾಂಧವರನ್ನು ಕಳೆದುಕೊಂಡಿರುವ ಯುಸುಫ್ ತರಿಗಾಮಿಯವರನ್ನು ಬಂಧಿಸಿಡಲಾಗಿದೆ. ಈ ಮಿಲಿಟರಿ ಆಳ್ವಿಕೆಯಲ್ಲಿ ಬಹಳಷ್ಟು ಕಷ್ಟಪಡಬೇಕಾದವರು ಅಲ್ಲಿನ ಮಹಿಳೆಯರು ಎಂದು ಅವರು ವಿವರಿಸಿದರು.

ಇದು ಕೇವಲ ಕಾಶ್ಮೀರದ ಪ್ರಶ್ನೆಯಲ್ಲ, ಇಡೀ ದೇಶವನ್ನು ರಕ್ಷಿಸುವ, ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೋರಾಟ, ಇದನ್ನು ದೇಶದ ಎಲ್ಲೆಡೆಗೂ ಒಯ್ಯಬೇಕಾಗಿದೆ ಎಂದು ಪ್ರತಿಭಟನೆಯಲ್ಲಿ ಮಾತಾಡಿದ ಎಲ್ಲ ಮುಖಂಡರೂ ಹೇಳಿದರು.

ಈ ಪ್ರತಿಭಟನಾ ಸಭೆ ಅಂಗೀಕರಿಸಿದ ನಿರ್ಣಯ ರಾಜ್ಯದ ಚುನಾಯಿತ ಪ್ರತಿನಿಧಿಗಳೊಡನೆ ಸಮಾಲೋಚಿಸದೆ 370ನೇ ವಿಧಿಯನ್ನು ರದ್ದುಪಡಿಸಿರುವ ಕ್ರಮದ ಪರಿಣಾಮವಾಗಿ ಕಾಶ್ಮೀರ ಕಣಿವೆಯಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಜಾರಿಗೆ ಬಂದಂತಾಗಿದೆ, ಇಂತಹ ಸಂದರ್ಭದಲ್ಲಿ ನಾವು ಕಾಶ್ಮೀರಿಗಳ ಬೆಂಬಲಕ್ಕೆ ನಿಲ್ಲುತ್ತೇವೆ ಎಂದು ಹೇಳಿದೆ.

ಕೇಂದ್ರ ಸರಕಾರ ಸಂಪರ್ಕ ಸಾಧನಗಳ ಮೇಲೆ ಸಂಪೂರ್ಣ ನಿರ್ಬಂಧ ಹಾಕಿದೆ, ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರುಗಳನ್ನು ಮತ್ತು ಮುಖ್ಯಧಾರೆಯ ರಾಜಕೀಯ ಮುಖಂಡರನ್ನು, ಕಾರ್ಯಕರ್ತರನ್ನು ಮಾತ್ರವಲ್ಲ, ಅಧ್ಯಯನಕಾರರನ್ನು, ನಾಗರಿಕ ಸಮಾಜದ ಸದಸ್ಯರನ್ನು, ಸಾಮಾನ್ಯ ನಾಗರಿಕರನ್ನೂ ನಿರ್ಬಂಧಿಸಲಾಗಿದೆ. ಇಂತಹ ಕ್ರಮಗಳನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು, ಮುಖ್ಯಧಾರೆಯ ರಾಜಕೀಯ ಪಕ್ಷಗಳ ಎಲ್ಲ ಸಾರ್ವಜನಿಕ ಪ್ರತಿನಿಧಿಗಳನ್ನು ಮತ್ತು ಮುಗ್ಧ ನಾಗರಿಕರನ್ನೆಲ್ಲ ತಕ್ಷಣ ಬಿಡುಗಡೆ ಮಾಡಬೇಕು, ತಕ್ಷಣವೇ ರಾಜ್ಯದಲ್ಲಿನ ನಿರ್ಬಂಧಗಳನ್ನೆಲ್ಲ ತೆರವು ಮಾಡಿ ಸಾಮಾನ್ಯ ಸ್ಥಿತಿ ಏರ್ಪಡುವಂತೆ ಮಾಡಬೇಕು, ಜನರು ತಮ್ಮ ಬಂಧು–ಬಾಂಧವರನ್ನು ಸಂಪರ್ಕಿಸಲು ಸಾಧ್ಯವಾಗಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಲಾಯಿತು.



"ಸಂವಿಧಾನಕ್ಕೆ ಮೋಸ–ಕಾಶ್ಮೀರಕ್ಕೆ ವಿಶ್ವಾಸಘಾತ"– ಕಿರುಪುಸ್ತಕ ಬಿಡುಗಡೆ

ಜಮ್ಮು ಮತ್ತು ಕಾಶ್ಮೀರಕ್ಕೆ ನಮ್ಮ ಸಂವಿಧಾನವೇ ನೀಡಿರುವ ವಿಶೇಷ ಸ್ಥಾನಮಾನವನ್ನು ಕಿತ್ತುಕೊಂಡು ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಒಡೆದಿರುವುದನ್ನು ಸಮರ್ಥಿಸಿಕೊಳ್ಳಲು ದೊಡ್ಡಪ್ರಮಾಣದಲ್ಲಿ ಸುಳ್ಳುಗಳ ಸೃಷ್ಟಿ ಮತ್ತು ಪ್ರಚಾರ ನಡೆದಿದೆ, ಸತ್ಯಸಂಗತಿಗಳನ್ನು ಮರೆಮಾಚಲಾಗುತ್ತಿದೆ. ಭಾರತ ಸ್ವತಂತ್ರವಾದಾಗ ಜಮ್ಮು ಮತ್ತು ಕಾಶ್ಮೀರ ಭಾರತದ ಭಾಗವಾಗಿರಲಿಲ್ಲ, ಅಲ್ಲಿನ ಮಹಾರಾಜ ಭಾರತವನ್ನು ಸೇರಲು ಸಿದ್ಧರಿರಲಿಲ್ಲ, ಸ್ವತಂತ್ರವಾಗಿರಲು ಈಗಿನ ಬಿಜೆಪಿಯ ಪೂರ್ವಜರಾದ ಪ್ರಜಾ ಪರಿಷದ್ ಆತನಿಗೆ ಬೆಂಬಲ ನೀಡಿತ್ತು, ಪಾಕಿಸ್ತಾನದ ಅತಿಕ್ರಮಣಕಾರರು ಕಾಶ್ಮೀರ ಕಣಿವೆಯೊಳಕ್ಕೆ ನುಸುಳಿದಾಗ ಅವರನ್ನು ಕಾಶ್ಮೀರ ಕಣಿವೆಯ ಜನ ಎದುರಿಸಿ ಹೋರಾಟಕ್ಕಿಳಿದರು, ಆದರೆ ಆ ಮಹಾರಾಜ ತನ್ನ ಪರಿವಾರ, ವಂದಿ–ಮಾಗಧರೊಂದಿಗೆ ಜಮ್ಮುಗೆ ಪರಾರಿಯಾಗಿ ಆಗ ಭಾರತದ ಗವರ್ನರ್–ಜನರಲ್ ಆಗಿದ್ದ ಮೌಂಟ್‌ಬ್ಯಾಂಟನ್‌ಗೆ ಪತ್ರ ಬರೆದು ಮಿಲಿಟರಿ ನೆರವು ಕೇಳಿದರು, ಭಾರತಕ್ಕೆ ಸೇರ್ಪಡೆಯಾಗದೆ ಇದು ಸಾಧ್ಯವಿಲ್ಲ ಎಂದಾಗಲಷ್ಟೇ ಆತ ಭಾರತದೊಂದಿಗೆ ಸೇರ್ಪಡೆಗೆ ಶರತ್ತಿನ ಮೇಲೆ ಒಪ್ಪಿದರು, ಅತ್ತ ಮುಸ್ಲಿಮರೇ ಬಹುಸಂಖ್ಯಾತರಾಗಿದ್ದರೂ ಪಾಕಿಸ್ತಾನಕ್ಕೆ ಸೇರಲು ಜನಗಳು ಸಿದ್ಧರಿರಲಿಲ್ಲ, ಈಗ ರದ್ದಾಗಿರುವ 35ಎ ಕಲಮಿನ ಅಂಶವನ್ನೂ ಮಹಾರಾಜನೇ ಮೊದಲು ತಂದಾಗ ಪ್ರಜಾಪರಿಷದ್ ಅದನ್ನು ಬೆಂಬಲಿಸಿತ್ತು ಎಂಬಿತ್ಯಾದಿ ಐತಿಹಾಸಿಕ ಸತ್ಯಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ.

ಈ ಹಿನ್ನೆಲೆಯಲ್ಲಿ ನಿಜಸಂಗತಿಗಳನ್ನು ಜನಗಳ ಮುಂದಿಡಲು, ಮತ್ತು ಬಿಜೆಪಿ–ಆರೆಸ್ಸೆಸ್‌ನ ಪಿತೂರಿಯನ್ನು ಬಯಲಿಗೆಳೆಯುವ ಪ್ರಚಾರ–ಪ್ರಕ್ಷೋಭೆಯ ಭಾಗವಾಗಿ 'ಫ್ರಾಡ್ ಆನ್ ಕನ್ಸ್‌ಟಿಟ್ಯೂಶನ್–ಕಾಶ್ಮೀರ್ ಬಿಟ್ರೇಯ್ಡ್' (ಸಂವಿಧಾನಕ್ಕೆ ಮೋಸ– ಕಾಶ್ಮೀರಕ್ಕೆ ವಿಶ್ವಾಸಘಾತ) ಎಂಬ ಕಿರುಪುಸ್ತಕವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿದೆ. ಅದನ್ನು ಆಗಸ್ಟ್ 22ರಂದು ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಹಿರಿಯ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಬಿಡುಗಡೆ ಮಾಡಿದರು. ಸುಳ್ಳುಗಳ ಸೃಷ್ಟಿ ಮತ್ತು ಪ್ರಚಾರ ಆರೆಸ್ಸೆಸ್‌ನ ಜಾಯಮಾನವಾಗಿದ್ದು ಅವನ್ನೆಲ್ಲ ಪ್ರಶ್ನೋತ್ತರಗಳ ಸ್ವರೂಪದಲ್ಲಿ ಈ ಕಿರುಪುಸ್ತಕದಲ್ಲಿ ಬಯಲಿಗೆಳೆಯಲಾಗಿದೆ, ಎಲ್ಲ ಭಾರತೀಯ ಭಾಷೆಗಳಲ್ಲಿ ಇವನ್ನು ಪ್ರಕಟಿಸಲಾಗುವುದು ಎಂದು ಬೃಂದಾ ಕಾರಟ್ ಹೇಳಿದರು.



370ನೇ ವಿಧಿ ರದ್ಧತಿ ಸಾಧ್ಯವಿಲ್ಲ :

ಪ್ರೊ.ಪಟ್ಟಾಭಿರಾಮ ಸೋಮಯಾಜಿ

ಸಂವಿಧಾನದ 370ನೇ ವಿಧಿಯಲ್ಲಿ ಯಾವುದಾದರೂ ತಿದ್ದುಪಡಿಯಾಗಬೇಕಾದರೂ ಜಮ್ಮುಕಾಶ್ಮೀರದ ಸಂವಿಧಾನ ರಚನಾ ಸಮಿತಿಯ ಅನುಮೋದನೆಯೊಂದಿಗೆ ಮಾತ್ರ ಮಾಡಬೇಕೆಂಬ ನಿರ್ಬಂಧಗಳಿದ್ದುವು. ಈಗ ಭಾರತ ಸರಕಾರವು–ಹೇಗೂ ಕಾಶ್ಮೀರದ ಸಂವಿಧಾನ ರಚನಾ ಸಮಿತಿ ಇಲ್ಲ, ರಚನಾ ಸಮಿತಿಯ ಬದಲು ಇರಬೇಕಾದ ಚುನಾಯಿತ ಅಸೆಂಬ್ಲಿಯೂ ಮಂತ್ರಿಮಂಡಲವೂ ಇಲ್ಲ, ರಾಷ್ಟ್ರಪತಿ ಆಳ್ವಿಕೆಯಿಂದ ಗವರ್ನರರೇ ಮಂತ್ರಿಮಂಡಲ ಮತ್ತು ಅಸೆಂಬ್ಲಿ ಹಾಗೂ ಜನಸಮುದಾಯವನ್ನು ಪ್ರತಿನಿಧಿಸುತ್ತಾರೆಂಬ ಕಾಲ್ಪನಿಕ ನಿರೂಪಣೆ ನೀಡಿ ರಾಷ್ಟ್ರಪತಿ ಆದೇಶದ ಮೂಲಕ ಕಾಶ್ಮೀರಕ್ಕೆ ಸಂಬಂಧಿಸಿದ ಸಂವಿಧಾನದ 370ನೇ ವಿಧಿಯನ್ನು ಕಿತ್ತುಹಾಕುವ ಕ್ರಮಕೈಗೊಂಡಿರುವುದು ಅಸಂವಿಧಾನಿಕವಾಗಿದೆ ಎಂಬುದಾಗಿ ಚಿಂತಕ ಹಾಗೂ ಲೇಖಕ ಪ್ರೊ.ಪಟ್ಟಾಭಿರಾಮ ಸೋಮಯಾಜಿ ಹೇಳಿದರು.

ಕಾಶ್ಮೀರದ ಜನತೆಗೆ ಭಾರತ ಒಕ್ಕೂಟಕ್ಕೆ ಸೇರುವಾಗ ನೀಡಲಾದ ಸ್ವಾಯತ್ತೆಯ ಭರವಸೆಗಳನ್ನು ಮೊದಲಿನಿಂದಲೂ ಕಡೆಗಣಿಸಲಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತ ಇದ್ದಾಗಲೇ ಈ ಪ್ರಕ್ರಿಯೆಗಳು ಆರಂಭವಾಗಿದ್ದವು. ಆಂತರಿಕವಾದ ಕಾಶ್ಮೀರ ಸಂವಿಧಾನದನ್ವಯ ಕಾಶ್ಮೀರ ರಾಜ್ಯದ ಪ್ರಧಾನಿಯಾಗಿ ಚುನಾಯಿತರಾಗಿದ್ದ–ತುಂಬ ಜನಪ್ರಿಯ ರಾಜಕಾರಣಿಯಾಗಿದ್ದ–ಶೇಖ್ ಅಬ್ದುಲ್ಲಾರನ್ನು ಭಾರತ ಸರಕಾರವು 15 ವರ್ಷಗಳ ಕಾಲ ಸೆರೆಯಲ್ಲಿಟ್ಟಿತ್ತು. ಮೊದಲಿನ ಕಾಶ್ಮೀರ ರಾಜ್ಯ ಸರಕಾರವು ಬೇರೆ ರಾಜ್ಯಗಳಲ್ಲಿ ಇನ್ನೂ ಆರಂಭವಾಗಿರದಿದ್ದ ಭೂಸುಧಾರಣಾ ಕ್ರಮಗಳನ್ನು ಕೈಗೊಂಡಿತ್ತು. ಹೊರರಾಜ್ಯದವರು ಆ ರಾಜ್ಯದಲ್ಲಿ ಭೂಮಿ ಕೊಳ್ಳುವಂತಿರಲಿಲ್ಲ ಅಷ್ಟೆ. ಕಾಶ್ಮೀರದಲ್ಲಿ ಕೇಂದ್ರ ಸರಕಾರದ ನಿರ್ದೇಶನದಲ್ಲಿರುವ ಕೈಗೊಂಬೆ ಸರಕಾರಗಳೇ ಇದ್ದರೂ, ಅಲ್ಲಿನ ಜನ ಪರಿಶ್ರಮದಿಂದ ರಾಜ್ಯವನ್ನು ಅಭಿವೃದ್ಧಿಗೊಳಿಸಿದ್ದಾರೆ. ಕೇರಳ, ತಮಿಳುನಾಡು, ಕರ್ನಾಟಕಗಳ ಬಳಿಕ ನಾಲ್ಕನೇ ಅಭಿವೃದ್ಧಿ ಹೊಂದಿದ ರಾಜ್ಯ ಜಮ್ಮು–ಕಾಶ್ಮೀರವಾಗಿದೆ. ಅಭಿವೃದ್ಧಿಯ ಸುಳ್ಳು ನಗಾರಿ ಬಾರಿಸುತ್ತಿರುವ ಗುಜರಾತಿಗಿಂತಲೂ ಅದು ಮುಂದಿದೆ. ಕೇಂದ್ರದಲ್ಲಿ ಇಂದು ಆಡಳಿತವನ್ನು ನಿಯಂತ್ರಿಸುವ ದೊಡ್ಡ ಉದ್ಯಮಿಗಳಿಗೆ ಕಾಶ್ಮೀರದ ಭೂಮಿಯನ್ನು ಕಬಳಿಸಬೇಕಾಗಿದೆ. ಈ ನಿರ್ದೇಶನಕ್ಕೊಳಪಟ್ಟು ಹಾಗೂ ಮುಸ್ಲಿಂ ಬಹುತ್ವದ ಆಡಳಿತವನ್ನು ಬಗ್ಗುಬಡಿಯಬೇಕೆಂಬ ಏಕೈಕ ದುರುದ್ದೇಶದಿಂದ ಕೋಮುವಾದಿ ಕೇಂದ್ರ ಸರಕಾರ, ಕಾಶ್ಮೀರದ ಸ್ಥಾನವನ್ನು ಬಲಹೀನಗೊಳಿಸಲು 370ನೇ ವಿಧಿ ರದ್ದು ಪ್ರಕ್ರಿಯೆಯನ್ನು ರಾಷ್ಟ್ರಪತಿ ಘೋಷಣೆ ಮೂಲಕ ಮಾಡಿದೆ ಎಂದವರು ಆರೋಪಿಸಿದರು.

ಪ್ಯಾಲೆಸ್ತೀನ್‌ನಲ್ಲಿ ಅಲ್ಲಿನ ಮೂಲನಿವಾಸಿ ಪಾಲೆಸ್ತೀನಿಯರನ್ನು ಇಸ್ರೇಲ್ ಆಡಳಿತವು ಅಮೆರಿಕಾ ಬೆಂಬಲದಲ್ಲಿ ಹಂತ ಹಂತವಾಗಿ ನಿರ್ಗತಿಕರನ್ನಾಗಿ ಅವಮಾನಿತರನ್ನಾಗಿ ಮಾಡುತ್ತಿದೆ. ಅದೇ ರೀತಿ ಕಾಶ್ಮೀರಿ ಮುಸ್ಲಿಮರನ್ನು ನಿರ್ಗತಿಕರೂ ಅವಮಾನಿತರೂ ಆಗಿರುವಂತೆ ಮಾಡಿದ ಪಿತೂರಿ ಕೇಂದ್ರ ಸರಕಾರದ ಕ್ರಮವಾಗಿದೆ ಎಂದು ಪ್ರೊ.ಸೋಮಯಾಜಿ ಟೀಕಿಸಿದರು.

ಸಭೆಯ ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷ ಐ.ಎ.ಪ್ರಸನ್ನ ವಹಿಸಿದ್ದರು. ವೇದಿಕೆಯ ಕಾರ್ಯದರ್ಶಿ ಡಾ.ಕೃಷ್ಣಪ್ಪ ಕೊಂಚಾಡಿ ಪ್ರಸ್ತಾವನೆಯ ಮಾತುಗಳನ್ನಾಡಿದರು. ಮನೋಜ್ ವಾಮಂಜೂರು ಸ್ವಾಗತಿಸಿದರು. ಯೋಗೀಶ್ ಜಪ್ಪಿನಮೊಗರು ವಂದಿಸಿದರು.

ಬೈಂದೂರಿನಲ್ಲಿ ಪರಿಹಾರ ಸಂಗ್ರಹ



ಕರ್ನಾಟಕ ರಾಜ್ಯಾದ್ಯಂತ ಭೀಸಿದ ಬೀಕರ ಬಿರುಗಾಳಿ, ಮಳೆಯಿಂದಾಗಿ ಪ್ರಕೃತಿ ವಿಕೋಪದ ಪರಿಣಾಮ ಆಸ್ತಿ ಪಾಸ್ತಿ ನಷ್ಟ ಹಾಗೂ ಜೀವ ಹಾನಿಯಾದ ಕುಟುಂಬಗಳಿಗೆ ಪರಿಹಾರ ನಿಧಿಯನ್ನು, ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಸಿಐಟಿಯು ನೇತೃತ್ವದಲ್ಲಿ ಬೈಂದೂರು ಪೇಟೆಯಲ್ಲಿ ಸಾರ್ವಜನಿಕರಿಂದ ಸಾರ್ವಜನಿಕವಾಗಿ ಸಂಗ್ರಹಿಸಲಾಯಿತು. ಕಾರ್ಮಿಕ ಸಂಘದ ಮನವಿಗೆ ಸ್ಪಂದಿಸಿದ ಬೈಂದೂರಿನ ಸಹೃದಯ ನಾಗರಿಕರಿಂದ ಕೇವಲ ಎರಡೇ ಘಂಟೆ ಅವಧಿಯಲ್ಲಿ 9679 ರೂ. ಗಳನ್ನು ಸಂಗ್ರಹಿಸಿರುವುದು ವಿಶೇಷವಾಗಿದೆ. ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ, ಪದಧಿಕಾರಿಗಳಾದ ವೆಂಕಟೇಶ ಕೋಣಿ, ಶ್ರೀಧರ ಉಪ್ಪುಂದ, ಉದಯ ಗಾಣಿಗ ಮೊಗೇರಿ, ಮಂಜು ಪಡುವರಿ, ರಾಜು ದೇವಾಡಗ ಅರೆಹೊಳೆ ಕ್ರಾಸ್, ಮಂಜು ಪೂಜಾರಿ ಬಡಾಕೆರೆ, ರಾಮ ಕಂಭದಕೋಣೆ ಹಾಗೂ ರೋನಿ ನಜರತ್ ಪಡುವರಿ ಮುಂತಾದವರು ನೇತೃತ್ವ ವಹಿಸಿದ್ದರು.

ವರದಿ: ವೆಂಕಟೇಶ ಕೋಣಿ

ನೆರೆ ಸಂತ್ರಸ್ಥರಿಗೆ ಪರಿಹಾರ ಸಾಮಾಗ್ರಿ ಉ.ಕನ್ನಡ ಜಿಲ್ಲೆಗೆ ಹಸ್ತಾಂತರ

ಕುಂದಾಪುರ ಡಿವೈಎಫ್ಐ ಯುವಜನ ಸಂಘಟನೆಯು ಸಾರ್ವಜನಿಕರಿಂದ ಸಂಗ್ರಹಿಸಿದ ಪರಿಹಾರ ಸಾಮಾಗ್ರಿಗಳನ್ನು ಉತ್ತರ ಕನ್ನಡ ಜಿಲ್ಲೆಗೆ ತೆರಳಿ ಸಂತ್ರಸ್ಥ ಜನರಿಗೆ ಹಸ್ತಾಂತರಿಸಲಾಯಿತು. ಅಂಕೋಲದ ಕಲ್ಲೇಶ್ವರ ನೆರೆ ಸಂತ್ರಸ್ಥ ಪ್ರದೇಶದಲ್ಲಿರುವ ಅಂಗನವಾಡಿ ಕೇಂದ್ರದಿಂದ ವಿತರಣೆ ಮಾಡಲು ತೀರ್ಮಾನಿಸಲಾಯಿತು. ಈ ವೇಳೆಯಲ್ಲಿ ಸಿಪಿಐ(ಎಂ) ಪಕ್ಷದ ಕುಂದಾಪುರ ಕಾರ್ಯದರ್ಶಿ ಎಚ್ ನರಸಿಂಹ,ಡಿವೈಎಫ್ಐ ತಾಲೂಕು ಅಧ್ಯಕ್ಷರಾದ ರಾಜೇಶ್ ವಡೇರಹೋಬಳಿ, ಡಿವೈಎಫ್ಐ ಮುಖಂಡರಾದ ರಾಜ ಬಿಟಿಆರ್, ಗಣೇಶ್ ಕಲ್ಲಾಗರ, ಅಕ್ಷಯ ವಡೇರ ಹೋಬಳಿ, ಸಂಪತ್ ಬಿಟಿಆರ್ ಇದ್ದರು. ನೆರೆ ಪರಿಹಾರ ಸಾಮಾಗ್ರಿ ಸಂಗ್ರಹಿಸುವ ವೇಳೆಯಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ನಿಧಿಯನ್ನು ಡಿವೈಎಫ್ಐ ರಾಜ್ಯ ಸಮಿತಿ ಮೂಲಕ ಮುಖ್ಯಮಂತ್ರಿ ನೆರೆ ಪರಿಹಾರ ನಿಧಿಗೆ ಕಳುಹಿಸಲಾಗಿದೆ. ಜನತೆಯ ಸಂಕಷ್ಟ ಸಂಧರ್ಭಗಳಲ್ಲಿ ನೆರೆ ಪರಿಹಾರ ಸಂಗ್ರಹದಲ್ಲಿ ಕೈಜೋಡಿಸಿದ ನಾಗರಿಕ ಬಂಧುಗಳಿಗೆ, ಸಂಘ–ಸಂಸ್ಥೆಗಳಿಗೆ ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ರಾಜೇಶ್ ವಡೇರ ಹೋಬಳಿ

ಮೌಢ್ಯದ ಬಿತ್ತನೆ ಮತ್ತು ಪೋಷಣೆ.......

ಪುಟ 6 ರಿಂದ

ಕ್ಷುಧಾ ರೂಪೇಣ ಮುಂತಾಗಿ ಸ್ತುತಿಸುವ ಸ್ತೋತ್ರಗಳ ಜೊತೆಗೆ ಸರ್ವಭೂತೇಷು ಕೈಬಿಟ್ಟು 'ಅಸಂಖ್ಯ ಮನುಷ್ಯೇಷು (ವ್ಯಾಕರಣ ದೋಷವಿದ್ದರೆ ಪಂಡಿತರು ಮನ್ನಿಸಲಿ) ಮೌಢ್ಯರೂಪೇಣ ಸಂಸ್ಥಿತಾ, ಅವಿದ್ಯಾರೂಪೇಣ, ಭಯರೂಪೇಣ ಸಂಸ್ಥಿತಾ – ಎಂಬ ಇನ್ನಷ್ಟು ಸ್ತೋತ್ರಗಳನ್ನೂ ಸೇರಿಸಿ ದೇವಿಯನ್ನು ಪೂಜಿಸಬಹುದು. ಪ್ಲೇಗಮ್ಮ, ಸಿಡುಬಿನಮ್ಮ ಇದ್ದಂತೆ, ಈಗ ಏಡ್ಸಮ್ಮ ಇದ್ದಾಳೆ. ಹೊಸ ವಾಹನವನ್ನು ಕೊಂಡು ಬಳಸುವ ಮೊದಲು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಪೂಜೆಮಾಡಿಸುತ್ತಾರೆ. ಆಯುಧಪೂಜೆಯ ದಿನ ಕತ್ತಿ, ಬಂದೂಕು ಮುಂತಾದ ಆಯುಧಗಳನ್ನಲ್ಲದೆ, ಯಂತ್ರಗಳು, ವಾಹನಗಳು ಮತ್ತು ಲೋಹದಿಂದ ಮಾಡಿದ ಬಹುತೇಕ ಉಪಕರಣಗಳಿಗೆ ನಿಂಬೆಹಣ್ಣು, ತೆಂಗಿನಕಾಯಿ, ಕುಂಬಳಕಾಯಿಗಳನ್ನು, ಕೋಳಿ, ಆಡು, ಕುರಿಗಳನ್ನು ಬಲಿಕೊಡುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಜ್ಯೋತಿಷಿಗಳೂ ಬಳಸುವ, ಸಾಫ್ಟ್‌ವೇರ್ ಕಂಪೆನಿಗಳಿಗೆ ಕೋಟ್ಯಾಂತರ ರೂ.ಲಾಭ ತರುವ, ಟೆಕ್ಕಿಗಳಿಗೆ ಜೀವನೋಪಾಯ ಸೌಲಭ್ಯ, ವಿದೇಶಪ್ರಯಾಣದ ಅವಕಾಶಗಳನ್ನು ಒದಗಿಸುವ ಕಂಪ್ಯೂಟರಮ್ಮ, ಮೊಬೈಲಮ್ಮ, ಸ್ಮಾರ್ಟ್ ಫೋನಮ್ಮ, ರೊಬೋಟಮ್ಮ, ಅಥವಾ ಇವುಗಳ ಪ್ರತೀಕವಾದ ಗಂಡುದೇವತೆಗಳು ಇನ್ನೂ ಯಾಕೆ ಹುಟ್ಟಿಲ್ಲವೋ ಏನೋ. ಬಹುಶಃ ಅವುಗಳಿಂದ ಅಗೋಚರವಾಗಿ ತೊಂದರೆಯಾಗುತ್ತಿದೆಯೆಂಬ ಭಾವನೆ ಜನರಿಗೆ ಬಂದಾಗ ಅಂಥ ದೇವತೆಗಳೂ ಹುಟ್ಟಿ ಪೂಜೆಗೊಳ್ಳಬಹುದು.

ಇತ್ತೀಚೆಗೆ, ಚಂದ್ರಯಾನದ ರಾಕೆಟ್ ಉಡಾಯಿಸುವಾಗ ಯೋಜನೆಯ ಕೆಲವು ವಿಜ್ಞಾನಿ–ತಂತ್ರಜ್ಞಾನಿಗಳ ಹಣೆಗಿದ್ದ ಭಕ್ತಿಸೂಚಕ ಲಾಂಛನಗಳನ್ನು ಎಷ್ಟು ಮಂದಿ ಗಮನಿಸಿದರೋ ತಿಳಿಯದು. ಈ ವಿಜ್ಞಾನಿ–ತಂತ್ರಜ್ಞಾನಿಗಳು ವಯಸ್ಕರಾಗಿ ತಮ್ಮ ವೃತ್ತಿಯ ಶಿಸ್ತಿನಲ್ಲಿ ಎಷ್ಟೇ ವೈಚಾರಿಕತೆಯನ್ನು ಬೆಳೆಸಿಕೊಂಡಿದ್ದರೂ, ಅವರ ಹುಟ್ಟು ಮತ್ತು ಬಾಲ್ಯ ರೂಪಿಸಿರುವ ಕುಟುಂಬಗಳ ಹಿನ್ನೆಲೆ, ತಾಯಿ–ತಂದೆಯರ ಧಾರ್ಮಿಕತೆಗಳು ಖಂಡಿತವಾಗಿಯೂ ಅವರ ಈಗಿನ ಮನಸ್ಥಿತಿ ಮತ್ತು ದೃಷ್ಟಿಕೋನಗಳನ್ನು ನಿರ್ಧರಿಸಿರುವ ಸಾಧ್ಯತೆಗಳು ಹೆಚ್ಚು. ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆಯಲ್ಲಿ ಎರಡು ಅರ್ಥಗಳು ಹೊಮ್ಮುತ್ತವೆ. ಒಂದು: ಜನರು ದೇವರನ್ನು ಕಷ್ಟಬಂದಾಗ ಮಾತ್ರ ಆಶ್ರಯಿಸಿ ಉಳಿದಂತೆ ಉಪೇಕ್ಷಿಸುತ್ತಾರೆ ಎಂಬ ಟೀಕೆ. ಎರಡು: ಸಂಕಷ್ಟ ಎದುರಾದಾಗ ಜನರು ವೈಚಾರಿಕವಾಗಿ ಯೋಚಿಸಿ ಪರಿಹಾರಗಳನ್ನು ಕಂಡುಕೊಳ್ಳುವ ಬದಲು, ಬಾಲ್ಯದಲ್ಲಿ ತಾಯಿ–ತಂದೆಯರು ಬಿತ್ತಿದ ಮತ್ತು ಪೋಷಿಸಿ ಬೆಳೆಸಿದ ನಂಬಿಕೆಯನ್ನು ಆಶ್ರಯಿಸುತ್ತಾರೆ ಎಂಬುದು. ವಯಸ್ಸು ಯಾವುದೇ ಇದ್ದರೂ ನೋವಿನ ಸ್ಥಿತಿಯಲ್ಲಿ 'ಅಮ್ಮಾ' ಎಂದು ಕೂಗುವುದು ಧಾರ್ಮಿಕ ನಂಬಿಕೆಯ ಅಭಿವ್ಯಕ್ತಿಯಲ್ಲ. ಗರ್ಭಾವಸ್ಥೆಯನ್ನೂ ಒಳಗೊಂಡಂತೆ ತಾಯಿಯೊಂದಿಗಿನ ಮೊದಲ ಐದಾರು ವರ್ಷಗಳ ಅಂಟಿನ ನಂಟಿನಲ್ಲಿದ್ದ ಮಗುವಿನಲ್ಲಿನ ಭದ್ರತಾ ಭಾವನೆ, ಅವಳಿಲ್ಲದೆ ತಾನು ಬದುಕಲಾರೆನೆಂಬ ಅಸಹಾಯಕ ಸ್ಥಿತಿ ಮತ್ತು ತಾಯಿ ತನ್ನ ರಕ್ಷಕಿಯೆಂಬ ಅಚಲ ವಿಶ್ವಾಸದ ಅಭಿವ್ಯಕ್ತಿ. ಇವನ್ನೇ ತಂದೆಗೆ ವರ್ಗಾಯಿಸಿದಾಗ ತಾಯಿಯ ಜೊತೆಗೆ ಅಥವಾ ಅವಳಿಗಿಂತ ಬೇರೆಯಾದ, ಇನ್ನೂ ಬಲಿಷ್ಠವಾದ ಆಸರೆಯೆಂಬ ನಂಬಿಕೆಯಲ್ಲಿ ತಂದೆ ಮಗುವಿನ ರಕ್ಷಕನಾಗಿ ಕಾಣಿಸುತ್ತಾನೆ.

ಮಗುವಿನ ದೃಷ್ಟಿಯಿಂದ ಎಲ್ಲಿ ಅಸ್ತಿತ್ವದ ಪೋಷಣೆ ಮತ್ತು ಭದ್ರತೆಗಳು ದೊರೆಯುತ್ತವೋ ಅದೇ ಮನೆ. ಈ ದೃಷ್ಟಿಯಿಂದ ಪೋಷಣೆ ಮತ್ತು ಭದ್ರತೆ ಎರಡೂ ಸಿಗುವ ತಾಯಿಯ ಗರ್ಭವನ್ನು ಮಗುವಿನ ಮೊದಲ ಮನೆ ಎಂದು ಪರಿಗಣಿಸಬಹುದು. ಹುಟ್ಟಿ, ಬೆಳೆದ ಮೇಲೂ ಮನೆ ಎಂಬ ಭಾವನೆಯನ್ನು ಕೊಡುವ ಸ್ಥಳಗಳೆಲ್ಲಾ ತಾಯಗರ್ಭದ ವಿಸ್ತರಿತ ತಾಣಗಳೇ ಆಗುತ್ತವೆ. ಎಷ್ಟೇ ವಯಸ್ಸಾದ ಮೇಲೂ, ಎಲ್ಲಿ ಹೋದರೂ ಆದಷ್ಟು ಬೇಗ ಮನೆಗೆ ಹಿಂದಿರುಗಬೇಕೆಂಬ ವಾಂಛೆಯಲ್ಲಿ, 'ಫೀಲ್ ಅಟ್ ಹೋಮ್' ಎಂಬ ಉಪಚಾರದಲ್ಲಿ, ಇದು ನಿಮ್ಮ 'ಸೆಕೆಂಡ್ ಹೋಮ್' ಎಂಬ ಹೋಟೆಲಿನ ವ್ಯಾಪಾರೀ ಪ್ರಚಾರದಲ್ಲಿ ಅವ್ಯಕ್ತವಾಗಿರುವ ಮನೆ ಗರ್ಭದ ವಿಸ್ತರಣೆಯೇ. ಇದನ್ನು ಇನ್ನೂ ವಿಸ್ತರಿಸಿದರೆ, ನಮ್ಮೂರು, ನಮ್ಮ ಬಳಗ, ನಮ್ಮ ದೇಶ, ನಮ್ಮ ಭೂಮಿ ಎನ್ನುವವರೆಗೂ ವಿಸ್ತರಿಸುತ್ತದೆ. ಮಾತೃಭೂಮಿ, ಪಿತೃಭೂಮಿಗಳ ದೇಶಪ್ರೇಮದಲ್ಲಿ ಈ ಮನೆಯ ನಂಟು ವ್ಯಕ್ತರೂಪದಲ್ಲೇ ಕಾಣಿಸುತ್ತದೆ. ಆಗ ತಾಯಿಯೇ ದೇಶವಾಗಿ, ದೇಶದ ಪ್ರತೀಕವು ದೇವಿಯಾಗಿ, ದೇವಿಯ ಪ್ರತೀಕವು ಕುಮಾರಿಯಾಗಿ ಪೂಜೆಗೊಳ್ಳುತ್ತಾಳೆ. ವೈಚಾರಿಕವಾದ ಮಾನವಶಾಸ್ತ್ರೀಯ ಅಧ್ಯಯನದ ಬೆಳಕಿನಲ್ಲಿ ನೋಡುವವರಿಗೆ ಕಾಣಿಸುವಂತೆ, ಎಲ್ಲಾ ಧಾರ್ಮಿಕ ಆಚರಣೆಗಳ ಮೂಲದಲ್ಲಿರುವುದು ತಾಯಿ–ತಂದೆಯರ ನಂಟಿನ–ಅಂಟು. ಕಿರಿಯರಿಗೆ ಹಿರಿಯರ ಬಗೆಗಿನ ಪ್ರೀತಿ. ಸತ್ತ ಹಿರಿಯರ ಬಗೆಗಿನ ಅವ್ಯಕ್ತ ಭಯ. ತಾನು ಎಂದೆಂದಿಗೂ ಒಂದಲ್ಲ ಒಂದು ರೂಪದಲ್ಲಿ ಬದುಕಿರಬೇಕೆಂಬ ಆಸೆ. ಇವನ್ನು ಹೊರತುಪಡಿಸಿದ ಯಾವ ದೈವಿಕತೆ, ಧಾರ್ಮಿಕತೆ ಅಥವಾ ಅಧ್ಯಾತ್ಮಿಕತೆಗಳೂ ಇಲ್ಲ.

ಎಲ್ಲಿ ಕಳೆದುಕೊಂಡಿದ್ದೇವೆಯೋ ಅಲ್ಲೇ ಹುಡುಕಿಕೊಳ್ಳಬೇಕೆಂಬ ನಾಣ್ಣುಡಿಯಿದೆ. ಈಗಿರುವ ಅವಿಚಾರ – ಮೌಢ್ಯಗಳಿಂದ ಜನರು ಹೊರಬರಬೇಕಿದ್ದರೆ, ಮಗುವಿನ ಮೊದಲ ಗುರುಗಳಾದ ತಾಯಿ–ತಂದೆಯರು, ಅದರಲ್ಲೂ ಕಿರಿಯವಯಸ್ಸಿನ ತಾಯಿಯಂದಿರು ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಮಾರ್ಗಗಳನ್ನು ಹುಡುಕಬೇಕು. ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಒಂದು ಕುಟುಂಬವೇ ಶಿಕ್ಷಣ ಪಡೆದಂತೆ ಎಂಬ ಮಾತಿದೆ. ಮುಂದುವರೆದು ಹೇಳುವುದಾದರೆ, ಎಳೆಯ ವಯಸ್ಸಿನಲ್ಲಿ ಹೆಣ್ಣುಮಕ್ಕಳು ವೈಚಾರಿಕತೆಯನ್ನು ಬೆಳೆಸಿಕೊಳ್ಳುವುದರ ಮೂಲಕ, ಮೌಢ್ಯದಿಂದ ಬಿಡಿಸಿಕೊಳ್ಳುವುದರ ಮೂಲಕ, ಇಡೀ ಸಮಾಜವೇ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ, ಮೌಢ್ಯದಿಂದ ಬಿಡಿಸಿಕೊಳ್ಳುವಂತೆ ಮಾಡುವ ಶಕ್ತಿ ಅವರಿಗಿದೆ ಎಂದು ಹೇಳಬಹುದು. ಇದರ ಅರ್ಥ, ಜನರು ಅವೈಚಾರಿಕರಾಗಿದ್ದರೆ, ಅಥವಾ ಮೌಢ್ಯದಲ್ಲಿ ಮುಳುಗಿದ್ದರೆ, ಅದಕ್ಕೆ ಕಾರಣ ಮತ್ತು ಅದರ ಹೊಣೆಯೆಲ್ಲಾ ಹೆಣ್ಣುಮಕ್ಕಳದ್ದೇ ಎಂದಲ್ಲ. ●

BISFF '19
AUG 15 - 18, 2019

ಕಿರುಚಿತ್ರ ಸ್ವತಂತ್ರ ಅಭಿವ್ಯಕ್ತಿಯ ಅಪಾರ ಸಾಧ್ಯತೆಯುಳ್ಳ ಮುಂದೆ ವ್ಯಾಪಕವಾಗಿ 'ಮುಖ್ಯಧಾರೆ'ಯದ್ದಾಗಿ ಬೆಳೆಯಲಿರುವ ಒಂದು ಅಭಿವ್ಯಕ್ತಿಯ ಹಾಗೂ ಸಂವಹನದ ಮಾಧ್ಯಮ ಎಂದು ತೋರುತ್ತದೆ. ಅದನ್ನು ಬಳಸಿಕೊಳ್ಳಲು ಪ್ರಗತಿಪರ ಸಾಮಾಜಿಕ-ಸಾಂಸ್ಕೃತಿಕ ಚಳುವಳಿಗಳು ಮತ್ತು ರಾಜಕೀಯ ಸಂಘಟನೆಗಳು ಮುಂದಾಗಬೇಕಾಗಿದೆ. ಇದು ಕಿರುಚಿತ್ರಗಳ ಲೋಕದಲ್ಲಿ ಮೂರು ದಿನಗಳನ್ನು ಕಳೆದ ನಂತರದ ನನ್ನ ಅನಿಸಿಕೆ.

ಬೆಂಗಳೂರು ಕಿರುಚಿತ್ರೋತ್ಸವ-2019

ಅಗಾಧ ಸಾಧ್ಯತೆಯ ಕಿರುಚಿತ್ರಗಳ ಲೋಕದಲ್ಲಿ ಮೂರು ದಿನ

ವಸಂತರಾಜ ಎನ್.ಕೆ.

ಪರೀಕ್ಷೆ ಹತ್ತಿರ ಬಂದಿದ್ದರಿಂದ ನಿದ್ರೆ ತೂಗಿ ಬೀಳುವವರೆಗೆ ಓದು. ರಾತ್ರಿಯೆಲ್ಲಾ ದೂರದಲ್ಲೆಲ್ಲೋ ಗುಂಡಿನ ಸದ್ದಿನ ನಡುವೆಯೇ ನಿದ್ರೆ. ಬೆಳಿಗ್ಗೆ ಗುಡ್ಡ ಕಣಿವೆಗಳ ಮೂಲಕ ಹಾದು ಹೋಗುವ ಸುಂದರ ಹಾದಿಯಲ್ಲಿ ಶಾಲೆಗೆ ಪಯಣ. ಹಾದಿಯಲ್ಲಿ ಸಿಗುವ ಮನೆಗಳ ಮೇಲೆ ಗುಂಡಿನ ಗುರುತುಗಳ ಲೆಕ್ಕ ಹಾಕುವ ಆಟ, ಹಾದಿಯಲ್ಲಿ ಸಿಗುವ ಒಂದಲ್ಲ ಒಂದು ಮನೆಯಲ್ಲಿ ಮನೆ ಗಂಡಸು ಕಾಣೆಯಾದದ್ದರ ಸತ್ತದ್ದರ ಬಗ್ಗೆ ಗೋಳಾಟ, ಹಾದಿಯಲ್ಲಿ ಸಿಗುವ ಮಿಲಿಟರಿ ಚೆಕ್ ಪೋಸ್ಟ್ ನಲ್ಲಿದ್ದ 'ಮೀಸೆ ಅಂಕಲ್' ಯಾಕೆ ಕಾಣುತ್ತಿಲ್ಲ ಎಂಬ ಪ್ರಶ್ನೆ, ಇದು ಬಾಲಕಿ ನೂರೆಯ ದಿನಚರಿ. ಹೀಗಿರುವಾಗ ಒಂದು ರಾತ್ರಿ ನಿದ್ದೆ ಬರದೆ ರಾತ್ರಿಯಿಡೀ ಎಚ್ಚರವಿದ್ದಾಗ ದೂರದ ಗುಂಡಿನ ಸದ್ದು ಕೇಳುವುದಿಲ್ಲ. ಇನ್ನೊಂದು ದಿನ ನಿದ್ದೆ ಬರದಿದ್ದಾಗಲೂ ದೂರದ ಗುಂಡಿನ ಸದ್ದು ಕೇಳುವುದಿಲ್ಲ. ಆದರೆ ಶಾಲೆಯಲ್ಲಿ ಹಗಲಲ್ಲಿ ನಿದ್ದೆ ಮಾಡಿ ಸಿಕ್ಕಿ ಹಾಕಿಕೊಳ್ಳುತ್ತಾಳೆ. ಯಾಕೆ ಹೀಗೆ ಎಂದು ಕೇಳಿದ ಹತ್ತಿರದ ಗೆಳತಿಗೆ, 'ರಾತ್ರಿ ನಾನು ನಿದ್ದೆ ಮಾಡದಿದ್ದರೆ ಗುಂಡಿನ ಸದ್ದು ಕೇಳುವುದಿಲ್ಲ' ಎಂಬ ತನ್ನ ಹೊಸ 'ಅವಿಷ್ಕಾರ'ದ ಬಗ್ಗೆ ಹೇಳಿ, ಅದನ್ನು ಗುಟ್ಟಾಗಿಡುವಂತೆ ಹೇಳುತ್ತಾಳೆ. ಅದನ್ನೇ ಅವಳ ಗೆಳತಿ ಅವಳ ಹತ್ತಿರದ ಗೆಳತಿಗೆ ಹೇಳುತ್ತಾಳೆ. ಶಾಲೆಯ ಎಲ್ಲಾ ಮಕ್ಕಳಿಗೆ ಹಳ್ಳಿಯ ಎಲ್ಲರಿಗೂ ಈ 'ಅವಿಷ್ಕಾರ' ತಲುಪುತ್ತದೆ! ಈ 'ಅವಿಷ್ಕಾರ' ಅವಳ ಹಳ್ಳಿಯ ಸಮಸ್ಯೆಗೆ 'ಪರಿಹಾರ'ವೂ ಆಗಬಹುದು ಎಂಬುದು ಅವಳ ನಂಬಿಕೆ.

ಇಷ್ಟೇ 22 ನಿಮಿಷದ ಕಿರುಫಿಲಂ 'ನೂರೆ'ಯ ಕಾಶ್ಮೀರದ ಗಡಿ ಹಳ್ಳಿಯ ಕಥಾಹಂದರ. ಇಂದಿನ ಸಂದರ್ಭದಲ್ಲಿ ಕಾಶ್ಮೀರದ ಮತ್ತು ಬಹುಶಃ ಸತತ ಸಶಸ್ತ್ರ ಘರ್ಷಣೆ 'ಸಾಮಾನ್ಯ ಸ್ಥಿತಿ' ಆಗಿರುವ ಯಾವುದೇ ಪ್ರದೇಶದ ಪರಿಸ್ಥಿತಿ ಮತ್ತು ಅದು ಮಕ್ಕಳ ಮೇಲೆ ಬೀರುವ ಪರಿಣಾಮದ ಬಗ್ಗೆ 'ನೂರೆ' ಮನೋಜ್ಞವಾಗಿ ಸೂಕ್ಷ್ಮವಾಗಿ ಪರಿಣಾಮಕಾರಿಯಾಗಿ ಹೇಳುತ್ತದೆ. ನೂರೆಯ 'ಅವಿಷ್ಕಾರ' ಮತ್ತು 'ಪರಿಹಾರ' ಸಹ ಸೂಕ್ಷ್ಮವಾಗಿ ಹಲವು ಅರ್ಥಗಳನ್ನು ಕಾಣ್ಕೆಗಳನ್ನು ಹೊಮ್ಮಿಸುತ್ತದೆ.

'ನೂರೆ' ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 3 ದಿನಗಳ (ಅಗಸ್ಟ್ 16-18) 9ನೇಯ 'ಬೆಂಗಳೂರು ಅಂತರ್ರಾಷ್ಟ್ರೀಯ ಕಿರುಚಿತ್ರೋತ್ಸವ'ದ ಉದ್ಘಾಟನಾ ಚಿತ್ರವಾಗಿತ್ತು. ಹಲವು ಅಂತರ್ರಾಷ್ಟ್ರೀಯ ಪ್ರಶಸ್ತಿ ಮತ್ತು ಮನ್ನಣೆಗಳನ್ನು ಪಡೆದ 'ನೂರೆ' ಕಿರುಚಿತ್ರಗಳ ಸಾಧ್ಯತೆಗಳ ಮತ್ತು ಒಳಸತ್ವಕ್ಕೆ ಒಂದು ಉತ್ತಮ ಉದಾಹರಣೆ. ಕೆಲವು ವರ್ಷಗಳ ನಂತರ 'ಕಿರುಚಿತ್ರೋತ್ಸವ'ದ ಕಿರುಚಿತ್ರಗಳನ್ನು ನೋಡುವ ಅವಕಾಶ ನನಗೆ ಸಿಕ್ಕಿತ್ತು. ಈ ನಡುವೆ 'ಬೆಂಗಳೂರು ಅಂತರ್ರಾಷ್ಟ್ರೀಯ ಕಿರುಚಿತ್ರೋತ್ಸವ' ಅಗಾಧವಾಗಿ ಬೆಳೆದಿದ್ದು ಈ ಬಾರಿ 3200 ಕಿರುಚಿತ್ರಗಳು ಸ್ಪರ್ಧೆ ಮತ್ತು ಪ್ರದರ್ಶನಕ್ಕೆ ಬಂದಿದ್ದು 400 ಚಿತ್ರಗಳನ್ನು ಆಯ್ಕೆ ಮಾಡಿ ಪ್ರದರ್ಶಿಸಲಾಯಿತು. ಮೊದಲ ಉತ್ಸವದಲ್ಲಿ 50 ಕಿರುಚಿತ್ರಗಳು ಬಂದಿದ್ದು, 30 ಪ್ರದರ್ಶಿತವಾಗಿದ್ದುವಂತೆ! ಅಂತರ್ರಾಷ್ಟ್ರೀಯ ವಿಭಾಗದಲ್ಲಿ 34, ರಾಷ್ಟ್ರೀಯ ವಿಭಾಗದಲ್ಲಿ 15 ಮತ್ತು ಕರ್ನಾಟಕ ವಿಭಾಗದಲ್ಲಿ 13, ಅನಿಮೇಶನ್ ವಿಭಾಗದಲ್ಲಿ 24 ಕಿರುಚಿತ್ರಗಳು ಸ್ಪರ್ಧೆಯ ಕಣದಲ್ಲಿದ್ದವು. ಇವಲ್ಲದೆ, ಗೊಯತೆ ರಫ್ತು (8), ಪಾಕೆಟ್ ಪ್ಯಾಕೇಜ್(6), ಆಸ್ಕರ್ ನಾಮಿನೇಶನ್ 2019 (6), ಆಸ್ಕರ್ ನಾಮಿನೇಶನ್ ಅನಿಮೇಶನ್ 2019 (7) ಮತ್ತು ದೊಡ್ಡ ಸಂಖ್ಯೆಯ ಸ್ಪರ್ಧೆಯಲ್ಲಿಲ್ಲದ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಮೊದಲ ಬಾರಿಗೆ ಮೂರು (ಬನಶಂಕರಿಯ ಸುಚಿತ್ರ, ದೊಮ್ಮಲೂರಿನ ಬಿ.ಐ.ಸಿ., ಇಂದಿರಾ ನಗರದ ಗೊಯತೆ ಇನ್ಸ್ಟಿಟ್ಯೂಟ್) ಸ್ಥಳಗಳಲ್ಲಿ ಐದು (ಬಿಐಸಿ ಯಲ್ಲಿ 3) ಸಭಾಂಗಣಗಳಲ್ಲಿ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಆದರೆ ಎಲ್ಲಾ ದಿನ ಎಲ್ಲಾ ಸಭಾಂಗಣಗಳು 'ಹೌಸ್ ಫುಲ್' ಆಗಿರಲಿಲ್ಲ.

ನನಗೆ 'ಕಿರುಚಿತ್ರೋತ್ಸವ'ದಲ್ಲಿ ಉದ್ಘಾಟನಾ ಕಿರುಚಿತ್ರವಲ್ಲದೆ ಸ್ಪರ್ಧಾ ವಿಭಾಗದ 16 ಅಂತರ್ರಾಷ್ಟ್ರೀಯ, 9 ಕರ್ನಾಟಕ ಕಿರುಚಿತ್ರಗಳನ್ನು ನೋಡುವುದು ಸಾಧ್ಯವಾಯಿತು. ಇವಲ್ಲದೆ ಗೊಯತೆ ರಫ್ತು ಪ್ಯಾಕೇಜಿನ 7, ಆಸ್ಕರ್ ನಾಮಿನೇಶನ್ 2019ರ ಎಲ್ಲಾ (6) ಮತ್ತು ಸ್ಪರ್ಧೆಯಲ್ಲಿಲ್ಲದ 3, ಅಂದರೆ ಒಟ್ಟು 42 ಕಿರುಚಿತ್ರಗಳನ್ನು ನೋಡುವುದೂ ಸಾಧ್ಯವಾಯಿತು. ಹಿಂದೆ ಅಲ್ಲೊಂದು ಇಲ್ಲೊಂದು ಕಿರುಚಿತ್ರಗಳನ್ನು ನೋಡಿದ್ದರೂ, ಇಷ್ಟು ಕಿರುಚಿತ್ರಗಳನ್ನು ಒಂದೇ ಉಸಿರಿನಲ್ಲಿ ನೋಡುವುದು ಒಂದು ಹೊಸ ಅನುಭವವಾಗಿತ್ತು. ಕಿರುಚಿತ್ರಗಳ ಬೆಳವಣಿಗೆಯ ಇಂದಿನ ಮಟ್ಟ ಹಾಗೂ, ಸಾಧ್ಯತೆಗಳನ್ನು ಮತ್ತು ಸತ್ವಗಳನ್ನು ಅನಾವರಣಗೊಳಿಸುವ ಹೊಸದೊಂದು ಲೋಕಕ್ಕೆ ತೆರೆದುಕೊಂಡಂತಾಗಿತ್ತು.

ಗಾಢ ಪರಿಣಾಮ ಬೀರಿದ 'ಸ್ಕಿನ್' ಮತ್ತು 'ಸೆಕೆಂಡ್ ಕ್ಲಾಸ್'

'ನೂರೆ' ಅಲ್ಲದೆ ನನ್ನ ಮೇಲೆ ಗಾಢವಾಗಿ ಪರಿಣಾಮ ಬೀರಿದ ಚಿತ್ರ 'ಸ್ಕಿನ್' ಮತ್ತು 'ಸೆಕೆಂಡ್ ಕ್ಲಾಸ್'. ಈ ಎರಡೂ ಚಿತ್ರಗಳಲ್ಲಿ ನವ-ನಾಜಿಗಳ ಹಿಂಸಾತ್ಮಕ ಆಕ್ರಾಮಕ ಜನಾಂಗೀಯ ದ್ವೇಷ-ದಾಳಿ ಮತ್ತು ಅದರ ವಿರುದ್ಧ ಕರಿಯರ ಸೂಕ್ಷ್ಮ ಪ್ರತಿರೋಧದ ಸಶಕ್ತ ಕಥನವಿದೆ. ಈ ಕಥನ ವ್ಯಕ್ತಿಗಳ ನೆಲೆಯಲ್ಲಿದ್ದರೂ ಪಾಶ್ಚಿಮಾತ್ಯ ದೇಶಗಳಲ್ಲಿ ತಾಂಡವವಾಡುತ್ತಿರುವ ಜನಾಂಗವಾದದ ಒಟ್ಟು ಭಿತ್ತಿಯಲ್ಲಿ ಅದನ್ನು ಇಡಲಾಗಿದೆ. ಜನಾಂಗೀಯ ದ್ವೇಷದ ರ್‍ಯಾಲಿಯೊಂದರ ವಿರುದ್ಧ ಸೆಟೆದು ನಿಂತಾಗ ನವ-ನಾಜಿಯೊಬ್ಬನಿಂದ ತೀವ್ರ ದಾಳಿಗೊಳಗಾದ 'ಎರಡನೇ ಕ್ಲಾಸಿ'ನ ಕರಿಯ ಶಿಕ್ಷಕಿ, ಪರಿಚಯ ಗೊತ್ತಾದರೂ ಅವನ ವಿರುದ್ಧ ದೂರು ಕೊಡುವುದಿಲ್ಲ. ಬದಲಾಗಿ ಅವಳದೇ ಕ್ಲಾಸಿನಲ್ಲಿರುವ ಅವನ ಮಗನಿಗೆ ಜನಾಂಗೀಯ ದ್ವೇಷ-ದಾಳಿ ತಪ್ಪು ಎಂದು ಮನವರಿಕೆ ಮಾಡುತ್ತಾಳೆ. 'ಸೆಕೆಂಡ್ ಕ್ಲಾಸ್' (ಸ್ವೀಡನ್ -13 ನಿಮಿಷ) ಅಂತರ್ರಾಷ್ಟ್ರೀಯ ವಿಭಾಗದ ಮೊದಲ ಬಹುಮಾನ ಗಳಿಸಿತು.

'ಸ್ಕಿನ್'(ಯು.ಎಸ್.-21 ನಿಮಿಷ) ನಲ್ಲಿ ಸ್ಟೋರ್ ವೊಂದರಲ್ಲಿ ನವ-ನಾಜಿ ಬಿಳಿಯ ಕರಿಯನೊಬ್ಬನನ್ನು ಮಾತಿನಿಂದ ಕೆಣಕಿದಾಗ, ಆತ ಅದಕ್ಕೆ ತೀವ್ರ ಮಾತಿನ ಪ್ರತಿರೋಧ ತೋರುತ್ತಾನೆ. ಅಷ್ಟಕ್ಕೆ ನವ-ನಾಜಿ ಗ್ಯಾಂಗ್ ಅವನನ್ನು ಕಾರಿನಲ್ಲಿರುವ ಅವನ ಹೆಂಡತಿ-ಮಗನೆದುರೇ ಸಾಯಬಡಿಯುತ್ತಾರೆ. ಅದಕ್ಕೆ 'ಪ್ರತೀಕಾರ'ವಾಗಿ ಕರಿಯರ ಗ್ಯಾಂಗ್ ಆ ಬಿಳಿಯನನ್ನು 'ಅಪಹರಿಸಿ' ಅವನನ್ನು ಮತ್ತಿನಲ್ಲಿರಿಸಿ, ಇಡೀ ದೇಹದ ತುಂಬಾ ಹಚ್ಚೆಗಳನ್ನು ಹಾಕಿ 'ಕರಿಯ'ನನ್ನಾಗಿ ಮಾಡಿ, ಅವನ ಮನೆಯ ಮುಂದೆ ಮಧ್ಯರಾತ್ರಿಯಲ್ಲಿ ಬಿಟ್ಟು ಹೋಗುತ್ತದೆ. ತನ್ನ ಮನೆ ಪ್ರವೇಶಕ್ಕೆ ಆತ ಪ್ರಯತ್ನಿಸುತ್ತಿರುವಾಗ ಆತನ ನಾಯಿ ಗುರುತು ಹಿಡಿದರೂ, 'ಕರಿಯ ದರೋಡೆಕೋರ'ನ ವಿರುದ್ಧ ಪೋಲಿಸಿಗೆ ದೂರು ಕೊಟ್ಟಿರುವ ಹೆಂಡತಿ ಬಹಳ ಪ್ರಯತ್ನಗಳ ನಂತರ ಗುರುತು ಹಿಡಿದರೂ, ಮನೆಯಲ್ಲಿ ಅಡಗಿದ್ದ ಮಗನ ಗುಂಡೇಟಿನಿಂದ ಸಾಯುತ್ತಾನೆ. 'ಸ್ಕಿನ್' 2019ರ ಆಸ್ಕರ್ ಕಿರುಚಿತ್ರ ನಾಮಿನೇಶನ್ ಪಡೆದಿದೆ.


ಎರಡು ವರ್ಷಗಳ ಬಾಲಕನನ್ನು ಅಪಹರಿಸಿ ಬರ್ಬರವಾಗಿ ಕೊಲೆ ಮಾಡಿದ, ಎರಡು ಹತ್ತು ವರ್ಷದ ಬಾಲಕರ ಅಪರಾಧಧ ತನಿಖೆಯ ನಿಜ ಘಟನೆ (1993) ಮೇಲೆ ಆಧಾರಿತ 'ಡಿಟೈನ್ ಮೆಂಟ್' (ಐರ್ಲೆಂಡ್ -30 ನಿಮಿಷ) ದಂಗು ಬಡಿಸುವ ನಿದ್ದೆಗೆಡಿಸುವ ಚಿತ್ರ. 'ಕ್ರೈಂ ಥ್ರಿಲ್ಲರ್' ಫಾರ್ಮುಲಾದಿಂದ ಬಿಡಿಸಿಕೊಳ್ಳದಿದ್ದರೂ, ಬಾಲಾಪರಾಧದ ಮತ್ತು ಅದನ್ನು ಸಮಾಜ ಹೇಗೆ ನಿಭಾಯಿಸಬೇಕು ಎಂಬುದರ ಬಗ್ಗೆ ಚಿತ್ರ ಯೋಚನೆಗೆ ಹಚ್ಚುತ್ತದೆ. ಜರ್ಮನಿಯಿಂದ ಸಲಾಫಿ ಇಸ್ಲಾಂ ನಿಂದ ಪ್ರಭಾವಿತನಾಗಿ ಸಿರಿಯಾ ಯುದ್ಧದಲ್ಲಿ ಭಾಗವಹಿಸಲು ಹೋಗುವ ಜರ್ಮನ್ 'ಅಡ್ಡಾಯ್', ಅವನನ್ನು ಹುಡುಕುತ್ತಿರುವ ಆತನ ತಾಯಿ, ಸಿರಿಯಾದಲ್ಲಿ ಆತನ ಸಹಚರನಾಗಿದ್ದು ವಾಪಸಾದ ಮಿತ್ರ – ಈ ಮೂವರ ಸುತ್ತ ಹೆಣೆದ 'ಟ್ರೇಸಿಂಗ್ ಅಡ್ಡಾಯ್'; ಒಂಟೆ ರೇಸ್ ನಲ್ಲಿ ಬಳಸಲಾಗುವ ಅಪಹೃತ ಬಾಲಕರ ಬವಣೆಯ 'ಎನ್ ಫಾಂಟ್ ಕ್ಯಾಮೂ'; ವಲಸೆಗಾರರ ಶಿಬಿರದ 'ಗದ್ದಲ' ದೂರವಿಡಲು ಗೋಡೆ ಕಟ್ಟಿದ್ದು ಸರಿಯೇ ತಪ್ಪೇ ಎಂಬ ಚರ್ಚೆ ನಡೆಸುವ ಜರ್ಮನ್ ಕಾಲೋನಿ ವಾಸಿಗಳ ಧೋರಣೆಯ ಅನಾವರಣ ಮಾಡುವ 'ಬಯೋಟೋಪ್'; ಸಿನಿಮಾದ ಒಂದು ಪಾತ್ರಕ್ಕಾಗಿ ಪತ್ನಿ ಸಮೇತ ಅಡಿಶನ್ ಗೆ ಹೋಗಿ, ಪತ್ನಿ ಆಯ್ಕೆಯಾಗಿ ಪತಿಯ ಇಚ್ಛೆಯ ವಿರುದ್ಧ ಅದನ್ನು ಒಪ್ಪಿಕೊಳ್ಳುವ 'ರೋಲ್' (ಇರಾನ್) – 42 ಚಿತ್ರಗಳ ಮಧ್ಯೆ ಮರೆಯಾಗದೆ ನೆನಪಿನಲ್ಲಿ ಉಳಿದ ಕೆಲವು ಕಿರುಚಿತ್ರಗಳು.

ಗಮನ ಸೆಳೆದ 'ಲಚ್ಚವ್ವ', 'Redemption'

ಕರ್ನಾಟಕದ ಕಿರುಚಿತ್ರಗಳಲ್ಲಿ 'ಲಚ್ಚವ್ವ' 'ನಾಸ್ತಿ', 'Redemption', 'Uncover' ಗಮನ ಸೆಳೆದವು. ಗಂಡ ತೀರಿ ಹೋದ ಮೇಲೆ ಬೆಂಗಳೂರಿಗೆ ವಲಸೆಗೆ ಬಂದು ಮಗನ ಮನೆಯಲ್ಲಿ ಉಳಿದುಕೊಂಡು, ಅವನ ಮಿತ್ರನೊಬ್ಬನ 'ಬರ್ತ್ ಡೇ'ಗೆ ಅವನಿಗೆ ಇಷ್ಟವಾದ ಧಾರವಾಡ ಪೇಡೆ ತರಬೇಕೆಂದು ಹೊರಟು, ಬೆಂಗಳೂರಿನ ಕಾಂಕ್ರೀಟ್ ಕಾಡಿನಲ್ಲಿ ಕಳೆದು ಹೋಗಿ 'ಲಚ್ಚವ್ವ' (27 ನಿಮಿಷ) ಅನುಭವಿಸುವ ಅನಾಥಭಾವ ನಮ್ಮದೂ ಆಗುತ್ತದೆ. ಮಗ ಮತ್ತು ಮಗಳ ಜಾತಿಯ ಹೊರಗಿನ ಮದುವೆಗೆ ತೀವ್ರ ಪ್ರತಿರೋಧ ಒಡ್ಡಿದರೂ, ಅವನ ಅಂಕೆ ಮೀರಿದ ಘಟನಾವಳಿಯ ಮುಂದೆ ಅಸಹಾಯಕನಾದರೂ, ತನ್ನ ಧೋರಣೆ ಬದಲಿಸದ ಕಡು ಸಂಪ್ರದಾಯಸ್ಥನ ತೊಳಲಾಟ ಹೇಳುವ 'ನಾಸ್ತಿ' (20 ನಿಮಿಷ) ಅದರ ಫೊಟೊಗ್ರಫಿ ಮತ್ತು ಕಥನಶೈಲಿಯಿಂದಾಗಿ ಗಮನ ಸೆಳೆಯುತ್ತದೆ. 'Redemption' (20 ನಿಮಿಷ) ಹಳ್ಳಿಯಲ್ಲಿ ಮಕ್ಕಳಲ್ಲಿ ಇಂದಿಗೂ ಜಾತಿಭಾವನೆಯನ್ನು ಬಿತ್ತಿ ಬೆಳೆಯುವ ಕುರಿತ ಉತ್ತಮ ಚಿತ್ರಣ. ಹಳ್ಳಿಯ ಬ್ರಾಹ್ಮಣ ಹುಡುಗರಿಗೆ ಮದುವೆಗೆ ಹುಡುಗಿ ಸಿಗದಿರುವ ಸಮಸ್ಯೆ ಎದುರಿಸುತ್ತಿರುವವನ ತುಮುಲವನ್ನು ವಿಶಿಷ್ಟ ಶೈಲಿಯಲ್ಲಿ ಪರಿಣಾಮಕಾರಿಯಾಗಿ ಹೇಳುವುದರಿಂದ 'Uncover' (30 ನಿಮಿಷ) ಆಪ್ತವಾಗುತ್ತದೆ.

ಕಾರ್ಟೂನುಗಳನ್ನು ವಿಶಿಷ್ಟವಾಗಿ ಬಳಸುವ Neiko No Hi; ತನ್ನ ಮುಖ ಗುರುತು ಸಹ ಸಿಗದ ತನ್ನ ಅಪರೂಪದ ಕಾಯಿಲೆ ಬಗ್ಗೆ ಗ್ರಾಫಿಕ್ಸ್ ಗಳಿಂದಲೇ ಹೇಳುವ Carlotta's Face; ನಾಜಿ, ಕಮ್ಯುನಿಸ್ಟ್ ಮತ್ತು ಈಗಿನ ಪೂರ್ವ ಜರ್ಮನಿಯಲ್ಲಿ ಬಾಳಿದ ತನ್ನ ತಾಯಿಯ ಪ್ರತಿ ಆಡಳಿತದಿಂದ ಓಡಿ ಹೋಗುವ ಮತ್ತು ಹೊಂದಿಕೊಳ್ಳುವ, ಪ್ರತಿರೋಧಿಸುವ ಮತ್ತು ಪಾಲಿಸುವ ವಿಶಿಷ್ಟ ಬದುಕಿನ ಕಥನವನ್ನು ಆಕೆ ಬಿಟ್ಟು ಹೋದ ಹಲವು ಸ್ಮರಣಿಕೆಗಳ ಮೂಲಕವೇ ಹೇಳುವ Halmaspiel; ನಾಲ್ಕು ಪಾತ್ರಗಳ ಬೆಳವಣಿಗೆಯನ್ನು ಸೈಕಡೆಲಿಕ್ ಸೆಟ್ಟುಗಳಲ್ಲಿ ಆಧುನಿಕ ನೃತ್ಯದ ಮೂಲಕ ಅಮೂರ್ತವಾಗಿ ಹೇಳುವ Dialectic Diary – ಹೊಸ ವಿಷಯ ಮತ್ತು ಪ್ರಾಯೋಗಿಕ ಕಥನ ಶೈಲಿಯಿಂದಾಗಿ ನನ್ನ ಗಮನ ಸೆಳೆದವು.





'ಕಿರುಚಿತ್ರ' ಅಂದರೇನು?

ಇವೆಲ್ಲದರ ನಂತರ 'ಕಿರುಚಿತ್ರ' ಅಂದರೇನು? ಎಂಬ ಪ್ರಶ್ನೆ ಏಳುತ್ತದೆ. ಕಿರುಚಿತ್ರ ಒಂದು ವಿಷಯದ ಮೇಲೆ ಒತ್ತು ಕೊಟ್ಟು ಹೇಳುವ, ಕೆಲವೇ ಪಾತ್ರಗಳಿರುವ 40 ನಿಮಿಷಕ್ಕಿಂತ ಕಡಿಮೆ ಇರುವ ಚಿತ್ರ ಎನ್ನಬಹುದು. ಅದರ ವಿಷಯ ವ್ಯಾಪ್ತಿ ಮತ್ತು ಕಥನ ಶೈಲಿಯ ಬಗ್ಗೆ ಹೇಳುವುದಾದರೆ, ಕಿರುಚಿತ್ರವನ್ನು ಸಾಹಿತ್ಯದ ಸಣ್ಣ ಕತೆ ಮತ್ತು ಕವನ ದೊಂದಿಗೆ ಹೋಲಿಸಬಹುದು. ಈ ಸ್ವರೂಪದಿಂದಾಗಿ ಮತ್ತು ಮೊಬೈಲ್-ಡಿಜಿಟಲ್ ಕ್ಯಾಮೆರಾಗಳ ತೀವ್ರ ತಾಂತ್ರಿಕ ಬೆಳವಣಿಗೆಗಳಿಂದಾಗಿ ಕಡಿಮೆ ಖರ್ಚಿನ (ಅಥವಾ ಖರ್ಚೇ ಇಲ್ಲದ) ಈ ಮಾಧ್ಯಮ ದೊಡ್ಡ ಸಂಖ್ಯೆಯ ಜನರನ್ನು ಸೆಳೆಯುತ್ತಿದೆ. ನೆಟ್ ನ ವ್ಯಾಪಕ ಲಭ್ಯತೆಯಿಂದಾಗಿ ಅದರ ಹಂಚಿಕೆ ಮತ್ತು ಪ್ರದರ್ಶನ ಸಹ ಕಡಿಮೆ ಖರ್ಚಿನ (ಅಥವಾ ಖರ್ಚೇ ಇಲ್ಲದ) ವ್ಯವಹಾರವಾಗಿದೆ. ಅದು ಯುವಜನರ ಅಭಿವ್ಯಕ್ತಿಯ ಮತ್ತು ಸಂವಹನದ ಮಾಧ್ಯಮವಾಗಿ ವೇಗವಾಗಿ ಬೆಳೆಯುತ್ತಿದೆ. ಫೀಚರ್ ಫಿಲಂ ಮತ್ತು ಟಿವಿ ಸೀರಿಯಲುಗಳು ಬರಿಯ ಉದ್ಯಮಗಳಾಗಿ ಸ್ವತಂತ್ರ ಅಭಿವ್ಯಕ್ತಿಯ ಅವಕಾಶಗಳು ಸೊರಗುತ್ತಿರುವ ಸಂದರ್ಭದಲ್ಲಿ, ಅದಕ್ಕೆ ಬದಲಿಯಾಗಿ ಕಿರುಚಿತ್ರ ಮೂಡಿ ಬರುತ್ತಿದೆ. ಅದರ ಉತ್ಪಾದನೆ,, ಹಂಚಿಕೆಯ ಭವಿಷ್ಯದ ಸಾಧ್ಯತೆಯನ್ನು ಅರಿತಿರುವವರು ಅದನ್ನು 'ಉದ್ಯಮ'ವಾಗಿಸುವ ಹುನ್ನಾರ ವನ್ನು ಆಗಲೇ ಆರಂಭಿಸಿದ್ದಾರೆ. ಕಿರುಚಿತ್ರಗಳಿಗೆ ಮೀಸಲಾದ 'ಶಾರ್ಟ್ಸ್-ಟಿವಿ' ಎಂಬ ಜಾಗತಿಕ ಚಾನೆಲ್ ಒಂದು ಆರಂಭವಾಗಿದೆ.

ಆದರೂ ಕಿರುಚಿತ್ರ ಸ್ವತಂತ್ರ ಅಭಿವ್ಯಕ್ತಿಯ ಅಪಾರ ಸಾಧ್ಯತೆಯುಳ್ಳ ಮುಂದೆ ವ್ಯಾಪಕವಾಗಿ 'ಮುಖ್ಯಧಾರೆ'ಯದ್ದಾಗಿ ಬೆಳೆಯಲಿರುವ ಒಂದು ಅಭಿವ್ಯಕ್ತಿಯ ಹಾಗೂ ಸಂವಹನದ ಮಾಧ್ಯಮ ಎಂದು ತೋರುತ್ತದೆ. ಅದನ್ನು ಬಳಸಿಕೊಳ್ಳಲು ಪ್ರಗತಿಪರ ಸಾಮಾಜಿಕ-ಸಾಂಸ್ಕೃತಿಕ ಚಳುವಳಿಗಳು ಮತ್ತು ರಾಜಕೀಯ ಸಂಘಟನೆಗಳು ಮುಂದಾಗಬೇಕಾಗಿದೆ. ಇದು ಕಿರುಚಿತ್ರಗಳ ಲೋಕದಲ್ಲಿ ಮೂರು ದಿನಗಳನ್ನು ಕಳೆದ ನಂತರದ ಅನಿಸಿಕೆ. ●



ಈ ವರದಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ವೃತ್ತಿ ಅವಕಾಶಗಳ ಬೆಳವಣಿಗೆಗಳಿಗೆ, ಬಹು ಶಿಸ್ತೀಯ ಅಭ್ಯಾಸಕ್ಕೆ (ಹಿಂದುತ್ವವು ಈ ಪ್ರಯತ್ನವನ್ನು ಬುಡಮೇಲು ಮಾಡದಿದ್ದಲ್ಲಿ) ಹಾಗೂ ಉನ್ನತ ಶಿಕ್ಷಣವನ್ನು ವ್ಯವಸ್ಥಿತಗೊಳಿಸಲು ಕೆಲವು ಆಸಕ್ತಿದಾಯಕ ಸಲಹೆ ನೀಡಿದ್ದರೂ, ಎರಡು ಪ್ರಮುಖ ಕಾರಣಗಳಿಂದ ಸೋಲುತ್ತದೆ. ಒಂದು ಶಿಕ್ಷಣ ಕ್ಷೇತ್ರದ ಮೇಲೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು. ಎರಡನೇಯದು, ಬೂರ್ಜ್ವಾ ಚಿಂತನೆಯ ಶ್ರೇಷ್ಟತೆಯ ವಿಚಾರವನ್ನು ಯಾವುದೇ ಯೋಚನೆಯಿಲ್ಲದೆ, ಜಾತಿ ಮತ್ತು ಉಳಿದ ಹಲವು ಹೊರಗಿಡುವ ವಿಷಯಗಳಿಂದ ರೂಪುಗೊಂಡ ಸಂಕೀರ್ಣ ಸನ್ನಿವೇಶದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಹೊರಿಸುತ್ತಿರುವುದು.

ಕಳೆದ ವಾರ ಪ್ರಕಟವಾದ ಲೇಖನದ ಭಾಗ-1 ರಲ್ಲಿ ಶಿಕ್ಷಣ ಕ್ಷೇತ್ರದ ಮೇಲೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದರ ಬಗ್ಗೆ ವಿವರಿಸಲಾಗಿತ್ತು. ಈ ವಾರದ ಸಂಚಿಕೆಯಲ್ಲಿ ಎರಡನೇ ಅಂಶವನ್ನು ವಿವರಿಸಲಾಗುತ್ತದೆ.

ರಾಷ್ಟ್ರೀಯ ಕರಡು ಶಿಕ್ಷಣ ನೀತಿಯ ಎರಡು ಸೋಲುಗಳು: ಪ್ರೊ. ಪಟ್ನಾಯಕ್

ಅನು: ಎಂ.ಜಿ. ವೆಂಕಟೇಶ್

ಭಾಗ – 2

ಕರಡು ಶಿಕ್ಷಣ ನೀತಿಯನ್ನು ಪ್ರಶ್ನಿಸಬೇಕಿರುವುದು, ಅದು ಶಿಕ್ಷಣ ಕ್ಷೇತ್ರವನ್ನು ಇಂದಿನ ದುಸ್ಥಿತಿಗೆ ತಳ್ಳಿರುವ ಸಾಮಾಜಿಕ-ಆರ್ಥಿಕ ಒತ್ತಡಗಳನ್ನು ಎದುರಿಸಿಲ್ಲ, ಎಂಬುದಕ್ಕಾಗಿ ಮಾತ್ರವಲ್ಲ. ಶಿಕ್ಷಣದ ಉದ್ದೇಶದ ವಿವರಣೆಯೇ ತಪ್ಪಾಗಿದೆ ಎಂಬುದಕ್ಕಾಗಿಯೂ ಪ್ರಶ್ನಿಸಬೇಕಾಗಿದೆ. ವರದಿಯಲ್ಲಿ ಕೆಲವು ವಿಷಯಗಳನ್ನು ಹೊರತು ಪಡಿಸಿದರೆ, ಶಿಕ್ಷಣವನ್ನು 'ಜ್ಞಾನ ಆರ್ಥಿಕ'ವನ್ನು ಸೃಷ್ಟಿಸಲು ಅನುವಾಗುವಂತೆ ಮತ್ತು ತನ್ಮೂಲಕ ಅದು ಮುಂದೆ ಗುರಿಯಿಡಲಾದ 10 ಟ್ರಿಲಿಯನ್ ಆರ್ಥಿಕ ಶಕ್ತಿ ಸ್ಥಾಪಿಸಲು ಪೂರಕವಾಗುವಂತೆ ಯೋಜಿಸಲಾಗಿದೆ. ಈ ಕಾರಣಕ್ಕಾಗಿ 'ವಿಶ್ವಮಟ್ಟದ' ಸಂಸ್ಥೆಗಳ ಅವಶ್ಯವಿದೆ. ಈ ವಿಷಯದಲ್ಲಿ ವರದಿಗೆ ಆದರ್ಶವಾಗಿರುವುದು ಹಾರ್ವರ್ಡ್ ಮತ್ತು ಕೇಂಬ್ರಿಡ್ಜ್‌ಗಳ ಪ್ರತಿರೂಪಗಳು. ಅಲ್ಲಿ ಆಧುನಿಕ ವಿಜ್ಞಾನವನ್ನು, ಹಿಂದುತ್ವದ ಮತ್ತು ಭಾರತದ ಶ್ರೇಷ ತೆಯ ಒಂದು ಡೋಸಿನೊಂದಿಗೆ ಭೋದಿಸಲಾಗುತ್ತದೆ. ಇದು ವರದಿಯ ಪ್ರಸ್ತಾವದ ಸಾರಾಂಶ.

ಆದರೆ ಮುಂದುವರೆದು ದೇಶಗಳಲ್ಲಿರುವಂತೆಯೇ ನಮ್ಮ ದೇಶದಲ್ಲಿ ಶಿಕ್ಷಣ ಇರುವುದು ಸಾಧ್ಯವಿಲ್ಲ. ಇಲ್ಲಿನ ಶಿಕ್ಷಣ ಸಂಸ್ಥೆಗಳು ಹೊರದೇಶದ ಅದೇ ರೀತಿಯ ಸಂಸ್ಥೆಗಳ ಪ್ರತಿರೂಪ ಆಗಲಾರದು, ಆಗಬಾರದು. ಶತಮಾನಗಳಿಂದ ವಸಾಹತುಶಾಹಿ ದೊರೆಗಳಿಗೆ ಮಿಗುತಾಯವನ್ನು ರವಾನಿಸುತ್ತಿದ್ದ,ಮಾಜಿ ವಸಾಹತುಗಳಾದ ತೃತೀಯ ಜಗತ್ತಿನ ದೇಶಗಳ ದುಡಿಯುವ ವರ್ಗದ ಜನರ ಪರಿಸ್ಥಿತಿ ಮುಂದುವರೆದು ರಾಷ್ಟ್ರಗಳಿಂದ ಭಿನ್ನವಾಗಿದೆ. ದುಡಿಯುವ ವರ್ಗದ ಹೆಚ್ಚಿನ ಪಾಲು ಜನರ ಆದಾಯ, ವಸಾಹತುಶಾಹಿಯಿಂದ 'ಕೈಗಾರಿಕೀಕರಣ' ನಾಶವಾಗಿದ್ದರಿಂದ ಉಂಟಾದ ಭಾರೀ ನಿರುದ್ಯೋಗದಿಂದ ಮತ್ತು ಜಾಗತಿಕ ಆರ್ಥಿಕ ಪ್ರಕ್ರಿಯೆಗಳ ಒತ್ತಡದಿಂದ ಸಂಕುಚಿತಗೊಂಡಿದೆ. ಇದನ್ನು ಹಲವರು ಒಪ್ಪದಿರಬಹುದು. ಆದರೆ ಆದ್ದರಿಂದಲೇ ಪಠ್ಯಕ್ರಮ ಮುಂದುವರೆದ ರಾಷ ಗಳ ಪ್ರತಿರೂಪ ಆಗಬಾರದು ಎಂಬ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬೇಕು. ಪ್ರಾಕೃತಿಕ ವಿಜ್ಞಾನದ ಪಠ್ಯಕ್ರಮ ಸಹ ಮುಂದುವರೆದ ರಾಷ್ಟ್ರಗಳಿಂದ ಭಿನ್ನವಿರಬೇಕು.

ಕೇಂಬ್ರಿಜ್ ಮತ್ತು ಹಾರ್ವ್‌ಡ್ ವಿಶ್ವವಿದ್ಯಾನಿಲಯಗಳಿಗಿಂತ ಪಠ್ಯಕ್ರಮದ ಭೋಧನಾ ವಿಷಯದಲ್ಲಿ ಮಾತ್ರ ಭಿನ್ನವಾಗಿರದೇ, ಭಾರತದ ವಿಶ್ವವಿದ್ಯಾನಿಲಯಗಳ ಪಾತ್ರವೇ ಭಿನ್ನವಾಗಿರಬೇಕು. ಅಷ್ಟೇನೂ ಸಮರ್ಪಕವಾದ ಶಬ್ದವಲ್ಲದಿದ್ದರೂ "ರಾಷ್ಟ್ರ ನಿರ್ಮಾಣ"ದ ಪಾತ್ರ ವಿಶ್ವವಿದ್ಯಾನಿಲಯಗಳ ಪ್ರಮುಖ ಪಾತ್ರಗಳಲ್ಲಿ ಒಂದಾಗಿರಬೇಕು. "ರಾಷ್ಟ್ರ ನಿರ್ಮಾಣ" ಎಂದರೆ ಇಲ್ಲಿ, 'ಎಲ್ಲರನ್ನೂ ಒಳಗೊಳ್ಳುವ ರಾಷ್ಟ್ರೀಯತೆ'ಯನ್ನು ಆಧರಿಸಿದ"ಸಮುದಾಯ"ದ ಮತ್ತು ಸಮಾನ ನಾಗರೀಕರ "ಸೌಹಾರ್ದತೆ"ಯ ನಿರ್ಮಾಣದ ಕೆಲಸ. ಮತ್ತೊಂದು ಅರ್ಥದಲ್ಲಿ ವಿ.ವಿ.ಗಳು ಮುಕ್ತ ಭಾರತದ "ಸಾವಯವ ಬುದ್ಧಿಜೀವಿ"ಗಳನ್ನು ಸೃಷ್ಟಿಸಿ ಪೊರೆಯುವ ತೊಟ್ಟಿಲಾಗಬೇಕು. ಅವರು ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧರಾಗಿದ್ದು ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಜಾತ್ಯತೀತತೆ ಮತ್ತು ಸಮಸಮಾಜದ ನಿರ್ಮಾಣದ ಆಶಯ ಹೊಂದಿರಬೇಕು.

ನಮ್ಮ ದೇಶ ಇನ್ನೂ ಕಿಶೋರಾವಸ್ಥೆಯಲ್ಲಿರುವುದರಿಂದ ಇಂತಹ ಮೌಲ್ಯಗಳನ್ನು ಸಂರಕ್ಷಿಸುವ ಕಾರ್ಯಭಾರವನ್ನು ಮಾಧ್ಯಮ, ನ್ಯಾಯಾಂಗ ಅಥವ ಬರಿಯ ಪ್ರಭುತ್ವದ ಉಳಿದ ಅಂಗಗಳಿಗೆ ಬಿಡುವುದಕ್ಕೆ ಬರುವುದಿಲ್ಲ. ವಿವಿಗಳು ಬರಿಯ ಬೋಧನೆ ಮತ್ತು ಸಂಶೋಧನೆಗಳಿಗೆ ಮಾತ್ರ ತೊಡಗಿರುವುದಕ್ಕೆ ಬಿಡುವುದು ಸಾಧ್ಯವಾಗುವುದಿಲ್ಲ.ಆದ್ದರಿಂದ ಸಾಂವಿಧಾನಿಕ ಮೌಲ್ಯಗಳನ್ನು ಸಂರಕ್ಷಿಸಲು ವಿವಿಗಳು ನೇರ ಪ್ರವೇಶ ಮಾಡಬೇಕಿದೆ. ಅವು ಸಾರ್ವಜನಿಕ ಬುದ್ಧಿಜೀವಿಗಳನ್ನು ಒಳಗೊಂಡಿರಬೇಕು ಮತ್ತು ಸಾರ್ವಜನಿಕ ಬುದ್ಧಿಜೀವಿಗಳನ್ನು ಸೃಷ್ಟಿಸಬೇಕು. "ವಿದ್ಯಾಭ್ಯಾಸದ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿ" ಹಾಗೂ "ರಾಜಕೀಯದಿಂದ ದೂರವಿರಿ" ಎಂದು ವಿದ್ಯಾರ್ಥಿಗಳಿಗೆ ನೀಡುವ ಸಾಮಾನ್ಯ ಉಪದೇಶತಪ್ಪು. ಆದರೆ ವಿದ್ಯಾರ್ಥಿಗಳು ನೀತಿಬಾಹಿರ ರಾಜಕಾರಣಿಗಳ ಆಯುಧವಾಗಬಾರದು. ಬದಲಿಗೆ, ಅವರು ರಾಜಕೀಯದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಮೌಲ್ಯಗಳನ್ನು ಸಂರಕ್ಷಿಸಲು ಆರೋಗ್ಯಕರ ಆಸಕ್ತಿ ವಹಿಸಬೇಕು.

ಇದಕ್ಕಾಗಿ ಯಾವ ಸ್ವಹಿತಸಾಕ್ತಿ ಇರದ,ವೈಯಕ್ತಿಕ ಕೀರ್ತಿಯ ಹಿಂದೆ ಬಿದ್ದು ಸ್ವಯಂ-ಕೇಂದ್ರಿತರಾಗಿರದ ಮತ್ತು ತಮ್ಮ ಬೋಧನೆ-ಸಂಶೋಧನೆಗಳಿಗೆ ಮಾತ್ರ ಸೀಮಿತವಾಗಿರುವವರೂ ಆಗಿರದ ಬುದ್ಧಿಜೀವಿಗಳುಸೃಷ್ಟಿಯಾಗಬೇಕಿದೆ. ಅವರು ತಮ್ಮ ಬೋಧನೆ-ಸಂಶೋಧನೆಗಳ ಜತೆಗೆ ಸಾಂವಿಧಾನಿಕ ಮೌಲ್ಯಗಳ ರಕ್ಷಣೆಗಾಗಿ ಸೆಟೆದು ನಿಲ್ಲುವಂಥವರು ಆಗಿರಬೇಕು. ನಮ್ಮ ದೇಶದಲ್ಲಿನ ವಿ.ವಿ.ಗಳು ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕತೆಯ ಮುಖ್ಯ ಆಧಾರ ಸ್ಥಂಭಗಳಾಗಿವೆ.

ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುವುದು ಸಮಾಜಕ್ಕೆ ಮಾತ್ರವಲ್ಲ ಮತ್ತು ವರದಿ ಪದೇ ಪದೇ ಎತ್ತಿ ಹಿಡಿಯುವ ಬೋಧನೆ-ಸಂಶೋಧನೆಗಳಲ್ಲಿ'ಉತ್ಕೃಷ್ಟತೆ'ಗೂ ಅವಶ್ಯವಿರುತ್ತದೆ. ಬೋಧನೆ ಮತ್ತು ಸಂಶೋಧನೆಗೆ ಮಾತ್ರ ಸೀಮಿತವಾದ ಅಕಾಡೆಮಿಕ್ ಸಮುದಾಯ, ಸಾಂವಿಧಾನಿಕ ಸ್ವಾತಂತ್ರ ಮತ್ತು ಹಕ್ಕುಗಳ ರಕ್ಷಣೆಯಿಂದ ವಿಮುಖವಾದರೆ ಬೋಧನೆ ಮತ್ತು ಸಂಶೋಧನೆ ವಿಷಯದಲ್ಲೂ ಯಶಸ್ವಿಯಾಗುವುದಿಲ್ಲ. ಇದಕ್ಕಾಗಿ ಚಿಂತನಾ ಮತ್ತು ಅಭಿವ್ಯಕ್ತಿ ಸ್ವಾತಂತ್ರದ ಅವಶ್ಯವಿದೆ. ಈ ಸ್ವಾತಂತ್ರ್ಯಗಳ ನಿರಾಕರಣೆಯಿಂದ ಬೋಧನೆ ಮತ್ತು ಸಂಶೋಧನೆಗಳ ಮೇಲೂ ಪ್ರಭಾವ ಬೀಳಲಿದೆ. ಈಗ ಈ ವಿಚಾರಗಳು ತೀವ್ರ ದಾಳಿಗೆ ಒಳಗಾಗಿವೆ ಮತ್ತು ಇಡೀ ಅಕಾಡೆಮಿಕ್ ಸಮುದಾಯದ ಮೇಲೆ 'ದೇಶದ್ರೋಹಕ್ಕೆ ಶಿಕ್ಷೆ'ಯ ಭೀತಿಯ ಕತ್ತಿ ತೂಗಾಡುತ್ತಿದೆ. ಇಷ್ಟಾದರೂ ವರದಿಯಲ್ಲಿ ಈ ವಿಷಯದ ಪ್ರಸ್ತಾಪವೇ ಇಲ್ಲ.

ಭಾಗ – 3

ವರದಿಯಲ್ಲಿನ ಅಧ್ಯಾಪಕರ ನೇಮಕಾತಿಯ ಕುರಿತ ಎರಡು ವಿಷಯಗಳು ನಿರ್ದಿಷ್ಟ ಬದಲಾವಣೆ ತರುವ ಅಪಾಯಕಾರಿ ಸಾಧ್ಯತೆಯಿದ್ದು,ವರದಿಯ ತಾತ್ವಿಕ ದೋಷವನ್ನುಅವುಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಒಂದು ಅಧ್ಯಾಪಕರನೇಮಕಾತಿಯಲ್ಲಿ ಮೀಸಲಾತಿ ತೆಗೆದು ಹಾಕುವ ಪ್ರಸ್ತಾಪವಿದೆ. ಇದನ್ನು ಪ್ರಕಟವಾಗಿ ಹೇಳದಿದ್ದರೂ ವರದಿಯಲ್ಲಿ "ಮೆರಿಟ್" ಮಾತ್ರ ಆಧಾರಿತವಾಗಿರುವ ನೇಮಕಾತಿಗೆ ತೊಡಗಲಿದ್ದು ಇಲ್ಲಿಯವರೆಗಿನ ರೂಢಿಗತ ಪದ್ಧತಿಯನ್ನು ಬದಲಾಯಿಸುವ ಸ್ಪಷ್ಟ ಸೂಚನೆಯಿದೆ. ವಿದ್ಯಾರ್ಥಿಗಳ ಪ್ರವೇಶದಲ್ಲಿ ಮೀಸಲಾತಿ ಇರುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಖಚಿತವಾಗಿಲ್ಲ. ಆದರೆ ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿ ಮಾಡುವ ಪ್ರಸ್ತಾಪವಂತೂ ಖಂಡಿತ ಇಲ್ಲ. ಅಧ್ಯಾಪಕರನೇಮಕಾತಿಯಲ್ಲಿ ಮೀಸಲಾತಿ ಇರುವುದಿಲ್ಲವೆಂಬ ವಿಷಯ ಖಚಿತವಾಗಿದೆ. ಭಾರತದ ಚರಿತ್ರೆಯಲ್ಲಿ ಜಾತಿ-ದಮನದ ಅಸ್ತಿತ್ವದ ಬಗ್ಗೆ ವರದಿಯ ಮೌನದ ಹಿಂದಿರುವ ಬ್ರಾಹ್ಮಣವಾದಿ ಪೂರ್ವಗ್ರಹ ಇಲ್ಲಿ ಸ್ಪಷ್ಟವಾಗಿ ಪ್ರಕಟವಾಗಿದೆ.

ಸಾಮಾಜಿಕ ಸಮಾನತೆಯನ್ನು ಸಾಧಿಸಲು ಇರುವ ಮೀಸಲಾತಿಯಿಂದ ಬೌದ್ಧಿಕ ಗುಣಮಟ್ಟ ಮತ್ತು ಶ್ರೇಷ್ಟತೆ ಬಲಿಯಾಗುತ್ತಿದೆ ಎಂಬ ಸಾಮಾನ್ಯತಪ್ಪು ಅಭಿಪ್ರಾಯವಿದೆ. ಬೌದ್ಧಿಕ ಶ್ರೇಷ್ಟತೆಯನ್ನು ಪಡೆಯಲು ಮೀಸಲಾತಿಯ ಅವಶ್ಯವಿದೆ. ಪ್ರತಿಭೆ ಎಲ್ಲಾ ಜಾತಿಯ ಜನರಲ್ಲೂ ಸಾಮಾನ್ಯವಾಗಿ ಒಂದೇ ಆಗಿದ್ದು, ಕೆಲವು ಸಾಮಾಜಿಕ ಗುಂಪುಗಳು ಭೌದ್ಧಿಕ ಮತ್ತು ವೃತ್ತಿಪರ ಹುದ್ದೆಗಳಲ್ಲಿ ಹೆಚ್ಚಿನ ಪಾಲು ಪಡೆದಿವೆ. ಅರ್ಹರಲ್ಲದ ಈ ವಿಶೇಷ ಗುಂಪುಗಳ ಸದಸ್ಯರು,ಅವಕಾಶ ವಂಚಿತ ಗುಂಪುಗಳಲ್ಲಿ ಅವರಿಗಿಂತ ಹೆಚ್ಚು ಪ್ರತಿಭಾವಂತರಿಗೆ ಹೋಲಿಸಿದರೆ, ಹೆಚ್ಚಿನ ಆದ್ಯತೆ ಪಡೆಯುವ ಸ್ಥಿತಿರೋಗಲಕ್ಷಣದ ಪ್ರತೀಕ. ಇದು ಸಾಧ್ಯವಾಗುವುದು ಸಾಂಪ್ರದಾಯಿಕವಾಗಿರುವ 'ಪ್ರವೇಶದ ತಡೆ ಗೋಡೆಗಳ'ಮೂಲಕ. ಮೀಸಲಾತಿ ವ್ಯವಸ್ಥೆಗೆ ಇಂತಹ 'ಪ್ರವೇಶದ ತಡೆ ಗೋಡೆಗಳ'ನ್ನುಮುರಿದು ಹಾಕಿ,ಗುಣಮಟ್ಟವನ್ನುಹೆಚ್ಚಿಸಲು ಸಾಧ್ಯವಾಗುತ್ತದೆ.

ಮೀಸಲಾತಿಯಿಂದ ಅವಕಾಶ ವಂಚಿತ ಮೀಸಲಾತಿಯಲ್ಲಿರುವ ಗುಂಪುಗಳಿಂದ ಯಶಸ್ವಿಯಾಗಿ ಬಂದುಪ್ರವೇಶ ಪಡೆದವರಿಗೆಅವರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಪರಿಹಾರ ಕ್ರಮಗಳಿರಬೇಕು. ಆದರೆ ಶ್ರೇಷ್ಟತೆ ಮತ್ತು ಗುಣಮಟ್ಟದ ಹೆಸರಿನಲ್ಲಿ ಮೀಸಲಾತಿಯನ್ನೇ ತೆಗೆದುಹಾಕುವುದು ದೂರದೃಷ್ಠಿ ಇರದ ನೀತಿ. ದೀರ್ಘಾವಧಿ ನೈಜ ಶ್ರೇಷ್ಟತೆಗೆ ಬದಲಾಗಿ ಅಲ್ಪಾವಧಿಯ ತೋರಿಕೆಯ ಶ್ರೇಷ್ಠತೆಗೆ ದಾರಿ ಮಾಡಿದಂತಾಗುತ್ತದೆ. ಈ ವರದಿ ಮಾಡುತ್ತಿರುವುದು ಅದನ್ನೇ.

ಸಾಮಾಜಿಕ ನ್ಯಾಯ ಸಾಧಿಸಲು ಮೀಸಲಾತಿ ಇರಬೇಕೆಂಬ ವಾದವಂತೂ ಇದ್ದೇ ಇದೆ. ಈಗ ಅಮೇರಿಕಾದಲ್ಲೂ ನಿಗದಿತ ಹುದ್ದೆಗಳಿಗೆ,ಇವರೆಗೆ ಇವುಗಳಿಂದ ಹೊರತಾದ ವರ್ಗದಿಂದ "ಮೀಸಲಾತಿ ನೇಮಕಾತಿ"ಯನ್ನು"ಅವಕಾಶ-ಗುರಿ"ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ. ಗುಣಮಟ್ಟದಂತಹ ಅರ್ಥಹೀನ ವಾದ ಆಧರಿಸಿ ಮೀಸಲಾತಿಯನ್ನು ತೆಗೆದುಹಾಕಲು ಸೂಚಿಸಿರುವುದು, ವರದಿಯ ಅಸಮರ್ಪಕತೆಯ ಲಕ್ಷಣವಾಗಿದೆ.

ವರದಿಯ ಎರಡನೇಯ ವಿಷಯವೆಂದರೆ ಅಕಾಡೆಮಿಕ್ ವೃತ್ತಿಯಲ್ಲಿ ಪದೋನ್ನತಿ ಪಡೆಯಲು ಕೇವಲ ಅಕಾಡೆಮಿಕ್ ಸಾಧನೆಯೇ ಮಾನದಂಡ ಎಂದು ವರದಿ ಸೂಚಿಸಿರುವುದು.ಭೌತಿಕ ಉನ್ನತಿಯೇ "ಅಕಾಡೆಮಿಕ್ ಶೇಷ್ಟತೆಯನ್ನು ಸಾಧಿಸಲು ಇರುವ ಪ್ರೇರೇಪಣೆ" ಎಂಬ ಬೂರ್ಜ್ವಾ ನಂಬಿಕೆಯ ಮೇಲೆ ಇದು ಆಧಾರಿತವಾಗಿದೆ. ಇದನ್ನು ಯಾವ ಮುಂದುವರೆದ ದೇಶದ ವಿಶ್ವವಿದ್ಯಾನಿಲಯಗಳು (ಉದಾ: ಆಕ್ಸ್ ಬಿಡ್ಜ್)ಗಂಭೀರವಾಗಿ ಪರಿಗಣಿಸಿಲ್ಲ. ಇದು ನಮ್ಮಂತಹ ದೇಶಗಳಿಗಂತೂಇನ್ನಷ್ಟು ಅಪಾಯಕಾರಿಯಾಗುತ್ತದೆ. ಹಿರಿಯ ವ್ಯಕ್ತಿಯನ್ನು ಕೇವಲ ಸಾಕಷ್ಟು ಅಕಾಡೆಮಿಕ್ ಕೆಲಸ ಮಾಡಿಲ್ಲದ ಕಾರಣದಿಂದ ಕಿರಿಯ ಸ್ಥಾನದಲ್ಲಿಟ್ಟರೆ ಎದೆಗುಂದುತ್ತಾನೆ. ಮತ್ತೊಂದು ಕಡೆ ಸಾಕಷ್ಟು ಅಕಾಡೆಮಿಕ್ ಕೆಲಸ ಮಾಡಿರುವ ವ್ಯಕ್ತಿಗಳು ಉನ್ನತಿ ಪಡೆಯುವುದು, ಹೊಸ ಪದ್ಧತಿಯಲ್ಲಿ "ವಿಶ್ವಮಟ್ಟ"ಕ್ಕೆ ಒತ್ತು ನೀಡುವುದರಿಂದಾಗಿ, ನಿರಂತರವಾಗಿ ಮುಂದುವರೆದ ದೇಶಗಳ ವಿಶ್ವವಿದ್ಯಾನಿಲಯಗಳಿಗೆ ವಲಸೆ ಹೋಗಲು ಪ್ರಯತ್ನಿಸುತ್ತಿರುತ್ತಾರೆ.

ಆದ್ದರಿಂದ ಪ್ರತಿಯೊಂದು ವಿ.ವಿ. ಗಳಲ್ಲಿ ಎರಡು ರೀತಿಯ ಜನರಿರುತ್ತಾರೆ. ಮೊದಲನೇಯದಾಗಿ ಜೀವನಪೂರ್ತಿ ಕೆಳಹಂತಗಳಲ್ಲೇ ಪದೋನ್ನತಿಗಳು ಸಿಗದೇ ಅತೃಪ್ತರಾಗಿ ಎದೆಗುಂದಿದ ವ್ಯಕ್ತಿಗಳು ಮತ್ತು ಬೇಗ ಬೇಗ ಮೇಲೆರುವ ನಿರಂತರವಾಗಿ ಹೊರದೇಶಗಳ ವಿವಿಗಳಲ್ಲಿ ಸಿಗುವ ಅವಕಾಶಗಳಿಗೆ ಕಾತುರಾದವರು. ಇಂತಹ ಪರಿಸ್ಥಿತಿಯಲ್ಲಿ ವಿವಿ ನಿಲಯಗಳು ಶ್ರೇಷ್ಟತೆ ಸಾಧಿಸುವುದಿರಲಿ, ಕೇವಲ ಹೊಟ್ಟೆ ಕಿಚ್ಚಿನ ಕುತಂತ್ರ ನಡೆಸುವಲ್ಲಿ, ಸೌಹಾರ್ದತೆ ಸಂಪೂರ್ಣವಾಗಿ ಕಾಣೆಯಾಗಿರುವ ತಾಣಗಳಾಗುತ್ತವೆ. ಇದು ಹೊರದೇಶದ ಅವಕಾಶಗಳಿಗೆ ಕಾದಿರುವವರಿಗೆವಲಸೆ ಹೋಗಲು ಇನ್ನಷ್ಟು ಕುಮ್ಮಕ್ಕು ಕೊಡುತ್ತವೆ.

ಶ್ರೇಷ್ಟತೆಯನ್ನು ವಿ.ವಿ. ನಿಲಯಗಳಲ್ಲಿ ಉತ್ತೇಜಿಸಬೇಕಾದರೆ ತೆಗೆದುಕೊಳ್ಳಬೇಕಾದ ಅವಶ್ಯಕ್ರಮವೆಂದರೆ ಭೌತಿಕ ಮತ್ತು ವೃತಿಯಲ್ಲಿನ ಉನ್ನತಿಯನ್ನು ಅಕಾಡೆಮಿಕ್ ಸಾಧನೆ (ಈಗ ಬಹುತೇಕ ವಿವಿ ನಿಲಯಗಳಲ್ಲಿ ವೃತಿ ಉನ್ನತಿಗಾಗಿ ಇರುವ ಯೋಜನೆಗಳು ಮಾಡುವಂತೆ) ಮಾತ್ರದಿಂದ ಬೇರ್ಪಡಿಸುವುದೇ ಆಗಿದೆ,

ಈ ವರದಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ವೃತ್ತಿ ಅವಕಾಶಗಳ ಬೆಳವಣಿಗೆಗಳಿಗೆ, ಬಹು ಶಿಸ್ತೀಯ ಅಭ್ಯಾಸಕ್ಕೆ (ಹಿಂದುತ್ವವು ಈ ಪ್ರಯತ್ನವನ್ನು ಬುಡಮೇಲು ಮಾಡದಿದ್ದಲ್ಲಿ) ಹಾಗೂ ಉನ್ನತ ಶಿಕ್ಷಣವನ್ನು ವ್ಯವಸ್ಥಿತಗೊಳಿಸಲು ಕೆಲವು ಆಸಕ್ತಿದಾಯಕ ಸಲಹೆ ನೀಡಿದ್ದರೂ,ಎರಡು ಪ್ರಮುಖ ಕಾರಣಗಳಿಂದ ಸೋಲುತ್ತದೆ. ಒಂದು ಶಿಕ್ಷಣ ಕ್ಷೇತ್ರದ ಮೇಲೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು. ಎರಡನೇಯದು, ಬೂರ್ಜ್ವಾ ಚಿಂತನೆಯ ಶ್ರೇಷ್ಟತೆಯ ವಿಚಾರವನ್ನು ಯಾವುದೇ ಯೋಚನೆಯಿಲ್ಲದೆ, ಜಾತಿ ಮತ್ತು ಉಳಿದ ಹಲವು ಹೊರಗಿಡುವ ವಿಷಯಗಳಿಂದ ರೂಪುಗೊಂಡ ಸಂಕೀರ್ಣ ಸನ್ನಿವೇಶದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಹೊರಿಸುತ್ತಿರುವುದು. ●

370ನೇ ವಿಧಿ ಮತ್ತು ಕಾಶ್ಮೀರದ ಆಮೂಲಾಗ್ರ ಭೂಸುಧಾರಣೆ



ಜಮ್ಮು ಮತ್ತು ಕಾಶ್ಮೀರವು ಒಂದು ಅತಿ ಕ್ರೂರ ದಬ್ಬಾಳಿಕೆ ನಡೆಸುವ ಪಾಳೆಗಾರಿ ಆಳ್ವಿಕೆಗೆ ಒಳಪಟ್ಟಿತ್ತು ಈ ಪಾಳೆಗಾರಿ ಆಡಳಿತವು ರೈತಾಪಿಯನ್ನು (ಬಹುತೇಕ ಮುಸ್ಲಿಮರು) ಅಜ್ಞಾನ ಮತ್ತು ಅತಿ ದೀನಾವಸ್ಥೆಯ ಬಡತನದಲ್ಲಿಟ್ಟಿತ್ತು. ಅಂತಹ ಒಂದು ಪಾಳೆಗಾರಿ ಅರ್ಥವ್ಯವಸ್ಥೆಯನ್ನು ದೇಶದಲ್ಲೇ ಅತಿ ಕಡಿಮೆ ಬಡತನದ ಅನುಪಾತ ಇರುವ ಮಟ್ಟಕ್ಕೆ ಮಾರ್ಪಡಿಸಿದ್ದು ಒಂದು ಸಾಧನೆಯೇ. ಈ ಸಾಧನೆ ಅಮಿತ್ ಶಾ ಗೆ ಮೆಚ್ಚುಗೆಯಾಗಲಿಕ್ಕಿಲ್ಲ. ಆದರೆ, ಯಾವುದೇ ಮಾನದಂಡದಿಂದ ಅಳೆದರೂ ಅದೊಂದು ಗಣನೀಯ ಸಾಧನೆಯೇ. ಮತ್ತು, ಆ ಸಾಧನೆಯನ್ನು ಆಗು ಮಾಡಿದ 370ನೇ ವಿಧಿಯ ಪಾತ್ರವೂ ಗಣನೀಯವೇ. ಸಂವಿಧಾನದ ಯಾವ 370ನೇ ವಿಧಿ ಜಮ್ಮು ಮತ್ತು ಕಾಶ್ಮೀರದ "ಅಭಿವೃದ್ಧಿ"ಗೆ ಅಡಚಣೆಯಾಗಿದೆ ಎಂದು ಅಮಿತ್ ಶಾ ಪಾರ್ಲಿಮೆಂಟಿನಲ್ಲಿ ಒಂದು ವಿಡಂಬನೆಯಾಗಿ ಹೇಳಿದ್ದರೋ, ಅದೇ 370ನೇ ವಿಧಿಯ ಪಾತ್ರ!

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ದೇಶದಲ್ಲಿ ಭೂ ಸುಧಾರಣೆಗಳನ್ನು ಜಾರಿಗೊಳಿಸಿದ ಮೊದಲನೆಯ ರಾಜ್ಯವೇ ಜಮ್ಮು ಮತ್ತು ಕಾಶ್ಮೀರ. ಈ ಭೂಸುಧಾರಣೆಗಳು ಎರಡು ಮಹತ್ವದ ಅಂಶಗಳಿಂದ ಕೂಡಿದ್ದವು. ಮೊದಲನೆಯದು, ಮಹಾರಾಜರ ಕಾಲದಲ್ಲಿ ರೂಢಿಯಲ್ಲಿದ್ದ ಅನುಪಸ್ಥಿತ ಜಮೀನ್ದಾರಿ ಪದ್ಧತಿಯನ್ನು ಸಂಪೂರ್ಣವಾಗಿ ರದ್ದು ಮಾಡಲಾಯಿತು. ಅನುಪಸ್ಥಿತ ಜಮೀನ್ದಾರರ ಭೂಮಿಯನ್ನು ಯಾವುದೇ ಪರಿಹಾರವಿಲ್ಲದೆ ವಶಪಡಿಸಿಕೊಂಡು ಅದನ್ನು ಗೇಣಿದಾರರಿಗೆ ಹಾಗೆಯೇ ಹಂಚಲಾಯಿತು. ಯಾವ ಗೇಣಿದಾರನು, ಅನುಪಸ್ಥಿತ ಜಮೀನ್ದಾರನ ಎಷ್ಟು ಭೂಮಿಯನ್ನು ಉಳುಮೆ ಮಾಡುತ್ತಿದ್ದನೊ ಅಷ್ಟೂ ಭೂಮಿಯ ಒಡೆತನವನ್ನು, ಅದೇ ಗೇಣಿದಾರನಿಗೆ ಪುಕ್ಕಟೆಯಾಗಿ ಕೊಡಲಾಯಿತು. ಎರಡನೆಯ ಮಹತ್ವದ ಅಂಶವೆಂದರೆ, ಗಂಡು ಯಜಮಾನಿಕೆಯ ಒಂದು ಕುಟುಂಬದ ಭೂಮಿಯ ಒಡೆತನವನ್ನು 22.75 ಎಕರೆಗೆ ಮಿತಿಗೊಳಿಸಲಾಯಿತು. ಈ ಮಿತಿಗಿಂತ ಅಧಿಕವಾಗಿ ಹೊಂದಿದ್ದ ಭೂಮಿಯನ್ನು ಯಾವುದೇ ಪರಿಹಾರವಿಲ್ಲದೆ ವಶಪಡಿಸಿಕೊಂಡು ಅದನ್ನು ಬಡ ಗೇಣಿದಾರರಿಗೆ ಮತ್ತು ಭೂ ಹೀನರಿಗೆ, ಅವರಿಂದ ಒಂದು ಪೈಸೆಯನ್ನೂ ತೆಗೆದುಕೊಳ್ಳದೆ ಹಂಚಲಾಯಿತು.

ಈ ಭೂ ಸುಧಾರಣೆಗಳಲ್ಲಿ ಕೆಲವು ದೌರ್ಬಲ್ಯಗಳೂ ಇದ್ದವು. ಸ್ವಭಾವತಃ ಶಾಸನಗಳಲ್ಲಿರುವ ದೌರ್ಬಲ್ಯಗಳಿಂದಾಗಿ, ಈ ಭೂಸುಧಾರಣೆಗಳಿಂದಲೂ ಸಣ್ಣ ಸಣ್ಣ ರೈತರಿಗೆ ಹೆಚ್ಚು ಪ್ರಯೋಜನವಾಗಲಿಲ್ಲ. ಸಣ್ಣ ಸಣ್ಣ ಗೇಣಿದಾರರು, ಅನುಪಸ್ಥಿತ ಜಮೀನ್ದಾರನ ಭೂಮಿಯಲ್ಲಿ ಎಷ್ಟು ತುಂಡು ಭೂಮಿಯನ್ನು ಉಳುಮೆ ಮಾಡುತ್ತಿದ್ದರೋ ಅಷ್ಟೇ ತುಂಡು ಭೂಮಿಯ ಒಡೆತನ ಅವರಿಗೆ ಲಭಿಸಿತು. ಭೂರಹಿತರಿಗೆ ಈ ಭೂಸುಧಾರಣೆಗಳಿಂದ ಹೆಚ್ಚು ಪ್ರಯೋಜನವಾಗಲಿಲ್ಲ. ಭೂಮಿಯ ಒಡೆತನದ ಮೇಲೆ ನಿಗದಿಪಡಿಸಿದ್ದ ಮಿತಿಗಿಂತ ಅಧಿಕವಾಗಿ ಹೊಂದಿದ್ದ ಭೂಮಿಯನ್ನು ಭೂರಹಿತರು ಪಡೆದರು. ಆದರೆ, ಸಾಮಾನ್ಯವಾಗಿ, ಇದು ಖರಾಬು ಭೂಮಿಯೇ ಆಗಿರುತ್ತಿತ್ತು– ಹೇಗೆಂದರೆ, ಜಮೀನ್ದಾರರು ತಮ್ಮ ಒಟ್ಟು ಭೂಮಿಯಲ್ಲಿ ಉಪಯೋಗಕ್ಕೆ ಬಾರದ (ಖರಾಬು) ಭೂಮಿಯ ಭಾಗವಷ್ಟನ್ನೇ ಬಿಟ್ಟುಕೊಡುತ್ತಿದ್ದರು. ಅಲ್ಲದೆ, ಜಮೀನ್ದಾರರು ತಮ್ಮ ಕುಟಿಲ ಉಪಾಯಗಳ ಮೂಲಕ ದಾಖಲೆ ಸೃಷ್ಟಿಸಿ ಭೂಮಿತಿಯಿಂದ ಹಾಗೂ ಹೀಗೂ ತಪ್ಪಿಸಿಕೊಳ್ಳುತ್ತಿದ್ದರು. ಮೇಲಾಗಿ, ಹೆಚ್ಚುವರಿ ಭೂಮಿಯ ಹಂಚಿಕೆಯನ್ನು ಅಧಿಕಾರಶಾಹಿಯೇ ನಿರ್ವಹಿಸಿತು – ಚೀನಾದಲ್ಲಿ ಈ ಕಾರ್ಯವನ್ನು ಕ್ರಾಂತಿಕಾರಿ ರೈತರ ಸಮಿತಿಯೇ ನಿರ್ವಹಿಸಿತ್ತು. ಈ ಭೂಸುಧಾರಣೆಗಳಿಂದ ಎಲ್ಲ ರೈತರಿಗೂ ಒಂದೇ ತೆರನಾದ ಪ್ರಯೋಜನ ಲಭಿಸದಿದ್ದರೂ, ಈ ಭೂಸುಧಾರಣೆಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಪಾಳೆಗಾರಿ ಜಮೀನ್ದಾರಿಕೆಯನ್ನು ನಾಶ ಮಾಡುವಲ್ಲಿ ಯಶಸ್ವಿಯಾದವು. ಇದು 1950ರ ದಶಕದ ಆದಿ ಭಾಗದಲ್ಲೇ ಜರುಗಿತ್ತು ಮತ್ತು ಅದಕ್ಕೂ ಮೊದಲೇ, 1950ನೇ ಇಸವಿಯಲ್ಲೇ, ದೊಡ್ಡ ದೊಡ್ಡ ಎಸ್ಟೇಟ್‌ಗಳ ರದ್ದತಿ ಕಾಯ್ದೆ ಜಾರಿಯಾಗಿತ್ತು. ಎಂಬುದು ಗಮನಾರ್ಹ ಸಂಗತಿ.

ಭಾರತದಲ್ಲಿ ಅದುವರೆಗಿನ ಯಾವುದೇ ರಾಜ್ಯದ ಭೂಸುಧಾರಣೆಗಳಿಗಿಂತಲೂ(ಕೇರಳದಲ್ಲಿ ಭೂಸುಧಾರಣೆಗಳು 1957ರಲ್ಲಿ ಕಮ್ಯೂನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಾರಿಯಾದವು) ಹೆಚ್ಚು ಆಮೂಲಾಗ್ರ ಭೂಸುಧಾರಣೆಗಳನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಆ ಕಾಲಘಟ್ಟದಲ್ಲೇ ಜಾರಿಗೊಳಿಸಲು ಸಾಧ್ಯವಾಗಿಸಿದ ಒಂದು ಮುಖ್ಯ ಕಾರಣವೆಂದರೆ, ಸಂವಿಧಾನದ ಯಾವ 370ನೇ ವಿಧಿ ಜಮ್ಮು ಮತ್ತು ಕಾಶ್ಮೀರದ "ಅಭಿವೃದ್ಧಿ"ಗೆ ಅಡಚಣೆಯಾಗಿದೆ ಎಂದು ಅಮಿತ್ ಶಾ ಪಾರ್ಲಿಮೆಂಟಿನಲ್ಲಿ ಒಂದು ವಿಡಂಬನೆಯಾಗಿ ಹೇಳಿದ್ದರೋ, ಅದೇ 370ನೇ ವಿಧಿ!



ಜಮ್ಮು ಮತ್ತು ಕಾಶ್ಮೀರದ ಸಂವಿಧಾನದಂತಲ್ಲದೆ, ಭಾರತದ ಸಂವಿಧಾನದಲ್ಲಿ ಆಸ್ತಿಯ ಹಕ್ಕನ್ನು ಇತರ ಮೂಲಭೂತ ಹಕ್ಕುಗಳ ಜೊತೆಯಲ್ಲಿ ಸೇರಿಸಲಾಗಿದೆ. ಉತ್ತರ ಪ್ರದೇಶ, ಬಿಹಾರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಭೂಸುಧಾರಣೆ ಮಸೂದೆಗಳನ್ನು ಮಂಡಿಸಿದಾಗ, ಈ ಕ್ರಮವು ಸಂವಿಧಾನ ಬದ್ಧ ಗ್ಯಾರಂಟಿಯಾಗಿ ತಮಗೆ ದತ್ತವಾದ ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಜಮೀನ್ದಾರರು ಹೈ ಕೋರ್ಟ್‌ನಲ್ಲಿ ದಾವೆ ಹೂಡಿದರು. ಹೈ ಕೋರ್ಟ್‌ನ ತೀರ್ಪುಗಳು ಜಮೀನ್ದಾರರ ಪರವಾಗಿದ್ದವು. ನಂತರ, ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲಾಯಿತು.

ಈ ಹಂತದಲ್ಲಿ, ಒಂದು ಪೂರ್ವತಯಾರಿಯಾಗಿ, ಸುಪ್ರೀಂ ಕೋರ್ಟ್ ತೀರ್ಪು ಕೊಡುವ ಮುನ್ನವೇ, ಜವಾಹರ್‌ಲಾಲ್ ನೆಹರೂ ಸರ್ಕಾರವು ಭಾರತದ ಸಂವಿಧಾನಕ್ಕೆ ಮೊದಲನೆಯ ತಿದ್ದುಪಡಿಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿತು. ಈ ತಿದ್ದುಪಡಿಯ ಪ್ರಕಾರವಾಗಿ ಈ ನಿರ್ದಿಷ್ಟ ಮೂರು ರಾಜ್ಯಗಳ ಭೂಸುಧಾರಣೆ ಕಾಯ್ದೆಗಳಿಗೆ ನ್ಯಾಯಾಲಯದ ಪರಾಮರ್ಶೆಯಿಂದ ವಿನಾಯ್ತಿ ಕೊಟ್ಟದ್ದು ಮಾತ್ರವಲ್ಲ, ಅದರ ಜೊತೆಯಲ್ಲಿ, ಭಾರತದ ಸಂವಿಧಾನಕ್ಕೆ 9ನೇ ಷೆಡ್ಯೂಲನ್ನು ಸೇರಿಸಲಾಯಿತು. 9ನೇ ಷೆಡ್ಯೂಲಿಗೆ ಸೇರಿಸಿದ ಎಲ್ಲಾ ಕಾಯ್ದೆಗಳೂ ನ್ಯಾಯಾಲಯದ ಪರಾಮರ್ಶೆಯಿಂದ ವಿನಾಯ್ತಿ ಪಡೆಯುತ್ತವೆ.

ವಿಷಯ ಇಲ್ಲಿಗೇ ಕೊನೆಗೊಳ್ಳಲಿಲ್ಲ. ಈ ವಿಷಯಕ್ಕೆ ಸಂಬಂಧವೇ ಇಲ್ಲದ ಇನ್ನೊಂದು ತಗಾದೆ ಸುಪ್ರೀಂ ಕೋರ್ಟ್‌ಗೆ ಬಂದಾಗ, ಪ್ರಭುತ್ವವು ಖಾಸಗಿ ಆಸ್ತಿಯನ್ನು ವಶಪಡಿಸಿಕೊಂಡ ಎಲ್ಲ ಪ್ರಕರಣಗಳಲ್ಲೂ "ಮಾರುಕಟ್ಟೆ ಬೆಲೆ"ಯಲ್ಲಿ ಪರಿಹಾರ ಕೊಡಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ 1954ರಲ್ಲಿ ಆದೇಶಿಸಿತು. ಅಂದರೆ, ಭೂಸುಧಾರಣೆ ಕಾಯ್ದೆಯ ಪ್ರಕಾರ, ಒಡೆತನದ ಮಿತಿಗಿಂತ ಅಧಿಕವಾದ ಭೂಮಿಯನ್ನು ಜಮೀನ್ದಾರರಿಂದ ವಶಪಡಿಸಿಕೊಂಡಾಗ ಅವರಿಗೆ ಪ್ರಭುತ್ವವು "ಮಾರುಕಟ್ಟೆ ಬೆಲೆ"ಯಲ್ಲಿ ಪರಿಹಾರ ಕೊಡಬೇಕಾಗುತ್ತದೆ. ಇದು ಖಜಾನೆಯು ಹೊರಲಾರದ ಭಾರವಾಗಿದ್ದುದರಿಂದ ನೆಹರೂ ಸರ್ಕಾರವು ಸಂವಿಧಾನಕ್ಕೆ ನಾಲ್ಕನೆಯ ತಿದ್ದುಪಡಿ ತಂದಿತು. ಈ ತಿದ್ದುಪಡಿಯ ಪ್ರಕಾರ, ಪ್ರಭುತ್ವವು ವಶಪಡಿಸಿಕೊಂಡ ಜಮೀನಿಗೆ ಕೊಡುವ ಪೂರ್ಣ ಪರಿಹಾರವು ಮಾರುಕಟ್ಟೆ ಬೆಲೆಯಿಂದ ವಿನಾಯ್ತಿ ಪಡೆಯುತ್ತದೆ. ಈ ತಿದ್ದುಪಡಿಯನ್ನೂ 9ನೇ ಷೆಡ್ಯೂಲಿಗೆ ಸೇರಿಸಿದ ಪರಿಣಾಮವಾಗಿ ಈ ಪ್ರಕ್ರಿಯೆ ನ್ಯಾಯಾಲಯದ ಪರಾಮರ್ಶೆಯಿಂದ ಹೊರಗುಳಿಯಿತು.

ಇಂತಹ ದೀರ್ಘಾವಧಿಯ ಕಾನೂನು ಸೆಣಸಾಟಗಳಿಂದಾದ ಪರಿಣಾಮವೆಂದರೆ, ಜಮೀನ್ದಾರರಿಂದ ವಶಪಡಿಸಿಕೊಂಡ ಭೂಮಿಯನ್ನು, ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಿದ್ದಂತೆ ಪುಕ್ಕಟೆಯಾಗಿ ಹಂಚಲಾಗಲಿಲ್ಲ. ಜಮೀನು ಪಡೆದವರು, ಜಮೀನಿನ ಮಾರುಕಟ್ಟೆ ಬೆಲೆಯಷ್ಟಲ್ಲದಿದ್ದರೂ, ಒಂದಿಷ್ಟು ಪರಿಹಾರವನ್ನು ಜಮೀನ್ದಾರರಿಗೆ ಪರಿಹಾರವಾಗಿ ಕೊಡಬೇಕಾಗಿ ಬಂತು. ಹಾಗಾಗಿ, ಜಮೀನ್ದಾರರಿಂದ ವಶಪಡಿಸಿಕೊಂಡ ಜಮೀನು ಪಡೆದ ಗೇಣಿದಾರರಿಗೂ ಸಹ, ಅದು ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಿದ್ದಂತೆ ಪುಕ್ಕಟೆಯಾಗಿ ಸಿಗಲಿಲ್ಲ. ಭಾರತದ ಇತರ ರಾಜ್ಯಗಳಲ್ಲಿ, ಗೇಣಿದಾರರಾಗಿ ಉಳುಮೆ ಮಾಡುತ್ತಿದ್ದ ಜಮೀನನ್ನು ಕೊಳ್ಳುವ ಅಥವಾ ಮೊದಲಿದ್ದ ಹಾಗೆ ಅದೇ ಜಮೀನಿನಲ್ಲಿ ಗೇಣಿದಾರರಾಗಿಯೇ ಮುಂದುವರೆಯುವ ಆಯ್ಕೆಯ ಹಕ್ಕನ್ನು ಗೇಣಿದಾರರಿಗೆ ಕೊಡಲಾಯಿತು. ಅಂದರೆ, ತಮ್ಮ ಆಯ್ಕೆಯ ಪ್ರಕಾರವಾಗಿ ಗೇಣಿದಾರರರು ಆ ಜಮೀನಿಗೆ ಕೊಡುವ ಪರಿಹಾರ ಅಥವಾ ಗೇಣಿಯನ್ನು ಅವರು ಪ್ರಭುತ್ವಕ್ಕೆ ಕೊಡಬೇಕಾಗಿ ಬಂತು.

ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಅಭಿವೃದ್ಧಿಗೆ ಅದರ ವಿಶೇಷ ಸ್ಥಾನಮಾನವೇ ಅಡ್ಡ ಬರುತ್ತಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಉಪದೇಶ ಹೇಳುವ ಮೊದಲು ಅಮಿತ್ ಶಾ ತಮ್ಮ ರಾಜ್ಯದ ಪರಿಸ್ಥಿತಿಯನ್ನು ತೆರೆದಿಟ್ಟಿರುವ ಅಂಕಿ ಅಂಶಗಳನ್ನು ಮನನ ಮಾಡಿಕೊಳ್ಳಬೇಕು. ಮೋದಿ ಮತ್ತು ಅವರ ತವರು ರಾಜ್ಯ ಗುಜರಾತಿನಲ್ಲಿ, ಅಧಿಕೃತ ಅಂಕಿ ಅಂಶಗಳ ಪ್ರಕಾರ, ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಜನಸಂಖ್ಯೆಯ ಅನುಪಾತವು ಶೇ.26.7 ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಶೇ.8.1. ಸಾಮಾಜಿಕ ಪರಿಸ್ಥಿತಿಯನ್ನು ಅಳೆಯುವ ಇತರ ಹಲವು ಸೂಚಕಗಳಲ್ಲೂ ಜಮ್ಮು ಮತ್ತು ಕಾಶ್ಮೀರದ ದಾಖಲೆ ಅತ್ಯುತ್ತಮವಾಗಿದೆ. ಈ ದಾಖಲೆಯ ಸಾಧನೆಗೆ ಭೂಸುಧಾರಣೆಗಳ ಕೊಡುಗೆ ಅಪಾರವೇ. ಇವೆಲ್ಲವನ್ನೂ ಸಾಧ್ಯವಾಗಿಸಿದ ಅಂಶವೆಂದರೆ, ಭಾರತ ಸಂವಿಧಾನದ 370ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರ ಹೊಂದಿದ್ದ ಸ್ವಾಯತ್ತತೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಭೂಮಿ ವಶಪಡಿಸಿಕೊಳ್ಳುವ ಮತ್ತು ಅದನ್ನು ಹಂಚುವ ಎರಡೂ ಕ್ರಿಯೆಗಳೂ ಹಣವಿಲ್ಲದೇ ಜರುಗಿದವು – ಪುಕ್ಕಟೆಯವಾಗಿದ್ದವು. ಏಕೆಂದರೆ, ಭಾರತದ ಸಂವಿಧಾನದ 370ನೇ ವಿಧಿಯನ್ವಯ, ತನ್ನದೇ ಆದ ಸಂವಿಧಾನವನ್ನು ಹೊಂದುವ ಸ್ವಾಯತ್ತತೆಯ ಗ್ಯಾರಂಟಿಯನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಕೊಡಲಾಗಿತ್ತು, ಮತ್ತು, ಅದಕ್ಕಿಂತಲೂ ಮಿಗಿಲಾಗಿ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನದವು ಆಸ್ತಿಯ ಹಕ್ಕಿಗೆ ಸರ್ವಶ್ರೇಷ್ಠತೆಯ ಸ್ಥಾನ ಕೊಟ್ಟಿರಲಿಲ್ಲ. ಆದ್ದರಿಂದ, ಭಾರತದ ಯಾವುದೇ ರಾಜ್ಯದ ಭೂಸುಧಾರಣೆಗಳಿಗೆ ಹೋಲಿಸಿದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭೂಸುಧಾರಣೆಗಳು, ಕೊನೆಯಪಕ್ಷ ಪಾಳೆಗಾರಿ ಜಮೀನ್ದಾರರಿಂದ ಭೂಮಿ ಕಿತ್ತುಕೊಳ್ಳುವ ವಿಷಯದಲ್ಲಿ, ಸಮಗ್ರ ಮತ್ತು ಆಮೂಲಾಗ್ರವಾಗಿಯೂ ಇದ್ದವು. ಹಾಗಾಗಿ, ಕೆಲವು ರಾಜ್ಯಗಳಲ್ಲಿ ಎಡ ಪಕ್ಷಗಳು ಅಧಿಕಾರಕ್ಕೆ ಬಂದ ನಂತರ ಅಳಿದುಳಿದ ಭೂಸುಧಾರಣೆಗಳನ್ನು ಪೂರ್ಣಗೊಳಿಸುವವರೆಗೂ ಜಮ್ಮು ಮತ್ತು ಕಾಶ್ಮೀರವು ಬಹಳ ಕಾಲದ ವರೆಗೆ ಭೂಸುಧಾರಣೆಗಳ ಧೃವ ತಾರೆಯಾಗಿ ಉಳಿಯಿತು.

ಸಾಮಾಜಿಕ ಸಂರಚನೆ ಮತ್ತು ಭೂಮಿ ಹಂಚಿಕೆಯ ಹೊರತಾಗಿಯೂ, ಜಮ್ಮು ಮತ್ತು ಕಾಶ್ಮೀರದ ಭೂಸುಧಾರಣೆಗಳು ಆ ರಾಜ್ಯದಲ್ಲಿ ವರಮಾನದ

ಪುಟ 14 ಕ್ಕೆ



ಜಮ್ಮು ಮತ್ತು ಕಾಶ್ಮೀರದಲ್ಲಿ ಭೂಮಿ ವಶಪಡಿಸಿಕೊಳ್ಳುವ ಮತ್ತು ಅದನ್ನು ಹಂಚುವ ಎರಡೂ ಕ್ರಿಯೆಗಳೂ ಹಣವಿಲ್ಲದೇ ಜರುಗಿದವು – ಪುಕ್ಕಟೆಯವಾಗಿದ್ದವು. ಏಕೆಂದರೆ, ಭಾರತದ ಸಂವಿಧಾನದ 370ನೇ ವಿಧಿಯನ್ವಯ, ತನ್ನದೇ ಆದ ಸಂವಿಧಾನವನ್ನು ಹೊಂದುವ ಸ್ವಾಯತ್ತತೆಯ ಗ್ಯಾರಂಟಿಯನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಕೊಡಲಾಗಿತ್ತು, ಮತ್ತು, ಅದಕ್ಕಿಂತಲೂ ಮಿಗಿಲಾಗಿ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನದವು ಆಸ್ತಿಯ ಹಕ್ಕಿಗೆ ಸರ್ವಶ್ರೇಷ್ಠತೆಯ ಸ್ಥಾನ ಕೊಟ್ಟಿರಲಿಲ್ಲ. ಆದ್ದರಿಂದ, ಭಾರತದ ಯಾವುದೇ ರಾಜ್ಯದ ಭೂಸುಧಾರಣೆಗಳಗೆ ಹೋಲಿಸಿದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭೂಸುಧಾರಣೆಗಳು, ಕೊನೆಯಪಕ್ಷ ಪಾಳೆಗಾರಿ ಜಮೀನ್ದಾರರಿಂದ ಭೂಮಿ ಕಿತ್ತುಕೊಳ್ಳುವ ವಿಷಯದಲ್ಲಿ, ಸಮಗ್ರ ಮತ್ತು ಆಮೂಲಾಗ್ರವಾಗಿಯೂ ಇದ್ದವು. ಹಾಗಾಗಿ, ಕೆಲವು ರಾಜ್ಯಗಳಲ್ಲಿ ಎಡ ಪಕ್ಷಗಳು ಅಧಿಕಾರಕ್ಕೆ ಬಂದ ನಂತರ ಅಳಿದುಳಿದ ಭೂಸುಧಾರಣೆಗಳನ್ನು ಪೂರ್ಣಗೊಳಿಸುವವರೆಗೂ ಜಮ್ಮು ಮತ್ತು ಕಾಶ್ಮೀರವು ಬಹಳ ಕಾಲದ ವರೆಗೆ ಭೂಸುಧಾರಣೆಗಳ ಧೃವ ತಾರೆಯಾಗಿ ಉಳಿಯಿತು.

ಶೇಖ್ ಅಬ್ದುಲ್ಲಾ "ಉಳುವವನೇ ಹೊಲದೊಡೆಯ' ಆದೇಶಕ್ಕೆ ಸಹಿ ಹಾಕುತ್ತಿರುವುದು, ಜುಲೈ 1950



'ನಯಾ ಕಾಶ್ಮೀರ್'
ಮಹಾರಾಜನಿಗೆ ಶೇಖ್ ಅಬ್ದುಲ್ಲ ಸಲ್ಲಿಸಿದ ಪ್ರಜಾಸತ್ತಾತ್ಮಕ ಕಾಶ್ಮೀರದ ಪ್ರಣಾಳಿಕೆ, 1944

ಕೊಚ್ಚಿ ಹೋದ ಮಲೆಕುಡಿಯರ ನೆಲೆಗಳು..........

ಪುಟ 16 ರಿಂದ

ದಿನನಿತ್ಯ ಉಪಯೋಗಿಸುವ ಆಹಾರೋತ್ಪನ್ನಗಳನ್ನು ತಾಲೂಕು ಆಡಳಿತ ಒದಗಿಸುವ ಕಾರ್ಯ ಮಾಡುತ್ತಿದೆ. ಅನ್ನಾರು ಮಲೆಕುಡಿಯ ಕಾಲನಿಯ ಜನರು ಮಾತ್ರ ರಭಸವಾಗಿ ಹರಿಯುವ ನದಿಯನ್ನು ದಾಟಿಕೊಂಡು ಪೇಟೆ ಪಟ್ಟಣವನ್ನು ತಲುಪುತ್ತಿದ್ದಾರೆ. ಇಲ್ಲಿಗೆ ತಕ್ಷಣ ಸೇತುವೆ ನಿರ್ಮಾಣ ಕಾರ್ಯ ಅಗತ್ಯವಿದೆ.

ಪ್ರಕೃತಿ ವಿಕೋಪದ ಭೀಕರತೆ ಕಂಡು ಹೃದಯಾಘಾತ

ಮಲವಂತಿಗೆ ಗ್ರಾಮದ ಸಿಂಗನಾರು ಮಲೆಕುಡಿಯ ಕಾಲನಿಯಲ್ಲಿ ನಡೆದ ಭೀಕರ ಪ್ರಕೃತಿ ವಿಕೋಪವನ್ನು ಕಣ್ಣಾರೆ ಕಂಡ ಮತ್ತು ಸುಮಾರು 05 ಎಕ್ರೆ ತೋಟ, ಗದ್ದೆ ಸಂಪೂರ್ಣ ನಾಶವಾಗಿರುವುದರಿಂದ ಆಘಾತಗೊಳಗಾಗಿದ್ದ ರುಕ್ಮಯ್ಯ ಮಲೆಕುಡಿಯ (68) ಅವರು ಆಗಸ್ಟ್ 05 ರಂದು ಕುಸಿದು ಬಿದ್ದು ಹೃದಯಾಘಾತಕ್ಕೊಳಗಾಗಿದ್ದಾರೆ. ತಕ್ಷಣ ಮನೆಯವರು ಮತ್ತು ಸ್ಥಳೀಯರು ಸುಮಾರು 05 ಕಿ.ಮೀ ದೂರ ಕಾಲ್ನಡಿಗೆಯಲ್ಲಿ ಹೊತ್ತು ಒಯ್ದು ಬಳಿಕ ವಾಹನದ ಮೂಲಕ ಮಂಗಳೂರಿನ ಕೆ.ಎಂ.ಸಿ. ಆಸ್ಪತ್ರೆಗೆ ದಾಖಲಿಸಿದ್ದಾರೆ. ಇವರ ಮನೆಯ ಹಿಂಬಾಗ ಗುಲಾಬಿ ಮಲೆಕುಡಿಯ ಅವರ ಮನೆಯಂಗಳದಲ್ಲಿ ಸುಮಾರು 40 ಅಡಿ ಅಗಲದ ಐದಾರು ಕಿ.ಮೀ. ದೂರದ ಹೊಸ ನದಿಯೊಂದು ಉದ್ಭವವಾಗಿದೆ. ಈ ಸಂದರ್ಭ ಸುಮಾರು ಆರು ಅಡಿ ಎತ್ತರದ ನೀರಿನೊಂದಿಗೆ ಬೃಹತ್ ಬಂಡೆ, ಮರಗಳು ಉರುಳಿರುವುದನ್ನು ಕಣ್ಣಾರೆ ಕಂಡ ಇವರು ಈ ರೀತಿ ಭೀತಿಗೊಂಡು ಹೃದಯಾಘಾತಕ್ಕೊಳಗಾಗಿದ್ದಾರೆ ಎಂದು ತಿಳಿದು ಬಂದಿದೆ.

ಹೊಸ ನದಿಗಳ ಸೃಷ್ಟಿ

ಮಲವಂತಿಗೆ ಗ್ರಾಮದ ಸಿಂಗನಾರು, ಪೆರ್ಲೆ, ಅಡ್ಯದೋಡಿ ಪ್ರದೇಶಗಳಲ್ಲಿ ತೋಟಗಳ ಮಧ್ಯೆ 40ರಿಂದ 80 ಅಡಿ ಅಗಲದ ಬೃಹದಾಕಾರದ ಹೊಸ ನದಿಯೇ ಸೃಷ್ಟಿಯಾಗಿದೆ. ಇದರಿಂದಾಗಿ ಈ ಭಾಗದ ತೋಟ ಗದ್ದೆಗಳು ಸಂಪೂರ್ಣ ನಾಶವಾಗಿವೆ. ಹಲವಾರು ಮನೆಗಳು ಅಪಾಯದಂಚಿನಲ್ಲಿದೆ.

ಬೆಳ್ತಂಗಡಿ ತಾಲೂಕಿನ ಸುಮಾರು ಹತ್ತಕ್ಕೂ ಹೆಚ್ಚು ಗ್ರಾಮಗಳು ಪ್ರಕೃತಿ ವಿಕೋಪಕ್ಕೆ ತುತ್ತಾಗಿದ್ದು, ಮುನ್ನೂರಕ್ಕು ಹೆಚ್ಚು ಮನೆಗಳು ಸಂಪೂರ್ಣ ನಾಶವಾಗಿದೆ. ಹತ್ತಕ್ಕೂ ಹೆಚ್ಚು ಸೇತುವೆಗಳು ಐವತ್ತಕ್ಕೂ ಹೆಚ್ಚು ಕಿಂಡಿ ಅಣೆಕಟ್ಟುಗಳು, 150 ಕ್ಕೂ ಹೆಚ್ಚು ಮೋರಿಗಳು ಮತ್ತು 3 ಜಲ ವಿದ್ಯುತ್ ಡ್ಯಾಂಗಳು, ಜಲ ವಿದ್ಯುತ್ ಘಟಕಗಳು ಸಂಪೂರ್ಣ ನಾಶಗೊಂಡಿವೆ. ಡ್ಯಾಂ ಗಳಲ್ಲಿ 80 ಅಡಿಗೂ ಹೆಚ್ಚು ಮರಳು, ಮರ ಮಟ್ಟುಗಳು ಶೇಖರಣೆಗೊಂಡು ಭರ್ತಿಯಾಗಿವೆ. ಯಾವುದೇ ಕ್ಷಣದಲ್ಲೂ ಈ ಡ್ಯಾಂಗಳು ಒಡೆಯುವ ಅಪಾಯ ಎದುರಾಗಿದೆ. ಸಾವಿರಾರು ವಿದ್ಯುತ್ ಕಂಬಗಳು ಧರೆಗುರುಳಿ ಈ ಪ್ರದೇಶಗಳಲ್ಲಿ ಕತ್ತಲು ಕವಿದಿದೆ.

ಪ್ರಕೃತಿ ವಿಕೋಪಕ್ಕೆ ಒಳಗಾದ ಬೆಳ್ತಂಗಡಿ ತಾಲೂಕಿಗೆ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರವರು ಬೇಟಿ ನೀಡಿದರೂ ಕೂಡ ಮಿತ್ತಬಾಗಿಲು ಗ್ರಾಮದ ಕುಕ್ಕಾವು ಸೇತುವೆಗೆ ಮಾತ್ರ ಬೇಟಿ ನೀಡಿದ್ದು ಬಿಟ್ಟರೆ ಅತ್ಯಂತ ಹೆಚ್ಚು ಪ್ರಕೃತಿ ವಿಕೋಪಕ್ಕೆ ಗುರಿಯಾದ ಯಾವುದೇ ಪ್ರದೇಶಗಳಿಗೆ ಬೇಟಿ ನೀಡದೆ ಸಂತ್ರಸ್ತ ಜನರಲ್ಲಿ ನಿರಾಶೆ ಮೂಡಿಸಿದ್ದಾರೆ. ತಾಲೂಕಿನಲ್ಲಿ ಅತೀ ಹೆಚ್ಚು ಪ್ರಕೃತಿ ವಿಕೋಪಕ್ಕೆ ಗುರಿಯಾದ ಮಲವಂತಿಗೆ, ಚಾರ್ಮಾಡಿ, ನೆರಿಯ ಗ್ರಾಮಗಳಿಗೆ ಬೇಟಿ ನೀಡದೆ ತಾರತಮ್ಯ ನೀತಿ ಅನುಸರಿಸಿರುವುದು ಖಂಡನೀಯ. ಈಗಾಗಲೇ ರಾಜ್ಯ ಸರ್ಕಾರ ಘೋಷಿಸಿದ ತುರ್ತು ಹತ್ತು ಸಾವಿರ ರೂ.ಗಳ ಪೈಕಿ ಕೇವಲ ರೂ.3800 ಮಾತ್ರ ಸಂತ್ರಸ್ತರಿಗೆ ದೊರಕಿದೆ. ಬಾಕಿ ಉಳಿದ ಹಣ ಸಂತ್ರಸ್ಥರ ಕೈ ಸೇರುತ್ತದೆಯೇ, ಇಲ್ಲವೋ ಎಂಬ ಸಂಶಯ ಎದುರಾಗಿದೆ. ಸಂತ್ರಸ್ತರಿಗೆ ಬರುತ್ತಿರುವ ನಾಗರೀಕ ನೆರವಿನ ಎಲ್ಲವೂ ಶಾಸಕರ ಮೂಲಕವೇ ಹೋಗಬೇಕು ಎಂದು ಅಲ್ಲೇ ಜಮಾ ಮಾಡಿಸಿಕೊಳ್ಳುತ್ತಲೂ ಇದ್ದಾರೆ!

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸ್ಪಂದನೆ

ಆಗಸ್ಟ್ 09, 2019 ರಂದು ಸಂಭವಿಸಿದ ಭೀಕರ ಪ್ರಕೃತಿ ವಿಕೋಪಕ್ಕೆ ಒಳಗಾದ ಪ್ರದೇಶಗಳಿಗೆ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಿರಂತರವಾಗಿ ಬೇಟಿ ನೀಡಿ ಸಮಗ್ರ ವರದಿಯನ್ನು ತಾಲೂಕು, ಜಿಲ್ಲಾಡಳಿತಕ್ಕೆ ನೀಡುತ್ತಿದೆ. ಬಾಂಜಾರು, ಕಾಟಾಜೆ, ಪರ್ಪಳ, ಅಂಬಟೆಮಲೆ, ಪರ್ಲಾಣಿ, ಅರಣೆಪಾದೆ, ಅನ್ನಾರು ಮಲೆಕುಡಿಯ ಕಾಲನಿ, ದೈಪಿತ್ತಿಲು, ಮಕ್ಕಿ, ಪೆರ್ಲೆ, ಎಲ್ಯರಕಂಡ, ಸಿಂಗನಾರು, ನಂದಿಕಾಡು, ಪೆರ್ನಡ್ಕ, ಅಡ್ಯದೋಡಿ, ಅರಸಿನಮಕ್ಕಿ, ಸೂರ್ಲಿ, ಪಾತಳಿಕೆ, ಪಂಜಲ ಪ್ರದೇಶಗಳಿಗೆ ಸಂಘಟನೆಯ ರಾಜ್ಯ ಸಮಿತಿ ಸದಸ್ಯ, ತಾಲೂಕು ಸಂಚಾಲಕ ಶೇಖರ್ ಎಲ್. ತಾಲೂಕು ಪ್ರಧಾನ ಕಾರ್ಯದರ್ಶಿ ಜಯಾನಂದ ಪಿಲಿಕಳ ಅವರ ನೇತೃತ್ವದ ತಂಡ ಬೇಟಿ ನೀಡಿ ಪರಿಸ್ಥಿತಿಯ ಅವಲೋಕನ ನಡೆಸಿ ತಾಲೂಕು ಹಾಗೂ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿತು. ಇದೇ ಸಂದರ್ಭದಲ್ಲಿ ಸಿ.ಪಿ.ಐ.ಎಂ. ಪಕ್ಷದ ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಶಿವಕುಮಾರ್ ಎಸ್. ಎಂ., ಹರಿದಾಸ್ ಎಸ್.ಎಂ., ವಕೀಲರಾದ ಸುಕನ್ಯಾ ಹೆಬ್ಬಾರ್ ಇವರ ತಂಡ ಕೂಡ ಭೇಟಿ ನೀಡಿ ಸಂತ್ರಸ್ಥರಿಗೆ ಸಾಂತ್ವನ ಹೇಳಿತು. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನಿರಂತರ ಮಾಹಿತಿ, ಮಾರ್ಗದರ್ಶನದಿಂದಾಗಿ ಅಧಿಕಾರಿಗಳೆ ತೆರಳದ ಪ್ರದೇಶಗಳ ಮಾಹಿತಿ ತಾಲೂಕು, ಜಿಲ್ಲಾಡಳಿತಕ್ಕೆ ಸಿಗುವಂತಾಗಿದೆ. ಈಗಾಗಲೇ ಈ ಎಲ್ಲಾ ಪ್ರದೇಶಗಳ ಸಂತ್ರಸ್ಥ ಜನರೊಂದಿಗೆ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಪದಾಧಿಕಾರಿಗಳು ನಿರಂತರ ಸಂಪರ್ಕದಲ್ಲಿದ್ದು, ಅಗತ್ಯ ಸಹಾಯ, ಸಹಕಾರ, ಮಾರ್ಗದರ್ಶನ ನೀಡುತ್ತಿದ್ದಾರೆ. ಇದು ಸಂತ್ರಸ್ಥರಲ್ಲಿ ಹೊಸ ಬರವಸೆ ಮೂಡಿಸಿದೆ.

ಬೆಂಗಳೂರಿನ ಪ್ರತಿಷ್ಠಿತ ಸೆನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ ಹಾಗೂ ಸೆನ್ಸೆರಾ ಇಂಜಿನಿರಿಂಗ್ ಲಿಮಿಟೆಡ್ ನೌಕರರ ಸಂಘ (ಸಿಐಟಿಯು) ಇದರ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕಿನ ಪ್ರವಾಹ ಪೀಡಿತರಿಗೆ 10 ಲಕ್ಷ ರೂಪಾಯಿ ವೆಚ್ಚದ ಅಗತ್ಯ ಸಾಮಾಗ್ರಿಗಳನ್ನು ಒದಗಿಸಿದರು.

ಕಂಪನಿ ಹಾಗೂ ನೌಕರರು ಜೊತೆಯಾಗಿ 25 ಕೆಜಿ ತೂಕದ 160 ಅಕ್ಕಿ ಚೀಲಗಳು, ಅಡುಗೆ ಎಣ್ಣೆ 150 ಪ್ಯಾಕೆಟ್, ಬ್ರೆಶ್ 500, ಪೇಸ್ಟ್ 500, ಸೋಪ್ 500+500, ಚಾಪೆ 160, ಮಹಿಳೆ, ಗಂಡಸರಿಗೆ ಬೇಕಾದ ಅಗತ್ಯವಾದ ಬಟ್ಟೆಗಳನ್ನು ನೀಡಿದರು. ಲಾಯಿಲ ಗ್ರಾಮದ ಗುರಿಂಗಾನ, ಮಲವಂತಿಗೆ ಗ್ರಾಮದ ಮಾಲೂರು, ಕೊಲ್ಲಿ, ಚಾರ್ಮಾಡಿ ಗ್ರಾಮದ ಅನ್ನಾರು ಮಲೆಕುಡಿಯ ಕಾಲನಿ, ಪರ್ಲಾನಿ, ಕಡಿರುದ್ಯಾವರ ಗ್ರಾಮದ ಹೇಡ್ಯ ಮೊದಲಾದ ಪ್ರದೇಶಗಳಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಸೆನ್ಸೆರಾ ನೌಕರರ ಸಂಘ (ಸಿಐಟಿಯು) ನ ಉಪಾಧ್ಯಕ್ಷರಾದ ಸುಧಾಕರ ಎ.ಸಿ, ಪ್ರಧಾನ ಕಾರ್ಯದರ್ಶಿ ಮುನಿನರಸಪ್ಪ, ಜಂಟಿ ಕಾರ್ಯದರ್ಶಿ ರಮೇಶ್ ವೈ, ಲಕ್ಷ್ಮಿ ನಾರಾಯಣ, ಕೋಶಾಧಿಕಾರಿ ಮಲ್ಲಿಕಾರ್ಜುನ ಎಸ್.ವಿ. ಜೊತೆಗೆ ಸಿಐಟಿಯು ಬೆಳ್ತಂಗಡಿ ತಾಲೂಕು ಅಧ್ಯಕ್ಷ ಶಿವಕುಮಾರ್ ಎಸ್.ಎಂ, ಕಾರ್ಯದರ್ಶಿ ವಸಂತ ನಡ, ಉಪಾಧ್ಯಕ್ಷ ಶೇಖರ್ ಎಲ್, ಎಕೆಜಿ ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘದ ಅಧ್ಯಕ್ಷ ಹರಿದಾಸ್ ಎಸ್.ಎಂ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕಾರ್ಯದರ್ಶಿ ಜಯಾನಂದ ಪಿಲಿಕಲ, ಮಾಲಿನಿ ಕೈಕಂಬ, ಜಯಶ್ರೀ ಪಿಲಿಕಲ ಉಪಸ್ಥಿತರಿದ್ದರು.

ಚಾರ್ಮಾಡಿ ಗ್ರಾಮದ ಅನ್ನಾರು ಮಲೆಕುಡಿಯ ಕಾಲನಿಯ ಏಕೈಕ ಸಂಪರ್ಕ ಸೇತುವೆ ಭೀಕರ ಮಳೆಗೆ ಕೊಚ್ಚಿ ಹೋಗಿದ್ದು, ಆ ಕಾಲನಿಯ ಆದಿವಾಸಿ ಮಲೆಕುಡಿಯ ಸಮುದಾಯದ ಜನರು ಕಳೆದ ಆಗಸ್ಟ್ 9 ರಿಂದ ಇಲ್ಲಿ ತನಕ ಪೇಟೆಯಿಂದ ಯಾವುದೇ ದಿನನಿತ್ಯ ಬಳಕೆಯ ಯಾವುದೇ ಅಗತ್ಯ ಸಾಮಾನುಗಳನ್ನು ಕೊಂಡೋಯ್ದಿಲ್ಲ. ಆ ಕಾಲನಿಗೆ ಸಂಪರ್ಕಿಸಲು ಯಾವುದೇ ಪರ್ಯಾಯ ರಸ್ತೆ ಇಲ್ಲ. ಇಲ್ಲಿಗೆ ತಾಲೂಕು ಆಡಳಿತ ಎರಡು ಬಾರಿ ಹೊರತುಪಡಿಸಿ ಯಾವುದೇ ಸಂಸ್ಥೆಗಳು ಸಹಾಯಹಸ್ತ ನೀಡಿಲ್ಲ, ಇಂದು ಸೆನ್ಸರಾ ಇಂಜಿಯರಿಂಗ್ ಲಿಮಿಟೆಡ್ ಹಾಗೂ ಸೆನ್ಸರಾ ಸೆನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ ನೌಕರರ ಸಂಘ (ಸಿಐಟಿಯು) ಇವರು ರೋಪ್ ಮೂಲಕ ಡ್ರಂ ಬಳಸಿಕೊಂಡು ಅಕ್ಕಿ, ಬಟ್ಟೆಗಳು ಸೇರಿದಂತೆ ಅಗತ್ಯ ಸಾಮಾನುಗಳನ್ನು ಸಾಗಿಸಿದರು. ಇತ್ತೀಚೆಗೆ ಎನ್‌ಡಿಆರ್‌ಎಫ್ ನವರು ರೋಪ್ ಅಳವಡಿಸಿದ್ದರು.

ಪ್ರಾಂತ ರೈತ ಸಂಘದ ಭೇಟಿ

ಬೆಳ್ತಂಗಡಿ ತಾಲುಕಿನ ನೆರೆ ಪೀಡಿತ ಪ್ರದೇಶಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ನಿಯೋಗ ಆಗಸ್ಟ್ 22 ರಂದು ಭೇಟಿ ನೀಡಿತು. ಪ್ರವಾಹ ಪೀಡಿತ ಗ್ರಾಮಗಳಾದ ಲಾಯಿಲ, ಮಲವಂತಿಗೆ, ಮಿತ್ತಬಾಗಿಲು, ಕಡಿರುದ್ಯಾವರ, ಚಾರ್ಮಾಡಿ ಗ್ರಾಮಗಳ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತ ರೈತರ ಹಾಗೂ ಮನೆ ಮಠ ಕಳೆದುಕೊಂಡವರ ಜೊತೆಗೆ ಮಾತನಾಡಿ ಮಾಹಿತಿಯನ್ನು ಸಂಗ್ರಹಿಸಿತು. ಸಂಜೆ ಈ ಸಂಬಂಧ ಬೆಳ್ತಂಗಡಿಯಲ್ಲಿ ತುರ್ತು ಪತ್ರಿಕಾ ಗೋಷ್ಠಿ ನಡೆಸಿ ನಿಯೋಗದಲ್ಲಿ ಕಂಡುಕೊಂಡ ವಿಚಾರವನ್ನು ತಿಳಿಸಲಾಯಿತು.

ನಿಯೋಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷ ಕೆ.ಕೃಷ್ಣಪ್ಪ ಸಾಲ್ಯಾನ್, ಪ್ರಧಾನ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಕೋಶಾಧಿಕಾರಿ ವಾಸುದೇವ್ ಉಚ್ಚಿಲ್, ಸಿಪಿಐಎಮ್ ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕ ಡಾ। ಕೃಷ್ಣಪ್ಪ ಕೊಂಚಾಡಿ, ಬೆಳ್ತಂಗಡಿ ತಾಲೂಕು ಸಿಪಿಐಎಮ್ ತಾಲೂಕು ಕಾರ್ಯದರ್ಶಿ ಶಿವಕುಮಾರ್ ಎಸ್.ಎಮ್, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಅಧ್ಯಕ್ಷ ವಸಂತ ನಡ, ಕಾರ್ಯದರ್ಶಿ ಜಯನಂದ ಪಿಲಿಕಳ, ಸಂಚಾಲಕ ಶೇಖರ್ ಎಲ್. ಉಪಸ್ಥಿತರಿದ್ದರು. ●

370ನೇ ವಿಧಿ ಮತ್ತು ಕಾಶ್ಮೀರದ ಆಮೂಲಾಗ್ರ ಭೂಸುಧಾರಣೆ

ಪುಟ 13 ರಿಂದ

ಅಸಮತೆಗಳನ್ನು ಹದ್ದುಬಸ್ತಿನಲ್ಲಿಡಲು ದೊಡ್ಡ ಕೊಡುಗೆ ನೀಡಿವೆ ಮತ್ತು ಅದಕ್ಕಿಂತಲೂ ಹೆಚ್ಚಾಗಿ, ಅಲ್ಲಿ ಗ್ರಾಮೀಣ ಬಡತನ ಹರಡುವುದನ್ನು ತಡೆ ಹಿಡಿದಿವೆ. ಯೋಜನಾ ಆಯೋಗವು ಪ್ರಕಟಿಸಿರುವ ಅಧಿಕೃತ ಅಂಕಿ ಅಂಶಗಳ ಪ್ರಕಾರ, 2009–10ರಲ್ಲಿ, ಇಡೀ ದೇಶದಲ್ಲೇ ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಜನಸಂಖ್ಯೆಯ ಅತಿ ಕಡಿಮೆ ಅನುಪಾತವಿರುವ ರಾಜ್ಯವೆಂದರೆ ಜಮ್ಮು ಮತ್ತು ಕಾಶ್ಮೀರ. ಇಡೀ ದೇಶದಲ್ಲಿ ಗ್ರಾಮೀಣ ಬಡತನದ ಅನುಪಾತ ಶೇ.33.8ರಷ್ಟಿದ್ದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಅದು ಕೇವಲ ಶೇ.8.1ರಷ್ಟಿದೆ. ಅದಕ್ಕಿಂತ ತುಸು ಕಡಿಮೆಯ ಶೇ.7.7 ಕೇಂದ್ರಾಡಳಿತದ ಡೆಲ್ಲಿಯಲ್ಲಿದೆ. ಆದರೆ, ಡೆಲ್ಲಿ ಒಂದು ಬೃಹತ್ ಮೆಟ್ರೊಪಾಲಿಟನ್ ನಗರವಾಗಿರುವುದರಿಂದ, ಅಲ್ಲಿನ ಗ್ರಾಮೀಣ ಪ್ರದೇಶಗಳನ್ನು ಮತ್ತು ಪರಿಸ್ಥಿತಿಯನ್ನು ಭಾರತದ ಯಾವುದೇ ರಾಜ್ಯದ ಗ್ರಾಮೀಣ ಪ್ರದೇಶಗಳೊಂದಿಗೆ ಹೋಲಿಸಲಾಗದು. ಹಾಗಾಗಿ, ಇಡೀ ದೇಶದಲ್ಲೇ ಅತಿ ಕಡಿಮೆ ಬಡತನದ ಅನುಪಾತ ಹೊಂದಿರುವ ದಾಖಲೆ ಜಮ್ಮು ಮತ್ತು ಕಾಶ್ಮೀರದ್ದು.

ಮೋದಿ ಮತ್ತು ಶಾ ಇವರ ತವರು ರಾಜ್ಯ ಗುಜರಾತಿನಲ್ಲಿ, ಅಧಿಕೃತ ಅಂಕಿ ಅಂಶಗಳ ಪ್ರಕಾರ, ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಜನಸಂಖ್ಯೆಯ ಅನುಪಾತವು ಶೇ.26.7 (ಜಮ್ಮು ಮತ್ತು ಕಾಶ್ಮೀರದಲ್ಲಿ ಶೇ.8.1) ಆಗಿರುವ ಅಂಶವು ಕುತೂಹಲಕರವಾಗಿದೆ. ಆದ್ದರಿಂದ, ತಮ್ಮ ರಾಜ್ಯದಲ್ಲಿ ಕುಂದು ಕೊರತೆಗಳೇ ಇಲ್ಲ ಎಂದು ಭಾವಿಸಿಕೊಂಡು ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಅಭಿವೃದ್ಧಿಗೆ ಅದರ ವಿಶೇಷ ಸ್ಥಾನಮಾನವೇ ಅಡ್ಡ ಬರುತ್ತಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಉಪದೇಶ ಹೇಳುವ ಮೊದಲು ಅಮಿತ್ ಶಾ ತಮ್ಮ ರಾಜ್ಯದ ಪರಿಸ್ಥಿತಿಯನ್ನು ತೆರೆದಿಟ್ಟಿರುವ ಅಂಕಿ ಅಂಶಗಳನ್ನು ಮನನ ಮಾಡಿಕೊಳ್ಳಬೇಕು. ಇವೆಲ್ಲಾ ಅಧಿಕೃತ ಅಂಕಿ ಅಂಶಗಳೇ!

ವಾಸ್ತವಿಕ ಬಡತನದ ಅನುಪಾತವನ್ನು ಅಧಿಕೃತ ಅಂಕಿ ಅಂಶಗಳು ಕೀಳಂದಾಜಿಸುತ್ತವೆ. ಬಡತನವನ್ನು ಅಳೆಯುವ ದಿನಕ್ಕೆ 2200 ಕ್ಯಾಲೊರಿಗಿಂತ ಕಡಿಮೆ ಆಹಾರ ಸೇವಿಸುವ ಪ್ರತಿ ಗ್ರಾಮೀಣ ವ್ಯಕ್ತಿಯನ್ನು ಬಡವ ಎಂದು ಪರಿಗಣಿಸಸುವ ಮಾನದಂಡದ ಮೂಲಕ ನೇರವಾಗಿ ಅಂದಾಜು ಮಾಡಿದರೂ, ಸಹ ತುಲಾನಾತ್ಮಕ ದೃಷ್ಟಿಯಲ್ಲಿ, ರಾಜ್ಯಗಳ ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಜನಸಂಖ್ಯೆಯ ಅನುಪಾತದಲ್ಲಿ ವ್ಯತ್ಯಾಸವಿರುವುದಿಲ್ಲ. ಮತ್ತು, ದೇಶದಲ್ಲೇ ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಜನಸಂಖ್ಯೆಯ ಅತಿ ಕಡಿಮೆ ಅನುಪಾತವಿರುವ ರಾಜ್ಯವಾಗಿ ಜಮ್ಮು ಮತ್ತು ಕಾಶ್ಮೀರ ಉಳಿಯುತ್ತದೆ.

ಬಡತನದ ಅಂದಾಜುಗಳು ಎಷ್ಟು ದಿಟವೊ, ಸಾಮಾಜಿಕ ಪರಿಸ್ಥಿತಿಯನ್ನು ಅಳೆಯುವ ಇತರ ಹಲವು ಸೂಚಕಗಳೂ ಅಷ್ಟೇ ದಿಟವೆಂದು ಭಾವಿಸಿ ನೋಡಿದರೂ ಸಹ, ಜಮ್ಮು ಮತ್ತು ಕಾಶ್ಮೀರದ ದಾಖಲೆ ಅತ್ಯುತ್ತಮವಾಗಿದೆ. ಈ ದಾಖಲೆಯ ಸಾಧನೆಗೆ ಭೂಸುಧಾರಣೆಗಳ ಕೊಡುಗೆ ಅಪಾರವೇ. ಇವೆಲ್ಲವನ್ನೂ ಸಾಧ್ಯವಾಗಿಸಿದ ಅಂಶವೆಂದರೆ, ಭಾರತ ಸಂವಿಧಾನದ 370ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರ ಹೊಂದಿದ್ದ ಸ್ವಾಯತ್ತತೆ.

ಜಮ್ಮು ಮತ್ತು ಕಾಶ್ಮೀರದ ಬಗ್ಗೆ ನಾವು ಮರೆಯಬಾರದ ಕೆಲವು ಸಂಗತಿಗಳಿವೆ: ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ, ಬಡತನ ಯಾವತ್ತೂ ಜಮ್ಮು ಮತ್ತು ಕಾಶ್ಮೀರವನ್ನು ಪೀಡಿಸಿರಲಿಲ್ಲ; ಇಲ್ಲಿ ತಿಳಿಸಿರುವ ಹೋಲಿಕೆಗೆ ಸಂಬಂಧಿಸಿದ ಅಂಶಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಮೊದಲೇ ಇದ್ದ ಚಾರಿತ್ರಿಕ ವಾಸ್ತವವನ್ನು ಕಟ್ಟಿಕೊಡುತ್ತವೆ, ಅಷ್ಟೇ; ಈ ವಾಸ್ತವಗಳಿಗೂ ಮತ್ತು ಭೂಸುಧಾರಣೆಗಳಿಗಾಗಲಿ ಅಥವಾ ಸಂವಿಧಾನದ 370ನೇ ವಿಧಿಯೊಂದಿಗಾಗಲಿ ಯಾವುದೇ ಸಂಬಂಧವಿಲ್ಲ ಎಂಬುದಾಗಿಯೂ ಕೆಲವರು ಯೋಚಿಸಬಹುದು. ಅಂತಹ ಅನುಮಾನ ಸ್ವಭಾವದವರಿಗಾಗಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕಾಗುತ್ತದೆ: ಜಮ್ಮು ಮತ್ತು ಕಾಶ್ಮೀರವು ಒಂದು ಅತಿ ಕ್ರೂರ ದಬ್ಬಾಳಿಕೆ ನಡೆಸುವ ಪಾಳೆಗಾರಿ ಆಳ್ವಿಕೆಗೆ ಒಳಪಟ್ಟಿತ್ತು (ಬೇರೆ ಬೇರೆ ಪಾಳೆಗಾರಿ ಆಳ್ವಿಕೆಗಳೂ ಹಾಗೆಯೇ ಇದ್ದವು). ಈ ಪಾಳೆಗಾರಿ ಆಡಳಿತವು ರೈತಾಪಿಯನ್ನು (ಬಹುತೇಕ ಮುಸ್ಲಿಮರು) ಅಜ್ಞಾನ ಮತ್ತು ಅತಿ ದೀನಾವಸ್ಥೆಯ ಬಡತನದಲ್ಲಿಟ್ಟಿತ್ತು



ಎಂಬುದನ್ನು ಕೆಲವು ಸ್ಥಳೀಯ ಸಂಪ್ರದಾಯಗಳು, ನಂಬಿಕೆಗಳು ಮತ್ತು ಸಂಗತಿಗಳು ತಿಳಿಸುತ್ತವೆ. ತೆರಿಗೆ ವಸೂಲು ಮಾಡುವ ಮಹಾರಾಜನ ಸಿಬ್ಬಂದಿ ಅದೆಷ್ಟು ನಿಷ್ಕರುಣಿಗಳು ಎಂದರೆ ಅನ್ಯಾಯವಾಗಿ ವಿಧಿಸಿದ ಅತಿಯಾದ ತೆರಿಗೆಯನ್ನು ಕೊಡಲು ತಮಗೆ ಸಾಧ್ಯವಾಗುತ್ತಿಲ್ಲ ಎಂದು ರೈತರು ಹೇಳಿಕೊಂಡರೆ, ತೆರಿಗೆ ವಸೂಲಿಗಾರರು ರೈತರ ಬಾಯಿ ತೆರೆಸಿ ಅವರ ಹಲ್ಲಿಗೆ ಅನ್ನದ ಅಗುಳು ಅಂಟಿಕೊಂಡಿದೆಯೇ ಇಲ್ಲವೇ ಎಂಬುದನ್ನು ನೋಡಿ ಖಚಿತಪಡಿಸಿಕೊಳ್ಳುತ್ತಿದ್ದರು. ಸಿಬ್ಬಂದಿಯ ತರ್ಕ ಹೀಗಿತ್ತು: ರೈತರಿಗೆ ಅನ್ನ ತಿನ್ನುವಷ್ಟು ಅನುಕೂಲವಿದ್ದರೆ ಅವರಿಗೆ ತೆರಿಗೆ ಕೊಡುವಷ್ಟು ಬಲ ಇದ್ದೇ ಇರುತ್ತದೆ.

ಅಂತಹ ಒಂದು ಪಾಳೆಗಾರಿ ಅರ್ಥವ್ಯವಸ್ಥೆಯನ್ನು ದೇಶದಲ್ಲೇ ಅತಿ ಕಡಿಮೆ ಬಡತನದ ಅನುಪಾತ ಇರುವ ಮಟ್ಟಕ್ಕೆ ಮಾರ್ಪಡಿಸಿದ್ದು ಒಂದು ಸಾಧನೆಯೇ. ಈ ಸಾಧನೆ ಅಮಿತ್ ಶಾ ಗೆ ಮೆಚ್ಚುಗೆಯಾಗಲಿಕ್ಕಿಲ್ಲ. ಆದರೆ, ಯಾವುದೇ ಮಾನದಂಡದಿಂದ ಅಳೆದರೂ ಅದೊಂದು ಗಣನೀಯ ಸಾಧನೆಯೇ. ಮತ್ತು, ಆ ಸಾಧನೆಯನ್ನು ಆಗು ಮಾಡಿದ 370ನೇ ವಿಧಿಯ ಪಾತ್ರವೂ ಗಣನೀಯವೇ. ●

ಇಟಲಿಯಲ್ಲಿ ರಾಜಕೀಯ ಅಸ್ಥಿರತೆ

ಆಗಸ್ಟ್ 20 ರಂದು ಪ್ರಧಾನಿ ಗೈಸೆಪೆ ಕಾಂಟೆ ಯವರು ರಾಜೀನಾಮೆಯನ್ನು ಘೋಷಿಸಿದ ನಂತರ, ಇಟಲಿಯಲ್ಲಿ ಜೂನ್ 1, 2018 ರಿಂದ ಅಧಿಕಾರದಲ್ಲಿದ್ದ ಸಮ್ಮಿಶ್ರ ಸರ್ಕಾರವು, ಪತನ ಗೊಂಡು ರಾಜಕೀಯ ಬಿಕ್ಕಟ್ಟು ತಲೆದೋರಿದೆ. ಆಗಸ್ಟ್ 13 ರಂದು ಸೆನೆಟ್ ನಲ್ಲಿ ಬಲಪಂಥೀಯ ಲೀಗ್ ಪಕ್ಷದಿಂದ, ಅವರ ಉಪ ಪ್ರಧಾನ ಮಂತ್ರಿ ಮ್ಯಾಟಿಯೊ ಸಾಲ್ವಿನಿ ಅವರು ಅವಿಶ್ವಾಸ ನಿರ್ಣಯ ಮಂಡಿಸಿದ ನಂತರ, ಫೈವ್ ಸ್ಟಾರ್ ಚಳುವಳಿಯ ಬೆಂಬಲಿತ ಸ್ವತಂತ್ರ ರಾಜಕಾರಣಿ ಪ್ರಧಾನ ಕಾಂಟೆಯವರು, ಸಂಸತ್ತಿನಲ್ಲಿ ತಮ್ಮ ರಾಜೀನಾಮೆಯನ್ನು ಘೋಷಿಸಿದರು.

ಫೈವ್ ಸ್ಟಾರ್ ಮೂವ್ ಮೆಂಟ್ ನ ಹಲವು ಸದಸ್ಯರು ಮತ್ತು ಪ್ರತಿ ಪಕ್ಷದಲ್ಲಿರುವ ಡೆಮಾಕ್ರಟಿಕ್ ಪಕ್ಷದ ಬಹು ಪಾಲು ಸೆನೆಟರ್ ಗಳು ಈ ಅವಿಶ್ವಾಸ ನಿರ್ಣಯ ವನ್ನು ವಿರೋಧಿಸಿ ಚರ್ಚೆಗೆ ಕರೆ ನೀಡಿದ್ದರು. ಆದಾಗ್ಯೂ, ಪ್ರಧಾನಿ ಕಾಂಟೆ ತಮ್ಮ ರಾಜೀನಾಮೆಯನ್ನು ಘೋಷಿಸಿದರು. ತಮ್ಮ ಪಕ್ಷದವರೇ ಒತ್ತಡ ಹೇರಿದ್ದರಿಂದ, ಅವಿಶ್ವಾಸ ನಿರ್ಣಯವನ್ನು ಸಾಲ್ವಿನಿ ಯವರು ಹಿಂಪಡೆದುಕೊಂಡರು. ಆದರೆ ಮುರಿದು ಬಿದ್ದ ಒಕ್ಕೂಟವನ್ನು ಸರಿಪಡಿಸಲು ಸಾಧ್ಯವಾಗಿಲ್ಲ.

ಈ ರಾಜಕೀಯ ಅಸ್ಥಿರತೆಗೆ ಮ್ಯಾಟಿಯೊ ಸಾಲ್ವಿನಿ ಅವರನ್ನೇ ದೂಷಿಸಲಾಗಿದೆ. ಯುರೋಪಿಯನ್ ಪಾರ್ಲಿಮೆಂಟ್ ಚುನಾವಣೆಗಳಲ್ಲಿ, ಬಲಪಂಥೀಯ ಲೀಗ್ ಪಕ್ಷದ ಉತ್ತಮ ಪ್ರದರ್ಶನ ಇದಕ್ಕೆ ಕಾರಣ ಎನ್ನಲಾಗಿದೆ. ಮುಂದಿನ ಚುನಾವಣಾ ಸಮೀಕ್ಷೆಗಳಲ್ಲೂ, ಬಲಪಂಥೀಯ ಲೀಗ್ ಪಕ್ಷವು ಇತರೆ ಎಲ್ಲಾ ಪಕ್ಷಗಳಿಗಿಂತ ಮುಂದಿದೆ. ಆದ್ದರಿಂದ ಸಾಲ್ವಿನಿ ಹೊಸ ಚುನಾವಣೆಗಳಿಗಾಗಿ ಉತ್ಸುಕನಾಗಿದ್ದಾರೆ. ಸಾಲ್ವಿನಿ ಗೆ ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ವೈಯಕ್ತಿಕ ಹಿತಾಸಕ್ತಿಗಳಿಗೆ ಆದ್ಯತೆಯದ್ದು ಎಂದು ಪ್ರಧಾನಿ ಕಾಂಟೆ ದೂಷಿಸಿದ್ದಾರೆ.

ಸಮ್ಮಿಶ್ರ ಸರ್ಕಾರ ದಲ್ಲಿ, ಕಿರಿಯ ಪಕ್ಷವಾಗಿದ್ದ ಬಲಪಂಥೀಯ ಲೀಗ್, ಇತ್ತೀಚೆಗೆ ನಡೆದ ಯುರೋಪಿಯನ್ ಪಾರ್ಲಿಮೆಂಟ್ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆದ್ದುಕೊಂಡಿತು. ಮತ್ತೊಂದೆಡೆ, ಫೈವ್ ಸ್ಟಾರ್ ಮೂವ್ ಮೆಂಟ್ ಗೆ, ಕೇವಲ 14 ಸ್ಥಾನಗಳು ದೊರೆತಿವೆ. ಜನಾಂಗೀಯ, ವಲಸೆ–ವಿರೋಧಿ ಮತ್ತು ಹೈಪರ್– ರಾಷ್ಟ್ರೀಯವಾದದ ಮೂಲಕ, ದೇಶದಲ್ಲಿ "ರಾಜಕೀಯ ಧ್ರುವೀಕರಣ' ಮಾಡುವ ಅಭಿಯಾನದಲ್ಲಿ, ಸಾಲ್ವಿನಿ ಮುಂಚೂಣಿಯಲ್ಲಿ ಇದ್ದಾರೆ.



ಪ್ರಧಾನಿ ಕಾಂಟೆ ತಮ್ಮ ರಾಜೀನಾಮೆಯನ್ನು ಘೋಷಿಸಿದ ನಂತರ, ಇಟಾಲಿಯನ್ ಅಧ್ಯಕ್ಷ ಸೆರ್ಗಿಯೋ ಮ್ಯಾಟರೆಲ್ಲಾ ಅವರು, ಹೊಸ ಚುನಾಣೆಯನ್ನು ನಡೆಸಬೇಕೆ ಅಥವಾ ವಿವಿಧ ಪಕ್ಷಗಳಿಗೆ ಹೊಸ ಒಕ್ಕೂಟ ಸರಕಾರ ರಚಿಸಲು ಅವಕಾಶ ನೀಡಬೇಕೇ? ಎಂಬ ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ. ಡೆಮೊಕ್ರಾಟಿಕ್ ಪಕ್ಷ (ಪಿಡಿ) ಬೆಂಬಲದೊಂದಿಗೆ, ಫೈವ್ ಸ್ಟಾರ್ ಪಕ್ಷದ ಸರ್ಕಾರ ಮುಂದುವರಿಸುವ ದೂರದ ಸಾಧ್ಯತೆ ಇನ್ನೂ ಇದೆ. ಇಟಲಿಯ ವಲಸೆ–ವಿರೋಧಿ ಎಲ್.ಜಿ.ಬಿ.ಟಿ–ವಿರೋಧಿ ಬ್ರದರ್ಸ್ ಮತ್ತು ಸಿಲ್ವಿಯೋ ಬೆರ್ಲೂಸ್ಕೋನಿಯಾ ಅವರ ಪೋರ್ಜಾ ಇಟಾಲಿಯ ಮತ್ತು ಲೀಗ್ ಪಕ್ಷದ ಒಕ್ಕೂಟದ ಸಾಧ್ಯತೆ ಬಗ್ಗೆಯೂ ಚರ್ಚಿಸಲಾಗುತ್ತಿದೆ. ಈಗಿನ ಒಕ್ಕೂಟದಲ್ಲೇ ಮುಂದುವರಿಯಲು ಸಾಲ್ವಿನಿಯ ಪಕ್ಷದ ಶಾಸಕರು ಒತ್ತಡ ಹೇರುತ್ತಿದ್ದಾರೆ ಎನ್ನಲಾಗುತ್ತಿದೆ.

ಈಗಿನಂತೆ, 630 ಸೀಟುಗಳ ಚೇಂಬರ್ ಆಫ್ ಡೆಪ್ಯೂಟೀಸ್ ಮತ್ತು 315 ಸೀಟುಗಳ ಸೆನೆಟ್ ಅನ್ನು ಒಳಗೊಂಡಿರುವ ಇಟಾಲಿಯನ್ ಸಂಸತ್ತಿನಲ್ಲಿ ಫೈವ್ ಸ್ಟಾರ್ ಮೂವ್ ಮೆಂಟ್, 216 ಡೆಪ್ಯೂಟೀಸ್ ಮತ್ತು 106 ಸೆನೆಟ್ ಸದಸ್ಯರನ್ನು ಹೊಂದಿದ್ದರೆ, ಲೀಗ್ 123 ಡೆಪ್ಯೂಟೀಸ್ ಮತ್ತು 58 ಸೆನೆಟ್ ರನ್ನು ಹೊಂದಿದೆ. ಅದೇ ರೀತಿಯಲ್ಲಿ ಪಿಡಿ 112 ಡೆಪ್ಯೂಟೀಸ್ ಮತ್ತು 53 ಸೆನೆಟ್ ರನ್ನು ಮತ್ತು ಪೋರ್ಜಾ ಇಟಾಲಿಯಾ 104 ಡೆಪ್ಯೂಟೀಸ್ ಮತ್ತು 61 ಸೆನೆಟರ್ ರನ್ನು ಹೊಂದಿವೆ.

2018 ರ ಮಾರ್ಚ್ ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ನಂತರ, ಸುಮಾರು 88 ದಿನಗಳ ದೀರ್ಘಾವಧಿಯ ಸಮಾಲೋಚನೆಯ ನಂತರವೇ ಕಾಂಟೆ ಯವರು, ಪ್ರಧಾನ ಮಂತ್ರಿಯಾಗಿ, ಫೈವ್ ಸ್ಟಾರ್ ಮೂವ್‌ಮೆಂಟ್ ನ ಲುಯಿಗಿ ಡಿ ಮಾಯೊ ಮತ್ತು ಲೀಗ್ ನ ಮ್ಯಾಟಿಯೊ ಸಾಲ್ವಿನಿ ಅವರನ್ನು ಉಪ–ಪ್ರಧಾನ ಮಂತ್ರಿಗಳಾಗಿ, ಸಮ್ಮಿಶ್ರ ಸರಕಾರ ರಚನೆ ಮಾಡಲಾಯಿತು. ಮೊದಲಿನಿಂದಲೂ, ಈ ಸಮ್ಮಿಶ್ರ ಸರಕಾರವು ಎರಡು ಪಕ್ಷಗಳ ನಡುವಿನ ಆಳವಾದ ಭಿನ್ನಾಭಿಪ್ರಾಯಗಳಿಂದ ಗುರುತಿಸಿಲ್ಪಟ್ಟಿತ್ತು. ಈ ನಡುವೆ, ಫೈವ್ ಸ್ಟಾರ್ ಮೂವ್ ಮೆಂಟ್ ನ ಬೆಂಬಲಿಗರು ಆ ಪಕ್ಷದಿಂದ ಭ್ರಮನಿರಸನ ಗೊಂಡಿದ್ದಾರೆ. ಆದರೆ ಲೀಗ್ ತನ್ನ ಬೆಂಬಲದ ನೆಲೆಯನ್ನು ಕ್ರೋಡಿಕರಿಸಿಕೊಂಡಿತು. ಅದರ ಫಲವಾಗಿ ಸಾಲ್ವಿನಿ ರಾಜಕೀಯ ಅಸ್ಥಿರತೆ ಉಂಟು ಮಾಡಿ, ಹೊಸ ಚುನಾವಣೆಗೆ ಉತ್ಸಾಹ ತೋರಿದ್ದಾರೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಗ್ವಾಟೆಮಾಲಾ: ಅಧ್ಯಕ್ಷ ಅಲೆಜಾಂಡ್ರೊ ಮುಂದಿರುವ ಸವಾಲುಗಳು

ಆಗಸ್ಟ್ 11 ರಂದು ಗ್ವಾಟೆಮಾಲಾ ತನ್ನ ಅಧ್ಯಕ್ಷೀಯ ಚುನಾವಣೆಯ ಎರಡನೇ ಸುತ್ತಿನ ಮತದಾನದ ಪ್ರಕ್ರಿಯೆಯನ್ನು ಮುಗಿಸಿತು. ಮೊದಲ ಸುತ್ತಿನ ಮತದಾನವು ಕಳೆದ ಜೂನ್ 16 ರಂದು ನಡೆದಿತ್ತು. ಅತಿ ದೊಡ್ಡ ಪಕ್ಷಗಳ ಅಭ್ಯರ್ಥಿಗಳಾದ ವ್ಯಾಮೋಸ್ ("ಲೆಟ್ಸ್ ಗೋ") ಪಕ್ಷದ ಬಲಪಂಥೀಯ ಡಾ.ಅಲೆಜಾಂಡ್ರೊ ಜಿಯೆಮ್ಮೆಟ್ಟೆ ಹಾಗೂ ಸಾಮಾಜಿಕ–ಪ್ರಜಾಪ್ರಭುತ್ವದ ಧೋರಣೆ ಇರುವ ನೇಶನಲ್ ಯೂನಿಯನ್ ಆಫ್ ಹೋಪ್ ("ಯು.ಎನ್.ಇ.") ಪಕ್ಷದ ಪ್ರಥಮ ಮಹಿಳೆ ಸಾಂಡ್ರ ಟೊರೆಸ್ ರವರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತು. ಎರಡನೇ ಸುತ್ತಿನ ಮತದಾನದ ನಂತರ ಹೊರ ಬಿದ್ದ ಫಲಿತಾಂಶ ದಲ್ಲಿ ಬಲಪಂಥೀಯ ವ್ಯಾಮೋಸ್ ಪಕ್ಷದ ಡಾ.ಅಲೆಜಾಂಡ್ರೊ ಜಿಯೆಮ್ಮೆಟ್ಟೆ ಯವರು ಶೇ.57.95 ಮತಗಳನ್ನು ಪಡೆದು ಸ್ಪಷ್ಟ ವಿಜಯ ಸಾಧಿಸಿದ್ದಾರೆ. ಮಾಜಿ ಪ್ರಥಮ ಮಹಿಳೆ ಸಾಂಡ್ರಾ ಟೊರೆಸ್ ಶೇ.42.05 ಮತ ಪಡೆದು ಸೋತಿದ್ದಾರೆ.

ಗ್ವಾಟೆಮಾಲಾ, ಒಟ್ಟು ಸುಮಾರು 1 ಕೋಟಿ, 72 ಲಕ್ಷ ಜನ ಸಂಖ್ಯೆಯನ್ನು ಹೊಂದಿದೆ. ಗ್ವಾಟೆಮಾಲಾ ಹಲವಾರು ವರ್ಷಗಳಿಂದ ಭ್ರಷ್ಟಾಚಾರ–ವಿರೋಧಿ ಪ್ರತಿಭಟನೆಗಳ ತಾಣವಾಗಿದೆ. ಈ ಪ್ರತಿಭಟನೆಗಳ ಪ್ರಭಾವವು 2015 ರ ಹಿಂದೆ ಅಧ್ಯಕ್ಷರಾಗಿದ್ದ ಬಲಪಂಥೀಯ ಜನರಲ್ ಅಧ್ಯಕ್ಷ ಒಟ್ಟೊ ಪೆರೆಜ್ ಮೊಲಿನಾ ರವರನ್ನು ಭ್ರಷ್ಟಾಚಾರ ಆರೋಪದ ಮೇಲೆ ರಾಜೀನಾಮೆ ಪಡೆದು, ಜೈಲಿಗೆ ತಳ್ಳಲು ನೆರವಾಯಿತು.

ಆನಂತರದ 2015 ರ ಚುನಾವಣೆಯಲ್ಲಿ ವಿಜೇತರಾದ ಟಿವಿ ಹಾಸ್ಯ ನಟರಾಗಿದ್ದ ಹಾಲಿ ಅಧ್ಯಕ್ಷ ಜಿಮ್ಮಿ ಮೊರೇಲ್ಸ್ ಭ್ರಷ್ಟಾಚಾರವಿಲ್ಲದ ಅಥವಾ ಸ್ವಚ್ಛವಾದ ಆಡಳಿತ ನೀಡುವ ಭರವಸೆಯ ಪ್ರಚಾರ ಮಾಡಿ ಗೆಲುವು ಸಾಧಿಸಿದ್ದರು. ಇವರನ್ನು ಚುನಾವಣೆಯಲ್ಲಿ ಬೆಂಬಲಿಸಿದವರಲ್ಲಿ ಪ್ರಮುಖರು ಮಾಜಿ ಮಿಲಿಟರಿ ಅಧಿಕಾರಿಗಳು. ಏಕೆಂದರೆ, ಮೊರೇಲ್ಸ್ ಅವರ ಸ್ವಚ ಇಮೇಜ್ ಬಳಸಿ ತಮ್ಮ ಭ್ರಷ್ಟಾಚಾರವನ್ನು ಮುಚ್ಚಿ ಹಾಕಬಹುದು ಎಂಬ ನಿರ್ಧಾರಕ್ಕೆ ಅವರು ಬಂದಿದ್ದರು. ಮೊರೆಲ್ಸ್ ಅಧಿಕಾರಕ್ಕೆ ಬಂದ ಮೇಲೆ ತಮ್ಮ 'ಕೃತಜ್ಞತೆ ತೋರಿಸುವ' ಭಾಗವಾಗಿ, ಈ ಮಿಲಿಟರಿ ಅಧಿಕಾರಿಗಳ ವಿರುದ್ಧ ಅಂತರರಾಷ್ಟ್ರೀಯ ಆಯೋಗ ಅಥವಾ ಸಿಐಸಿಐಜಿ (ವಿಶ್ವಸಂಸ್ಥೆಯ ವಿಶೇಷ ಪ್ರಾಯೋಜಿತ ಸಂಸ್ಥೆ) ಗ್ವಾಟೆಮಾಲದಲ್ಲಿ, ನಡೆಸಿದ ಭ್ರಷ್ಟಾಚಾರದ ತನಿಖೆಯನ್ನು ಕೊನೆಗೊಳಿಸಿದರು. ಸಿಐಸಿಐಜಿ, ಸ್ವತಃ ಮೊರೆಲ್ಸ್ ಮತ್ತು ಇವರ ಕುಟುಂಬದ ಸದಸ್ಯರ ಮೇಲೆಯೂ ಭ್ರಷ್ಟಾಚಾರದ ಆರೋಪದ ತನಿಖೆಯನ್ನು ನಡೆಸಿತು. ಗ್ವಾಟೆಮಾಲ ದಲ್ಲಿ ಯಾವುದೇ ಅಧ್ಯಕ್ಷರು ಮರು ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಿಲ್ಲ ಮತ್ತು ಮತ್ತು ಮೊರೆಲ್ಸ್ ಅವರು ಅಧಿಕಾರದಿಂದ ಹೊರಬಂದ ನಂತರ, ಅಮೆರಿಕ ದಲ್ಲಿ ಗಂಭೀರ ಭ್ರಷ್ಟಾಚಾರ ಆರೋಪದ ಮೇಲೆ ಕಾನೂನು ಕ್ರಮ ಎದುರಿಸಬೇಕಾದ ಅಪಾಯವನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಜೂನ್ 16 ರ ಮೊದಲ ಸುತ್ತಿನಲ್ಲಿ ಮೊರೆಲ್ಸ್ ರ ನ್ಯಾಷನಲ್ ಕನ್ವರ್ಜೆನ್ಸ್ ಫ್ರಂಟ್ ಅಭ್ಯರ್ಥಿ ಎಸ್ಟುವಾರ್ಡೊ ಗಾಲ್ಡೆಮೆಜ್ ಹಿಂದೆ ಬಿದ್ದರು ಮತ್ತು ಶಾಸಕಾಂಗ ಚುನಾವಣೆಯಲ್ಲಿ ಇವರ ನ್ಯಾಷನಲ್ ಕನ್ವರ್ಜೆನ್ಸ್ ಬಹುತೇಕ ನಾಶವಾಯಿತು.



ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತಿನಲ್ಲಿ ಯು.ಎನ್.ಇ. ಪಕ್ಷದ ಸಾಂದ್ರಾ ಟೊರೆಸ್ ಶೇ. 25 ಮತಗಳಿಸಿ ಮೊದಲ ಸ್ಥಾನದಲ್ಲಿದ್ದರು. ಎರಡನೇ ಸುತ್ತಿನಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಅಲೆಜಾಂಡ್ರೊ ಶೆ. 14 ಮತ ಗಳಿಸಿ ಎರಡನೇ ಸ್ಥಾನದಲ್ಲಿದ್ದರು. ಚುನಾವಣೆ ಆರಂಭವಾದಾಗ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ನಿಜವಾಗಿಯೂ ಸಕ್ರಿಯವಾಗಿದ್ದ ಥೆಲ್ಮಾ ಅಲ್ದಾನಾ ಮುಂದಿದ್ದರು. ಅವರ ವಿರುದ್ಧ ಪಿತೂರಿ ನಡೆಸಿ ಅವರು ಸ್ಪರ್ಧೆ ಮಾಡದಂತೆ ನೋಡಿಕೊಳ್ಳಲಾಯಿತು. ಜನತಾ ವಿಮೋಚನಾ ಚಳುವಳಿ ಅಭ್ಯರ್ಥಿ ಮಾಯಾ ಬುಡಕಟ್ಟಿನ ಎಡ ಪಂಥೀಯ ಥೆಲ್ಮ ಕ್ಯಾಬ್ರೆರಾ ರವರು, ಜೂನ್ 16 ರ ಮೊದಲ ಸುತ್ತಿನಲ್ಲಿ ನಾಲ್ಕನೇ ಸ್ಥಾನದಲ್ಲಿದ್ದು, ಶೇ.10.37 ರಷ್ಟು ಮತಗಳನ್ನು ಪಡೆದಿದ್ದರು. ಇದೊಂದು ಉತ್ತಮ ಬೆಳವಣಿಗೆ ಎಂದು ಪರಿಗಣಿಸಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ, ಎರಡನೇ ಸುತ್ತಿನ ಮತದಾನದ ಪ್ರಮಾಣವು ತೀರ ಕಡಿಮೆ ಅಂದರೆ, ಶೇ.40.39 ಆಗಿತ್ತು. ಗ್ವಾಟೆಮಾಲಾ ದಲ್ಲಿ ಮತದಾನ ಕಡ್ಡಾಯವಾಗಿದೆ. ಆದರೂ ಅದನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿಲ್ಲ. ನಗರಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ತೀಕ್ಷ್ಣವಾದ ವ್ಯತ್ಯಾಸ ವನ್ನು ಕಾಣಬಹುದು. ಗ್ವಾಟೆಮಾಲದಲ್ಲಿ ಶೇ.60 ರಷ್ಟು ಬುಡಕಟ್ಟಿನ ಜನರಿದ್ದಾರೆ. 1954 ರಲ್ಲಿ ಸಿಐಎ ಯ ನೆರವಿನಿಂದ, ಎಡಪಂಥೀಯ ಒಲವಿನ ಅಧ್ಯಕ್ಷ ಜಾಕೋಬೊ ಅರ್ಬೆನ್ಜ್ ಅವರನ್ನು ಪದಚ್ಯುತಗೊಳಿಸಿದ ಮಿಲಿಟರಿ ಸರ್ವಾಧಿಕಾರದ ಅವಧಿಯಲ್ಲಿ ಹೆಚ್ಚಾಗಿ ಗ್ರಾಮೀಣ ಸ್ಥಳೀಯ ಮಾಯಾ ಜನಸಮುದಾಯ ಬಹಳಾಗಿ ಕ್ರೂರ ದಮನಕ್ಕೊಳಗಾಗಿದ್ದರು. ಇದನ್ನು "ಗ್ವಾಟೆಮಾಲನ್ ನರಮೇಧ" ಎಂದು ಕರೆಯಲಾಗುತ್ತದೆ. ಇದು ಉತ್ಪ್ರೇಕ್ಷೆಯಲ್ಲ. ಸಶಸ್ತ್ರ ಪಡೆ ಮತ್ತು ಡೆತ್ ಸ್ಕ್ವಾಡ್ ಗಳಿಂದ ಸುಮಾರು 2 ಲಕ್ಷಕ್ಕೂ ಹೆಚ್ಚು ಜನರನ್ನು ಕೊಲ್ಲಲಾಗಿತ್ತು. ಅವರಲ್ಲಿ, ಮಾಯಾ ಸಮುದಾಯದ ಪುರುಷರು, ಮಹಿಳೆಯರು ಮತ್ತು ಮಕ್ಕಳು ಹೆಚ್ಚಾಗಿದ್ದರು. ಸಮಕಾಲೀನ ರಾಜಕಾರಣಿಗಳಿಗೂ ಈ ನರಮೇಧ ವನ್ನು ನಡೆಸಿದ್ದವರ ನಡುವೆ ನೇರ ಸಂಬಂಧವಿದೆ. ಇದರಲ್ಲಿ ಪೆರಿಜ್ ಮೊಲಿನ ಮತ್ತು ಮೊರೆಲ್ಸ್ ಕೂಡ ಸೇರಿದ್ದಾರೆ.

ಇದೀಗ ವಿಜಯಿಯಾದ ಡಾ. ಅಲೆಜಾಂಡ್ರೊ ಜಿಯೆಮ್ಮೆಟ್ಟೆ ಯವರ ಮೇಲೂ ಮಾನವ ಹಕ್ಕುಗಳ ಉಲ್ಲಂಘನೆ ಯ ಆರೋಪವೂ ಇದೆ. 2006 ರಲ್ಲಿ, ಇವರು ಗ್ವಾಟೆಮಾಲಾದ ಜೈಲು ವ್ಯವಸ್ಥೆ ಯ ಮುಖ್ಯಸ್ಥರಾಗಿದ್ದರು. ಆಗ ಇವರು ಗ್ವಾಟೆಮಾಲ ನಗರದ ಬಳಿಯ ಜೈಲು ಫಾರ್ಮಿನಲ್ಲಿ ಕೈದಿಗಳ ವಿರುದ್ಧ 3000 ಪೋಲಿಸರು ಮತ್ತು ಸೈನಿಕರನ್ನು ಬಿಟ್ಟು ನಡೆಸಿದ ದಾಳಿಯಲ್ಲಿ, 7 ಕೈದಿಗಳು ಕೊಲ್ಲಲ್ಪಟ್ಟಿದ್ದರು. ಅನೇಕ ರೀತಿಯಲ್ಲಿ ಕೈದಿಗಳಿಗೆ ಹಿಂಸಿಸುತ್ತಿದ್ದರು. ಸಿಐಸಿಐಜಿ ನಡೆಸಿದ ತನಿಖೆಯಲ್ಲಿ ಇವರನ್ನು ಅಪರಾಧಿ ಎಂದು ಪರಿಗಣಿಸಿ, 10 ತಿಂಗಳ ಕಾಲ ಜೈಲಿನಲ್ಲಿ ಇಡಲಾಯಿತು. 2011 ರಲ್ಲಿ ಇವರ ವಿರುದ್ದದ ಆರೋಪಗಳಲ್ಲಿ, 'ಸಾಕ್ಷಿ ಗಳ ಕೊರತೆಯಿಂದಾಗಿ' ಇವರ ಮೇಲಿದ್ದ ಎಲ್ಲಾ ಪ್ರಕರಣಗಳನ್ನು ಕೈ ಬಿಡಲಾಯಿತು.

ಈಗಿನ ಅಧ್ಯಕ್ಷೀಯ ಚುನಾವಣಾ ಪ್ರಚಾರದಲ್ಲಿ, "ಅಪರಾಧ ಮತ್ತು ಭದ್ರತಾ" ಸಮಸ್ಯೆಗಳನ್ನು ಎದುರಿಸುವಲ್ಲಿ ಆದ್ಯತೆ ನೀಡುವುದಾಗಿ ಕಠಿಣ ದಮನಕಾರಿ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಒತ್ತು ಹೇಳಿದ್ದಾರೆ. 2017 ರಲ್ಲಿ, ಸಾಮಾನ್ಯ ಅಪರಾಧ ಗಳಿಗೆ ಅಸಂವಿಧಾನಿಕ ಎಂದು ಘೋಷಿಸಲಾಗಿದ್ದ 'ಮರಣದಂಡನೆ' ಕಾನೂನನ್ನು ಮತ್ತೆ ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದ್ದಾರೆ. ಮೊರೆಲ್ಸ್ ಮತ್ತು ಟೊರೆಸ್ ಅವರಂತೆ, ಸಿಐಸಿಐಜಿ ಯ ಆದೇಶವನ್ನು ಮುಂದುವರಿಸುವುದಿಲ್ಲ ಎಂದು ಹೇಳಿದ್ದಾರೆ. ಇವರು ಗರ್ಭಪಾತ ಮತ್ತು ಸಲಿಂಗಕಾಮಿ ವಿವಾಹದ ವಿರುದ್ಧವಿದ್ದಾರೆ. ಟೊರೆಸ್ ರವರ, ಯು.ಎನ್.ಇ ಪಕ್ಷದವರು ನಡೆಸುವ ಪ್ರತಿಭಟನೆಗಳ ಮೇಲೆ ನಿರ್ಬಂಧ ಹೇರಲು ಕಾನೂನು ತರುವುದಾಗಿ ಬೆದರಿಕೆ ಹಾಕಿದ್ದಾರೆ.

JANASHAKTHI KANNADA VARA PATRIKE August 26-September 1, 2019 Price: Rs. 10/- Date of Publication: 23 August 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕೊಚ್ಚಿ ಹೋದ ಮಲೆಕುಡಿಯರ ನೆಲೆಗಳು ಪಶ್ಚಿಮ ಘಟ್ಟದಲ್ಲಿ ಬಿರುಕುಗಳು





ಬೆಳ್ತಂಗಡಿ ತಾಲೂಕಿನ ಹಲವಾರು ಗ್ರಾಮಗಳು ಭೀಕರ ಪ್ರಕೃತಿ ವಿಕೋಪಕ್ಕೆ ಬಲಿಯಾಗಿವೆ. ತಾಲೂಕಿನ ಒಟ್ಟು ಪ್ರಕೃತಿ ವಿಕೋಪಕ್ಕೆ ಬಲಿಯಾದ 60% ಪ್ರದೇಶಗಳು ಆದಿವಾಸಿ ಸಮುದಾಯ ವಾಸವಿರುವ ಪ್ರದೇಶಗಳಾಗಿವೆ. ಶತಮಾನಗಳಿಂದ ಅಭಿವೃದ್ಧಿ ವಂಚಿತ, ಮೂಲ ಸೌಕರ್ಯಗಳ ಕಡೆಗಣನೆಯಾದ ಆದಿವಾಸಿ ಮಲೆಕುಡಿಯ ಸಮುದಾಯ ವಾಸವಿರುವ ಪ್ರದೇಶಗಳು ಅಕ್ಷರಶಃ ಸಂಪೂರ್ಣ ನಾಶವಾಗಿವೆ. ಇನ್ನೂ ಭೂ ಕುಸಿತ ಸಂಭವಿಸುತ್ತಿದ್ದು ಪಶ್ಚಿಮ ಘಟ್ಟಗಳಲ್ಲಿ ಭೀಕರವಾಗಿ ಭೂಮಿ ಬಿರುಕುಗೊಂಡು ಯಾವುದೇ ಕ್ಷಣದಲ್ಲಿ ಕುಸಿಯುವ ಬೀತಿ ಉಂಟಾಗಿದೆ.

ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಬಾಂಜಾರು ಮಲೆಕುಡಿಯ ಕಾಲನಿಗೆ ಸಂಪರ್ಕಿಸುವ ಏಕೈಕ ಸೇತುವೆ ನೀರಿನಲ್ಲಿ ಕೊಚ್ಚಿ ಹೋಗಿದೆ. ಇಲ್ಲಿನ 47 ಕುಟುಂಬಗಳು ನಾಗರಿಕ ಸಮಾಜದೊಂದಿಗೆ ಸಂಪರ್ಕ ಕಡಿತಗೊಂಡು ಪರ್ಯಾಯ ವ್ಯವಸ್ಥೆಯಾಗುವ ತನಕ ಶೋಚನೀಯ ಪರಿಸ್ಥಿತಿಯಲ್ಲಿ ಕಾಡಿನಲ್ಲಿಯೇ ಇರಬೇಕಾಗಿದೆ. ಕಳೆದ 11 ದಿನಗಳಿಂದ ಚಾರ್ಮಾಡಿ ಘಾಟಿ ಪ್ರದೇಶ ಕುಸಿತದಿಂದ ದಿಗ್ಭಂಧನಗೊಳಗಾಗಿದ್ದ ಈ ಪ್ರದೇಶ ಇದೀಗ ಪರ್ಯಾಯ ವ್ಯವಸ್ಥೆಯಾಗುವ ತನಕ ದಿಗ್ಭಂಧನಕ್ಕೊಳಗಾಗಿದೆ. ಅಂಬಟೆ ಮಲೆಕುಡಿಯ ಕಾಲನಿಗೆ ಸಂಪರ್ಕಿಸುವ ರಸ್ತೆಗೆ ಗುಡ್ಡ ಜರಿದು ಸಂಪೂರ್ಣ ಕಡಿತಗೊಂಡಿದೆ. ಕಾಟಾಜೆ, ಪರ್ಪಳ ಪ್ರದೇಶದ ಮಲೆಕುಡಿಯ ಕಾಲನಿಯ ರಸ್ತೆ ಕೂಡ ಸಂಪರ್ಕ ಕಡಿತಗೊಂಡಿದೆ. ಪರ್ಪಳ ಪ್ರದೇಶದಲ್ಲಿದ್ದ ಡ್ಯಾಂ ಕೂಡ ನೀರಿನಲ್ಲಿ ಕೊಚ್ಚಿ ಹೋಗಿ ಸಂಪರ್ಕ ಇಲ್ಲದಂತಾಗಿದೆ.



ಚಾರ್ಮಾಡಿ ಗ್ರಾಮದ ಅನ್ನಾರು ಮಲೆಕುಡಿಯ ಕಾಲನಿಯ ಏಕೈಕ ಸಂಪರ್ಕ ಸೇತುವೆ ನೀರು ಪಾಲಾಗಿದೆ. ಇಲ್ಲಿನ ಕುಟುಂಬಗಳು ಅಕ್ಷರಶಃ ದಿಗ್ಭಂಧನಗೊಳಗಾಗಿವೆ. ಇಲ್ಲಿನ ಆದಿವಾಸಿ ಕುಟುಂಬಗಳು ಸೇರಿದಂತೆ 80ಕ್ಕೂ ಹೆಚ್ಚು ಕುಟುಂಬಗಳು ಪರ್ಯಾಯ ವ್ಯವಸ್ಥೆ ಇಲ್ಲದೆ ಹೊರ ಸಂಪರ್ಕವಿಲ್ಲದೇ ದೂರ ಉಳಿಯುವಂತಾಗಿದೆ.

ಮಲವಂತಿಗೆ ಗ್ರಾಮದ ಸಿಂಗನಾರು ಮಲೆಕುಡಿಯ ಪ್ರದೇಶದಲ್ಲಿ ಅತ್ಯಂತ ಭೀಕರ ಸ್ವರೂಪದ ಹಾನಿ ಉಂಟಾಗಿದೆ. ಬೆಟ್ಟ ಪ್ರದೇಶದಿಂದ 40 ಅಡಿ ಅಗಲದ ಐದಾರು ಕಿಮೀ ದೂರ ಕೃತಕ ನದಿಯೊಂದು ಸೃಷ್ಟಿಯಾಗಿದ್ದು ಸುಮಾರು 10 ಎಕರೆಗೂ ಹೆಚ್ಚಿನ ಪ್ರಮಾಣದಲ್ಲಿ ತೋಟ, ಗದ್ದೆಗಳು ಸಂಪೂರ್ಣ ನಾಶವಾಗಿದೆ. ಪೆರ್ನಡ್ಕ, ಬೊಮ್ಮನಡ್ಕ, ನಂದಿಕಾಡು ಪ್ರದೇಶದಲ್ಲಿಯೂ ಕೃತಕ ತೊರೆ ಸೃಷ್ಟಿ ಸೇರಿದಂತೆ ಗುಡ್ಡೆ ಜರಿದು ಮನೆ, ತೋಟಕ್ಕೆ ವ್ಯಾಪಕ ಹಾನಿಯಾಗಿದೆ. ಇದೇ ಗ್ರಾಮದ ದೈಪಿತ್ತಿಲು, ಎಲ್ಯರಕಂಡ, ಮಕ್ಕಿ, ಪೆರ್ಲ, ಅಡ್ಯದೋಡಿ, ಅರಸಿನಮಕ್ಕಿ ಪ್ರದೇಶಗಳಲ್ಲಿ ವ್ಯಾಪಕ ಹಾನಿಯುಂಟಾಗಿದೆ. ಈ ಭಾಗದಲ್ಲಿ ಕೃತಕ ನದಿಗಳ ಸೃಷ್ಟಿಯಾಗಿದೆ. ಬೃಹದಾಕಾರಾದ ಬಂಡೆಗಳು, ಮರಗಳು ನೀರಿನಲ್ಲಿ ಕೊಚ್ಚಿ ಬಂದು ಕೃಷಿ ಹಾನಿ ಉಂಟು ಮಾಡಿದೆ. ಇಲ್ಲಿನ ಪರಿಸರವನ್ನು ನೋಡಿದಾಗ ಪಕೃತಿ ವಿಕೋಪದ ಭಯಾನಕ ದೃಶ್ಯ ಕಣ್ಣಿಗೆ ರಾಚುವಂತಾಗಿದೆ. ಮಲವಂತಿಗೆ ಗ್ರಾಮದ ಪಾತಳಿಕೆ ಎಂಬ ಕುದುರೆಮುಖ ರಾಷ್ಟ್ರೀಯ ಉಧ್ಯಾನವನದೊಳಗೆ ಬಾಲಕೃಷ್ಣ ಮಲೆಕುಡಿಯ ಎಂಬವರ ಮನೆಯು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಅವರ ಸುಮಾರು ಐದಾರು ಎಕ್ರೆ ಜಮೀನಿನಲ್ಲಿ ಸಮೀಪದ ನದಿಯ ನೀರು ಹರಿಯುತ್ತಿದ್ದು ಸುಮಾರು 300ಕ್ಕಿಂತಲೂ ಹೆಚ್ಚು ಅಡಿಕೆ ಮರಗಳು ಧರಶಾಯಿಯಾಗಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ಹಲವಾರು ದಶಕಗಳ ಬಳಿಕ ಕಂಡು ಕೇಳರಿಯದ ರೀತಿಯಲ್ಲಿ ವ್ಯಾಪಕವಾಗಿ ಪ್ರಕೃತಿ ವಿಕೋಪದಿಂದ ಹಾನಿಯಾಗಿದೆ. ಸುಮಾರು 10 ಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ಅಂದಾಜು 600 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ. ಬೆಳ್ತಂಗಡಿ ತಾಲೂಕಿನ ಪುನರ್ನಿರ್ಮಾಣಕ್ಕಾಗಿ ಕನಿಷ್ಠ 300 ಕೋಟಿ ರೂಪಾಯಿಗಳನ್ನು ತುರ್ತಾಗಿ ರಾಜ್ಯ ಸರ್ಕಾರ ಮಂಜೂರು ಮಾಡಬೇಕಾದ ಅಗತ್ಯವಿದೆ. ಜುಜುಬಿ ಅನುದಾನ ನೀಡುವ ಬದಲಾಗಿ ವೈಜ್ಞಾನಿಕ ಅಧ್ಯಯನ ನಡೆಸಿ ಸೂಕ್ತ ರೀತಿಯಲ್ಲಿ ಪರಿಹಾರ ನೀಡಬೇಕು. ಬಾಂಜಾರು, ಅನ್ನಾರು ಮಲೆಕುಡಿಯ ಕಾಲನಿಗಳಿಗೆ ಅತ್ಯಂತ ತ್ವರಿತವಾಗಿ ಪರ್ಯಾಯ ರಸ್ತೆ ನಿರ್ಮಾಣ ಮಾಡುವ ಅಗತ್ಯವಿದೆ. ಬಾಂಜಾರು ಮಲೆಕುಡಿಯ ಕಾಲನಿಗೆ ಪರ್ಯಾಯ ರಸ್ತೆಗಾಗಿ ಈಗಾಗಲೇ ಸರ್ವೆ ಕಾರ್ಯ ನಡೆಸಲಾಗಿದ್ದು, ಈ ರಸ್ತೆ ನಿರ್ಮಾಣಕ್ಕಾಗಿ ಜಿಲ್ಲಾಡಳಿತ ತ್ವರಿತ ಕ್ರಮ ಕೈಗೊಂಡಿದ್ದು ಆಗಸ್ಟ್ 23 ರಿಂದ ಪರ್ಯಾಯ ನೂತನ ರಸ್ತೆ ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದೆ. ಇದು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಕಳೆದ ಒಂದು ವರ್ಷದ ನಿರಂತರ ಹೋರಾಟಕ್ಕೆ ಸಂದ ಜಯವಾಗಿದೆ.

ಮಲೆಕುಡಿಯರೇ ನಿರ್ಮಿಸಿದ ಸೇತುವೆ

ಬಾಂಜಾರು ಮಲೆಕುಡಿಯ ಕಾಲನಿಗೆ ಸಂಪರ್ಕಿಸುವ ಏಕೈಕ ಸೇತುವೆ ಆಗಸ್ಟ್ 09 ರ ಭೀಕರ ಮಳೆಗೆ ಕೊಚ್ಚಿಕೊಂಡು ಹೋಗಿ 47 ಮಲೆಕುಡಿಯ ಕುಟುಂಬಗಳು ದಿಗ್ಬಂಧನಗೊಳಗಾಗಿದ್ದು, ಸರ್ಕಾರದ ಯಾವುದೇ ಅನುದಾನಕ್ಕೆ ಕಾಯದೆ ಸ್ಥಳೀಯ ಮಲೆಕುಡಿಯ ಜನರೇ ತಾತ್ಕಾಲಿಕವಾಗಿ ಕಾಲು ಸಂಕವನ್ನು ನಿರ್ಮಿಸಿ ಇತರರಿಗೆ ಮಾದರಿಯಾಗಿದ್ದಾರೆ. ಇದೀಗ ಇದೇ ಕಾಲು ಸಂಕದ ಮೂಲಕ ಕಾಲನಿಗೆ

ಪುಟ 14 ಕ್ಕೆ

ನೆರೆ ಸಂತ್ರಸ್ತ ಗ್ರಾಮಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಿಟ್ ವಿತರಣೆ

ನೆರೆ ಹಾವಳಿಯಿಂದಾಗಿ ವಿದ್ಯಾಥಿಗಳ ಪುಸ್ತಕ, ಬ್ಯಾಗ ಮುಂತಾದ ಶೈಕ್ಷಣಿಕ ಸಾಮಗ್ರಿಗಳು ಬಹುತೇಕ ನೀರಿನಲ್ಲಿ ತೋಯ್ದು ಹಾಳಾಗಿದ್ದು ಅವರ ಮುಂದಿನ ಶಿಕ್ಷಣಕ್ಕೆ ತೊಂದರೆಯಾಗಿರುವುದನ್ನು ಗಮನಿಸಿ ಸಿಐಟಿಯು ರಾಜ್ಯ ಸಮಿತಿ ಮತ್ತು ಬೆಂಗಳೂರಿನ ಸನ್‌ಸೇರಾ ಇಂಜನೀಯರಿಂಗ್ ಕಾರ್ಮಿಕರ ಸಂಘದಿಂದ ಮಲಪ್ರಭಾ ಮತ್ತು ಬೆಣ್ಣಿಹಳ್ಳ ನೆರೆ ಹಾವಳಿಂದ ತೀವ್ರ ಸಂಕಷ್ಟಕ್ಕೀಡಾದ ರೋಣ ತಾಲೂಕಿನ ಗುಲಗುಂದಿ, ಮೆಣಸಗಿ, ಹೊಳೆಮಣ್ಣೂರ, ಗಾಡಗೋಳಿ ಗ್ರಾಮಗಳಲ್ಲಿರುವ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳ ಒಟ್ಟು 1200 ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್, ನೋಟುಪುಸ್ತಕ, ಕಂಪಾಸ್ ಬಾಕ್ಸ್, ಪೆನ್ ಸೇರಿದಂತೆ ಐದು ಲಕ್ಷ ರೂಗಳ ಮೌಲ್ಯದ ಶೈಕ್ಷಣಿಕ ಕಿಟ್‌ಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಧಾರವಾಡ ವಿಮಾ ನೌಕರರ ಸಂಘದಿಂದ ಮೂರು ಅಂಗನವಾಡಿಗಳ 70 ಮಕ್ಕಳಿಗೆ ಸಮವಸ್ತ್ರಗಳನ್ನು ವಿತರಿಸಲಾಯಿತು. ಸಿಐಟಿಯು ನಿಂದ ಆ ಗ್ರಾಮಗಳ ರೈತರ ಬೇಡಿಕೆಯಂತೆ ಸಧ್ಯದಲ್ಲಿಯೇ ಮೇವು, ಹೊಟ್ಟು ಕೂಡಾ ಕಳಿಸಲಾಗುತ್ತಿದೆ

ಸಿಐಟಿಯು ಸಂಘಟನೆಯ ಈ ನೆರವನ್ನು ಅತ್ಯಂತ ಖುಷಿಯಿಂದ ಸ್ವೀಕರಿಸಿದ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಇಂತಹ ಸಂಕಷ್ಟದ ಪರಸ್ಥಿತಿಯಲ್ಲಿ ಶಾಲೆಗಳನ್ನು ಸ್ಥಳಾತರಿಸಿದ್ದರಿಂದ ಮಕ್ಕಳ ಹಾರಾತಿ ಉತ್ತಮ ಪಡಿಸಲು ಮತ್ತು ಅವರ ಮುಂದಿನ ಶಿಕ್ಷಣವನ್ನು ಸರಿಯಾಗಿ ಮುಂದುವರೆಸಲು ಶೈಕ್ಷಣಿಕ ಕಿಟ್‌ನ ನೆರವು ತುಂಬಾ ಸಹಕಾರಿಯಾಗಿದೆ ಎಂದರು.

ಈ ನೆರೆ ಸಂತ್ರಸ್ತ ಪ್ರದೇಶಗಳಿಗೆ ಬೇಟಿ ಮತ್ತು ಸಾಮಗ್ರಿಗಳ ವಿತರಣೆ ನಿಯೋಗದಲ್ಲಿ ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮಿನಾಕ್ಷಿಸುಂದರಂ, ಸಿಪಿಐಎಂ ರಾಜ್ಯ ಮುಖಂಡರಾದ ಕೆ.ಎನ್. ಉಮೇಶ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ, ರೈತ ಮುಖಂಡ ಬಿ.ಎಸ್.ಸೊಪ್ಪಿನ ಸನ್‌ಸೇರಾ ಇಂಜನೀಯರಿಂಗ್ ಕಾರ್ಮಿಕರ ಸಂಘದ ಸ್ವಾಮಿ, ಹೇಮಂತ, ಮಂಜುನಾಥ ಮತ್ತು ಸ್ಥಳೀಯ ಮುಖಂಡರಾದ ಮಹೇಶ ಹಿರೇಮಠ, ಎಂ.ಎಸ್.ಹಡಪದ, ಬಾಲು ರಾಠೋಡ, ಬಸವರಾಜ ಮಂತೂರ, ಪೀರು ರಾಠೋಡ, ಫಯಾಜ್ ತೋಟದ, ಶಿವು ಚವ್ಹಾಣ, ಸಂಕಪ್ಪ ಕುರಹಟ್ಟಿ, ಕೃಷ್ಣಪ್ಪ ಮಾಡೊಳ್ಳಿ, ಹನಮಂತ ತಾಳಿ, ಮೈಲಾರೆಪ್ಪ ಮಾದರ ಮುಂತಾದವರಿದ್ದರು.

– ಮಹೇಶ ಪತ್ತಾರ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**